ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೮ ಡಿಸೆಂಬರ್--೨೦೦೭ ಸಂಚಿಕೆ-೫



ಪ್ರಜ್ವಲಿಸುತ್ತಿರುವ ಭೂ ಸಮಸ್ಯೆ ಪರಿಹಾರ ಎಂತು?

ಜನಪದ ವಿಚಾರದಲ್ಲಿ

ಡಿಸೆಂಬರ್-೨೦೦೬

೧) ಪ್ರಜ್ವಲಿಸುತ್ತಿರುವ ಭೂ ಸಮಸ್ಯೆ ಪರಿಹಾರ ಎಂತು? ಪುಟ...೩

- ಸುರೇಂದ್ರ ಕೌಲಗಿ

ಪ್ರಪಂಚದಲ್ಲಿಯು ಅತ್ಯಂತ ಶ್ರೀಮಂತ ಮನುಷ್ಯ ಮುಖೇಶ್ ಅಂಬಾನಿಯಂಥವರನ್ನು ಬೆಳೆಸಿದ ಭಾರತದಲ್ಲಿ ದಿನಕ್ಕೆ ಒಂದೊಪ್ಪತ್ತಿನ ಊಟವೂ ಇಲ್ಲದಿರುವಂಥ ಪ್ರಜಾಕೋಟಿಯೂ ಇದೆ. ಶ್ರೀಮಂತ ಮತ್ತು ಬಡವರ ಮಧ್ಯದ ಅಂತರವನ್ನು ಕಡಿಮೆ ಮಾಡಬೇಕಾದರೆ ದೇಶದ ಭೂ ಸಮಸ್ಯೆ ಪರಹಾರಗೊಳ್ಳಬೇಕಾದುದು ಅಗತ್ಯ. ಸರ್ಕಾರದ ತಪ್ಪು ಅಭಿವೃದ್ಧಿ ಮತ್ತು ಆರ್ಥಿಕ ನೀತಿಗಳಿಂದಾಗಿ ಭೂ ಸಮಸ್ಯೆ ದಿನಕಳೆದಂತೆ ಪ್ರಜ್ವಲಿಸುತ್ತಿದೆ. ಈ ಗಂಭೀರ ವಿಷಯದತ್ತ ಓದುಗರ ಗಮನ ಸೆಳೆಯುತ್ತದೆ ಈ ಲೇಖನ.

೨) ಕಲೆ, ಸಾಹಿತ್ಯದ ಬಗ್ಗೆ ಗಾಂಧೀ ಮತ್ತು ಟಾಗೋರ್ ಪುಟ...೬

- ಗುರುದಾಯಾಳ್ ಮಲ್ಲಿಕ್

ಜೀವನದ ಎರಡು ಮುಖ್ಯ ಕ್ಷೇತ್ರಗಳಾದ ಕಲೆ ಮತ್ತು ಸಾಹಿತ್ಯದ ಬಗ್ಗೆ ಕೃತಿಯನ್ನೇ ಸದಾ ಜಪಿಸುತ್ತಿದ್ದ ಗಾಂಧೀ ಮತ್ತು ಸದಾ ಕಲೆಯನ್ನೇ ಆರಾಧಿಸುತ್ತಿದ್ದ ಟಾಗೋರ್ ಇವರಿಬ್ಬರ ವಿಚಾರಗಳು ಈ ಲೇಖನದಲ್ಲಿ ಮೂಡಿ ಬಂದಿವೆ.

೩) ಜಾಗತೀಕರಣದ ಒಂದು ದಶಕದ ಸಿಂಹಾವಲೋಕನ ಪುಟ...೯

- ಕಾರ್ಮಿಕ ದೃಷ್ಟಿಕೋನ ಸಾಭಾರ

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳು ಜಾರಿಯಾಗಿ ೧೫ ವರ್ಷಗಳೇ ಆಗಿವೆ. ಈ ನೀತಿಗಳನ್ನು ಮುಂದುವರೆಸುವ ಮುನ್ನ ಅವುಗಳಿಂದಾಗಿರುವ ಸಮಸ್ಯೆಗಳನ್ನು ಕುರಿತು ಸಿಂಹಾವಲೋಕನ ಮಾಡುವುದು ಅಗತ್ಯ. ಅದಕ್ಕಾಗಿ ಕೆಲವು ಮೂಲಭೂತಸಂಗತಿಗಳನ್ನು ಓದುಗರಿಗೆ ಈ ಲೇಖನ ಒದಗಿಸುತ್ತದೆ.

೪) ದೇಶದ ಹಿತದೃಷ್ಟಿಯಿಂದ ಖಾದಿ ಉಳಿಯಲೇ ಬೇಕು. ಪುಟ...೧೫

- ಸುರೇಂದ್ರ ಕೌಲಗಿ

ಚಿಕ್ಕದು ಸುಂದರ ಮತ್ತು ಚಿಕ್ಕದು ಸಾಧ್ಯ ಎಂಬ ಉದ್ಘೋಷದ ಆಶಯವನ್ನು ಇಂದಿನ ಸಂಕೀರ್ಣ ತಾಂತ್ರಿಕ ಯುಗದಲ್ಲಿ ಖಾದಿ ಮತ್ತು ಚರಕ ಈಡೇರಿಸುತ್ತವೆಂಬುದನ್ನು ತಿಳಿಸುವ ಪ್ರಯತ್ನ ಈ ಲೇಖನದಲ್ಲಿದೆ.

೫) ಭಾಷೆಗಳು ಸೃಷ್ಟಿಸುತ್ತಿರುವ ಪ್ರಶ್ನೆಗಳು. ಪುಟ...೨೪

- ವಿ.ಎನ್. ಲಕ್ಷ್ಮೀನಾರಾಯಣ

ಭಾಷೆ ಎಂದಾಗ ತಕ್ಷಣ ನಮಗೆ ಅದರ ಮೂರು ಸ್ವರೂಪಗಳು ನೆನಪಾಗುತ್ತವೆ. ಒಂದು; ಮಾತೃಭಾಷೆ, ಎರಡು; ಸಂಪರ್ಕ ಬಾಷೆ, ಮೂರು; ವಾಣಿಜ್ಯ ಭಾಷೆ. ಭಾಷೆಯ ಈ ವಿಂಗಡಣೆ ನಮ್ಮ ದೇಶದಲ್ಲಿ ಎಂಥೆಂಥ ಸಮಸ್ಯೆಗಳನ್ನು ಹುಟ್ಟುಹಾಕಿದೆ ಎಂಬುದರ ಚಿಂತನೆ ಈ ಲೇಖನದಲ್ಲಿದೆ.

೬) ಜನಪದ ವ್ಯಕ್ತಿ : ಡಾ. ಶರಣ್ ಪಾಟೀಲ್ ಪುಟ...೩೨

- ಸುರೇಂದ್ರ ಕೌಲಗಿ

೭) ಜನಪದ ನಿಲಯದ ಅಂತರಂಗದಲ್ಲಿ ...... ೪೯ ಪುಟ...೩೪

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಡಿಸೆಂಬರ್-೨೦೦೭

ಸಂಪುಟ-೮

ಸಂಚಿಕೆ-೫

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧೪೩೧

ಜಿಲ್ಲಾ ಮಂಡ್ಯ

☎ ೦೮೨೩೬ ೨೯೮೭೫೪

e-mail - janapada@yahoo.com

ವಿಜ್ಞಾನ, ಕಲೆ, ಶಾಂತಿ

ಸಾಮ್ರಾಜ್ಯ ದಾಹದಲಿ ರಣದ
ನಂಜುರಿಗರೆದು,
ನೊಂದು, ಕುದಿದೀ ಭುವಿಗೆ
ತಂಪ ಸಿಂಪಿಸಿ, ಬಾರ!

ರಾಜ್ಯದಾಹವ ನೀಗಿ,
ಮನುಜರೆದೆಯಾಳದಲಿ
ಮಧುರ ಬಾಂಧವ್ಯತೆಯ
ಮಾನವತ್ವವ ನೀಡಿ,
ಕಲೆಯ ಕಾಂತಿಯ ನಡುವೆ
ಹೇ, ಶಾಂತಿ, ಬಾರ!

ಯುಗಯುಗದ ಬಾಳಿಕೆಯ
ಚೆಲುವಿಕೆಯ ಚಿಗುರಿನಲಿ
ಆತ್ಮ ವಿಕಸಿಸುವಂತೆ
ಹರಸು ಬಾರ ತಾಯೆ,
ಮೂಡಿ, ಮೊಳಗುವ ನಮ್ಮ ನಾಗರಿಕತೆಯ.

ಇಂದು ವಿಜ್ಞಾನಯುಗ. ಆದೊಡೇಂ?
ಮೊಳೆಯುತಿಹ ಸತ್ಯಶೋಧನೆಯೆಲ್ಲ
ಕೋಟಿ ಮಾನವರೆದೆಯ
ಕಲ್ಯಾಣಕರೆವಂತೆ ಹಾಡಿ ಬಾ ಗೀತೆಯನು;

ಉದ್ಯೋಗ ವೈಭವಕೆ
ಮಾನವತ್ವವ ತರಲು
ವಿಜ್ಞಾನ, ಕಲೆ ಎರಡು ಒಂದು ನುಡಿಯೊಳಗುಲಿವ
ಮಧುರ ವೀಣೆಯ ಮಿಡಿದು ಹೇ, ಶಾಂತಿ, ಬಾರ!

– ಎಸ್.ಎಸ್.ವೀರಪ್ಪ

ವಿಚಾರ ದೀಪ್ತಿ

ಇತ್ತೀಚಿಗೆ ಹೊಸ ದೆಹಲಿಯಲ್ಲಿ ನಾಲ್ಕು ದಿನಗಳ ವಿಶ್ವ ಶೌಚಾಲಯ ಉತ್ತುಂಗ ಸಭೆ ನಡೆಯಿತು. ಅದರಲ್ಲಿ ೪೦ ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಪ್ರತಿಯೊಬ್ಬರಿಗೂ ಶೌಚಾಲಯದ ಸೌಲಭ್ಯ ದೊರೆಯುವಂತೆ ಸರ್ಕಾರಗಳ ಮೇಲೆ, ಮತ್ತು ಇತರ ಭಾಗೀದಾರ ಸಂಸ್ಥೆಗಳ ಮೇಲೆ ಒತ್ತಡ ತರಬೇಕೆಂದು ಈ ಪ್ರತಿನಿಧಿಗಳು ಸಂಕಲ್ಪ ಕೈಗೊಂಡರು. ಶೌಚಾಲಯದ ಸೌಲಭ್ಯವಿಲ್ಲದ ೨.೬ ಬಿಲಿಯನ್ ಸಂಖ್ಯೆಯ ಜನರಲ್ಲಿ ಅರ್ಧದಷ್ಟು ಜನ ಚೀನಾ ಮತ್ತು ಭಾರತದಲ್ಲಿದ್ದಾರೆ. ನೀರು ಮತ್ತು ಮಣ್ಣನ್ನು ಅಶುಚಿಗೊಳಿಸದೆ ಇರುವಂಥ ಶೌಚಾಲಯ ಈ ಜನಕ್ಕೆ ಲಭ್ಯವಿಲ್ಲ. ಇಂಥಾ ಜನರ ಸಂಖ್ಯೆಯನ್ನು ೨೦೧೫ರ ಹೊತ್ತಿಗೆ ಕಡಿಮೆ ಮಾಡಬೇಕೆಂದರೆ ಜಗತ್ತಿನಲ್ಲಿ ಪ್ರತಿದಿನ ೧೦ ಲಕ್ಷ ಶೌಚಾಲಯಗಳನ್ನು ನಿರ್ಮಿಸಬೇಕಾಗುತ್ತದೆ. ಇದನ್ನು ವಿಶ್ವಸಂಸ್ಥೆಯು ತನ್ನ ಸಹಸ್ರಮಾನ ಅಭಿವೃದ್ಧಿ ಯೋಜನೆಗಳಲ್ಲಿಯ ಒಂದು ಗುರಿಯನ್ನಾಗಿರಿಸಿಕೊಂಡಿದೆ.

ಈ ಗುರಿಗಳನ್ನು ತಲುಪಬೇಕಾದರೆ ಭಾರತ ಕಡಿಮೆ ಬೆಲೆಯ ಪರಿಸರ ಪ್ರೇಮಿ ಸುಲಭವಾಗಿ ಜಾರಿಗೊಳಿಸಬಹುದಾದ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕು. ಇವು ನಗರಗಳಲ್ಲಿರುವ ಕೊಚ್ಚೆ ಪ್ರದೇಶಗಳಿಗೆ ವಿಶೇಷವಾಗಿ ಪ್ರಯೋಜನಕಾರಿಯಾಗಿರುತ್ತವೆ. ಏಕೆಂದರೆ ಈ ಪ್ರದೇಶಗಳಲ್ಲಿಯೇ ನೈರ್ಮಲ್ಯ ಮತ್ತು ಆರೋಗ್ಯ ವ್ಯವಸ್ಥೆ ಅತ್ಯಂತ ಹೆಚ್ಚು ಹದಗೆಟ್ಟಿರುತ್ತದೆ. ಪಾಶ್ಚಿಮಾತ್ಯ ರೀತಿಯ ಮಲ ತೊಡೆದುಹಾಕುವ ಪದ್ಧತಿ ಮತ್ತು ಚರಂಡಿಗಳನ್ನು ಹಾಗೂ ಪುನಃ ಉಪಯೋಗಿಸುವ ಹಾಗೂ ಪುನಃ ಪರಿವರ್ತನೆಯ ಸಾಧ್ಯತೆಯಿರುವ ನೈರ್ಮಲೀಕರಣದ ಪದ್ಧತಿಗಳನ್ನು ಅಳವಡಿಸಿಕೊಳ್ಳಕೂಡದೆಂಬ ಸಲಹೆಗಳು ಆ ಸಭೆಯಲ್ಲಿ ಮಂಡಿತವಾದವು. ಭಾರತೀಯ ರೈಲುಗಳು ಕೂಡಾ ತೀಕ್ಷ್ಣ ಟೀಕೆಗೆ ಒಳಗಾದವು. ಏಕೆಂದರೆ ಪ್ರತಿನಿತ್ಯ ಸುಮಾರು ೮,೦೦೦ ರೈಲುಗಳು ಮೂರು ಲಕ್ಷ ಲೀಟರಿನಷ್ಟು ಮಾನವ ತ್ಯಾಜ್ಯವನ್ನು ಹೊರಕ್ಕೆ ತಳ್ಳುತ್ತವೆ. ಇದಕ್ಕೆ ಪರ್ಯಾಯವಾಗಿ ವಿಮಾನದಲ್ಲಿರುವ ನಿರ್ವಾತ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕೆಂದು ಸೂಚಿಸಲಾಯಿತು. ರೈಲ್ವೆ ಮಂತ್ರಾಲಯವು ಈ ವಿಮರ್ಶೆಯನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಸಲಹೆಗಳನ್ನು ಅನುಷ್ಠಾನಕ್ಕೆ ತರಬೇಕು. ನೈರ್ಮಲ್ಯತೆಯ ದೋಷದಿಂದಾಗಿ ನೀರಿನ ಮೂಲಕ ಹುಟ್ಟುವ ರೋಗಗಳಿಂದ ಪ್ರತಿವರ್ಷ ಪ್ರಪಂಚದಾದ್ಯಂತ ಲಕ್ಷಾವಧಿ ಜನರು ಸಾಯುತ್ತಾರೆ. ಆದ್ದರಿಂದ ಪ್ರತಿಯೊಂದು ರಾಜ್ಯದ ನಾಗರಿಕ ಸೇವಾಧಿಕಾರಿಗಳು ಉತ್ತಮ ಪ್ರಕಾರದ ಶೌಚಾಲಯ ಪದ್ಧತಿ ಭಾರತದ ದೊಡ್ಡ ಜನಸಂಖ್ಯೆಯನ್ನು ತಲುಪುವಂತೆ ಮಾಡಬೇಕು. 'ಸುಲಭ್-ಅಂತಾರಾಷ್ಟ್ರೀಯ'ದ ಪ್ರಯತ್ನಗಳಿಂದ ಪಾಠ ಪಡೆಯಬಹುದು. ಸುಲಭ ಸಂಕೀರ್ಣಗಳು ಸುಮಾರು ೫೦,೦೦೦ ಪೌರಕಾರ್ಮಿಕರು ಮಾನವ ತ್ಯಾಜ್ಯವನ್ನು ಸ್ವಚ್ಛಮಾಡುವ ಮತ್ತು ಹೊತ್ತುಕೊಂಡು ಹೋಗುವಂಥ ಹೀನ ಪದ್ಧತಿಯನ್ನು ತಪ್ಪಿಸಿದೆ. ಆ ಸಂಸ್ಥೆಯು ೫,೫೦೦ ಕ್ಕಿಂತಲೂ ಹೆಚ್ಚು ಸಮುದಾಯ ಶೌಚಾಲಯ ಸಂಕೀರ್ಣಗಳನ್ನು ಸ್ಥಾಪಿಸಿದೆ. ಅಲ್ಲಿ ಹಣ ಕೊಟ್ಟು ಸೇವೆಯನ್ನು ಪಡೆಯಬಹುದಾಗಿದೆ. ಅಲ್ಲದೆ ಅದು ಹತ್ತು ಲಕ್ಷ ಶೌಚಾಲಯಗಳನ್ನು ಖಾಸಗಿ ಮನೆಯಲ್ಲಿ ಸ್ಥಾಪಿಸಿದೆ. ಸುಧಾರಿತ ಶೌಚಾಲಯ ಪದ್ಧತಿಗಳಿಂದ ಮತ್ತು ಉತ್ತಮ ಕುಡಿಯುವ ನೀರಿನ ವ್ಯವಸ್ಥೆಗಳಿಂದ ದೇಶಕ್ಕೆ ಪ್ರತಿ ವರ್ಷ ಜನರ ಖಾಯಿಲೆಗಳು ಮತ್ತು ಕೆಲಸದ ದಿನಗಳ ನಷ್ಟ ಇತ್ಯಾದಿಗಳನ್ನು ತಪ್ಪಿಸುವುದರ ಮೂಲಕ ಕೋಟ್ಯಾವಧಿ ಹಣವನ್ನು ಉಳಿಸಬಹುದಾಗಿದೆ. ಭಾರತ ಅಭಿವೃದ್ಧಿ ಹೊಂದಿದ ದೇಶವಾಗಬೇಕೆಂದು ಬಯಸುವುದಾದಲ್ಲಿ ದೇಶದ ನೈರ್ಮಲ್ಯ ವ್ಯವಸ್ಥೆ ಇಂದಿಗಿಂತ ಹೆಚ್ಚಿನ ಗಮನವನ್ನು ಪಡೆಯಬೇಕಾದುದು ಅಗತ್ಯ

ಪ್ರಜ್ವಲಿಸುತ್ತಿರುವ ಭೂ ಸಮಸ್ಯೆ, ಪರಿಹಾರ ಎಂತು?

- ಸುರೇಂದ್ರ ಕೌಲಗಿ

ಆಕಾಂಕ್ಷೆಗಳಿಗೆ ಆಕಾಶ ಸೀಮಿತವಲ್ಲ, ಭೂಮಿ ಸೀಮಿತ.

ದಿನೇ ದಿನೇ ಭಾರತದಲ್ಲಂತೂ ಭೂ ಸಮಸ್ಯೆ ಹೆಚ್ಚು ಪ್ರಜ್ವಲಿತಗೊಳ್ಳುತ್ತ ಹೋಗುತ್ತಿದೆ. ಜನಸಂಖ್ಯಾ ಆಸ್ಫೋಟ ಮತ್ತು ಜಾಗತೀಕರಣಾಧಾರಿತ ಕೈಗಾರಿಕೆ ಭೂ ಸಮಸ್ಯೆ ಉಲ್ಬಣಗೊಳ್ಳುವುದಕ್ಕೆ ಕಾರಣವಾಗಿದೆ. ಈ ಕೂಡಲೆ ಕೈಗಾರಿಕರಣ ನೀತಿಯನ್ನೂ, ಅಭಿವೃದ್ಧಿ ನೀತಿಯನ್ನೂ ಜನಪರವಾಗಿ ಮಾಡದೆ ಹೋದರೆ ಭೂ ಸಮಸ್ಯೆ ತೀವ್ರಗೊಂಡು ಸಮಾಜದಲ್ಲಿ ಅಶಾಂತಿ, ಹಿಂಸೆ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ. ಇದರ ಸಂಕೇತವಾಗಿ ಈಗ ನಮ್ಮ ಮುಂದೆ ಪಶ್ಚಿಮ ಬಂಗಾಲ ರಾಜ್ಯದ ನಂದಿ ಗ್ರಾಮದ ಘಟನೆಗಳು ಇವೆ.

ತಪ್ಪು ಅಭಿವೃದ್ಧಿ ನೀತಿಯಿಂದಾಗಿ ಅಂದರೆ ದೊಡ್ಡ ಅಣೆಕಟ್ಟುಗಳ ನಿರ್ಮಾಣ, ವಿಶೇಷ ಆರ್ಥಿಕ ವಲಯಗಳ ಸ್ಥಾಪನೆ, ವಿದ್ಯುತ್ ಸ್ಥಾವರಗಳ ಸ್ಥಾಪನೆ ಇತ್ಯಾದಿ ಬೃಹತ್ ಯೋಜನೆಗಳು ಚಿಕ್ಕ ಹಿಡುವಳಿಯ ಅಸಂಖ್ಯಾತ ಸಣ್ಣ ರೈತರನ್ನು ಒಕ್ಕಲೆಬ್ಬಿಸಿ ಅವರನ್ನು ಅನಾಥರನ್ನಾಗಿ ಮಾಡುತ್ತಿವೆ. ಒಕ್ಕಲೆಬ್ಬಿಸಲ್ಪಟ್ಟ ರೈತರ ಮತ್ತು ಇತರರ ಕಷ್ಟದ ಕೂಗು ನರಿಯ ಕೂಗಿನಂತಾಗಿದೆ. ನರಿಯ ಕೂಗು ಗಿರಿಯನ್ನು ಮುಟ್ಟೀತೆ ಎಂಬ ಗಾದೆಯಂತೆ ಒಕ್ಕಲೆದ್ದವರ ನೊಂದ ಕೂಗು ಸರ್ಕಾರವನ್ನು ಮುಟ್ಟೀತೆ ಎಂದು ಕೇಳಬೇಕಾಗಿದೆ. ಕೇಳದಿದ್ದರೆ ಕೇಳುವಂತೆ ಮಾಡುವ ಬಗೆ ಹೇಗೆ ಎಂಬುದೇ ಇಂದಿನ ಪ್ರಶ್ನೆಯಾಗಿದೆ, ಸವಾಲಾಗಿದೆ. ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ದೇಶದಲ್ಲಿ ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿ ಯುಗ ಪ್ರಾರಂಭವಾಯಿತು. ಅಂದರೆ ಎಲ್ಲವೂ ಬೃಹತ್ ಪ್ರಮಾಣದಲ್ಲಿ ಯೋಜಿತಗೊಳ್ಳಬೇಕೆಂಬ ನೀತಿ. ಈ ನೀತಿಯ ಪರಿಣಾಮ ಜನ ಪಲ್ಲಟತೆ, ವಾಸ ಸ್ಥಾನಗಳ ಉನ್ಮೂಲತೆ. ದೇಶದ ವಿಭಜನೆಯಾದಾಗ ಯಾವ ಪ್ರಮಾಣದಲ್ಲಿ ಸಮಾಜದಲ್ಲಿ ಅಲ್ಲೋಲ ಕಲ್ಲೋಲತೆಯುಂಟಾಯಿತೋ ಅದಕ್ಕಿಂತ ದೊಡ್ಡ ಪ್ರಮಾಣದಲ್ಲಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳಿಂದ ಆಗುತ್ತಿದೆ. ಆದರೆ ಈ ಕಾರಣದಿಂದ ಉತ್ಪೀಡಿತರಾದ ಜನರು ಸಂಘಟಿತರಾಗದೆ ಇರುವುದರಿಂದ ಅವರ ಆರ್ತ ಧ್ವನಿ ಗಾಳಿಯಲ್ಲಿ ಹಾರಿಹೋಗುತ್ತಿದೆ. ಆದರೂ ಕೂಡ ಬಡವರ ಬಗ್ಗರ ತುತ್ತಿನ ಚೀಲದೊಳಗಿನ ಕೋಪದ ಕಿಚ್ಚು ಕಾಡ್ಗಿಚ್ಚಿನಂತೆ ಹರಡುವುದನ್ನು ಯಾರೂ ತಪ್ಪಿಸಲಾರರು. ದೂರದ ನಂದಿ ಗ್ರಾಮದಲ್ಲಿ ಉಂಟಾಗಿರುವ ಸಮಸ್ಯೆಗೂ, ಘಟಿಸಿದ ನರಮೇಧಕ್ಕೂ, ಭೂ ಸಮಸ್ಯೆಗೂ ನೇರ ಸಂಬಂಧವಿದೆ. ಟಾಟಾ ಕಂಪನಿಯು ಸಣ್ಣ ಕಾರುಗಳ ತಯಾರಿಕೆಯ ಕೈಗಾರಿಕೆ ಸ್ಥಾಪಿಸಲು ನಂದಿ ಗ್ರಾಮ ಮತ್ತು ಸುತ್ತಲಿನ ಇತರ ಗ್ರಾಮಗಳಲ್ಲಿ ಆರು ಸಾವಿರ ಎಕರೆ ಭೂಮಿಯನ್ನು ಬೇಡಿತು. ಪಶ್ಚಿಮ ಬಂಗಾಳ ಸರ್ಕಾರವು ಅಭಿವೃದ್ಧಿ ಮತ್ತು ಸ್ಥಳೀಯರಿಗೆ ದೊರೆಯಬಹುದಾದ ಉದ್ಯೋಗವಕಾಶ, ರಾಜ್ಯ ಖಜಾನೆಗೆ ಹರಿದು ಬರಬಹುದಾದ ಆದಾಯ ಇತ್ಯಾದಿ ಅಂಶಗಳ ಕಣ್ಣು ಪಟ್ಟಿಗಳನ್ನು ಕಟ್ಟಿಕೊಂಡು ಅಷ್ಟು ವಿಶಾಲವಾದ ಭೂಮಿಯನ್ನು ರೈತರಿಂದ ದೊಡ್ಡ

ಮೊತ್ತದ ಹಣದ ಪರಿಹಾರದ ಆಮಿಷ ತೋರಿಸಿ ಕಿತ್ತುಕೊಂಡಿತು. ಈಗ ಆ ಭೂಮಿಯನ್ನು ಕಳೆದುಕೊಂಡಿರುವ ರೈತರು ಮತ್ತು ಇತರರು ಆ ಕೈಗಾರಿಕೆಯ ವಿರುದ್ಧವೇ, ಸರ್ಕಾರದ ವಿರುದ್ಧವೇ ದೊಂಬಿ ಎದ್ದಿದ್ದಾರೆ. ಒಕ್ಕಲೆದ್ದ ಜನರ ಸಮಸ್ಯೆಯನ್ನು ಮಾನವೀಯತೆಯಿಂದೊಡಗೂಡಿದ ಸಹಾನುಭೂತಿಯಿಂದ ಪರಿಹರಿಸದೆ ಕೋವಿಯ ಬಲದಿಂದ ಪರಿಹರಿಸಲು ಪ್ರಯತ್ನಿಸುತ್ತಿದೆ. ಇಲ್ಲಿರುವ ವೈರುಧ್ಯದ ಸಂಗತಿ ಏನೆಂದರೆ ಕಾರ್ಮಿಕರ, ಬಡವರ, ಹಿಂದುಳಿದವರ ಹಿತವನ್ನು ಕಾಪಾಡುವುದೇ ತನ್ನ ನೀತಿಯೆಂದು ಹೇಳಿಕೊಳ್ಳುವ ಕಮ್ಯೂನಿಸ್ಟ್ ಪಕ್ಷ ಹಾಗೂ ಅದರ ನೇತೃತ್ವದ ಸರ್ಕಾರವೇ ಇಂದು ಜನಸಾಮಾನ್ಯರ ಮಿತ್ರನಾಗುವುದರ ಬದಲು ಶತ್ರುವಾಗಿದೆ. ದೇಶದಲ್ಲಿಯ ಬಡತನ, ಅದರಲ್ಲಿಯೂ ಮುಖ್ಯವಾಗಿ, ಗ್ರಾಮಾಂತರ ಪ್ರದೇಶದಲ್ಲಿಯ ಬಡತನ ಹೆಚ್ಚಾಗುತ್ತಲೇ ಇದೆಯೆಂದು ವಿಶ್ವ ಬ್ಯಾಂಕ್ ವರದಿಯೇ ಘಂಟಾಘೋಷವಾಗಿ ಸಾರುತ್ತದೆ. ೨೦೦೨ರ ಸುಮಾರಿನಲ್ಲಿ ಅರ್ಥತಜ್ಞರಾದ ಸುಂದರಂ ಮತ್ತು ತೆಂಡೂಲ್ಕರ್ ನಡೆಸಿದ ಅಧ್ಯಯನವೂ ಸಹ ಭೂ ರಹಿತರಾಗಿರುವಂಥವರಲ್ಲಿಯೇ ಬಡತನ ಹೆಚ್ಚಾಗಿದೆ ಎಂದು ಹೇಳಿದೆ. ಇನ್ನು ಕೆಲವು ತಜ್ಞರು ಪಶ್ಚಿಮ ಬಂಗಾಳ ಮತ್ತು ಕರ್ನಾಟಕದಲ್ಲಿ ನಡೆಸಿದ ಅಧ್ಯಯನದ ಮೇರೆಗೆ ಒಂದು ಕುಟುಂಬಕ್ಕೆ ೦.೦೫ ರಿಂದ ೦.೧೫ ಎಕರೆ ಅಳತೆಯ ಭೂಮಿಯನ್ನು ಕೊಟ್ಟಿದ್ದೇ ಆದರೆ ತುಲನಾತ್ಮಕವಾಗಿ ಕಡಿಮೆ ಖರ್ಚಿನಲ್ಲಿ ಬಹಳಷ್ಟು ಅನುಕೂಲತೆಗಳನ್ನು ದೊರಕಿಸಿ ಕೊಡಬಹುದೆಂದು ತಿಳಿದು ಬಂದಿದೆ. ಒಂದು ಕಡೆ ನೈಜ ಪರಿಸ್ಥಿತಿ ಹೀಗಿರುವಾಗ ಇನ್ನೊಂದೆಡೆ ಜನತಾ ಪ್ರತಿನಿಧಿಗಳನ್ನೊಳಗೊಂಡ ಎಲ್ಲ ಸರ್ಕಾರಗಳೂ, ಎಲ್ಲ ಇತರ ಚುನಾಯಿತ ಸಂಸ್ಥೆಗಳೂ ರೈತರನ್ನು ಭೂಮಿಯಿಂದ ಉಚ್ಚಾಟಿಸುವ ಅಮಾನವೀಯ ಕೆಲಸಗಳನ್ನೇ ಮಾಡುತ್ತಿವೆ. ದೇಶದಲ್ಲಿ ಅತ್ಯಂತ ಕಡು ಬಡ ಹತ್ತು ದಶಲಕ್ಷ ಕುಟುಂಬಗಳಿವೆ. ಸರ್ಕಾರಗಳ ಇಂದಿನ ಅಭಿವೃದ್ಧಿ ನೀತಿಯಿಂದಾಗಿ ಈ ಎಲ್ಲ ಕುಟುಂಬಗಳು ಎಂದೂ ಮೇಲಕ್ಕೆ ಬರಲಾಗದೇ ಇರುವಂಥ ಆಳವಾದ ದಾರಿದ್ರ್ಯದ ಕೂಪಕ್ಕೆ ತಳ್ಳಲ್ಪಡುತ್ತವೆ. ಈ ಕುಟುಂಬಗಳ ಹಿತದ ವಕಾಲತ್ತನ್ನು ವಹಿಸುವವರಾರು? ಅಭಿವೃದ್ಧಿಯ ಕಾರಣದಿಂದ ಭೂಮಿಯನ್ನು ಕಳೆದುಕೊಂಡವರು ಪರಿಹಾರವನ್ನು ಪಡೆಯುವುದೂ ಬಹಳ ಕಷ್ಟವಾಗುತ್ತದೆ. ಇದಕ್ಕೆ ಎರಡು ಮುಖ್ಯ ಕಾರಣಗಳು : ಒಂದು, ಭೂ ಒಡೆತನದ ಬಗ್ಗೆ ದಾಖಲೆಗಳು ಸರಿಯಾಗಿಲ್ಲದೇ ಇರುವುದು; ಎರಡನೆಯದು, ಒಡೆತನವನ್ನು ಸಿದ್ಧಪಡಿಸಬೇಕಾದರೆ ಕೈಗೊಳ್ಳಬೇಕಾದ ದುಬಾರಿ ಮತ್ತು ಸಮಯ ತಿಂದು ಹಾಕುವ ನ್ಯಾಯಾಲಯದ ರೀತಿನೀತಿಗಳು. ಪರಿಹಾರ ಪಡೆಯುವಲ್ಲಿ ನ್ಯಾಯಬದ್ಧ ರೈತನಿಗೆ ಉಂಟಾಗಿರುವ ಈ ಎರಡು ತೊಡಕುಗಳು ಅವನ ಸ್ಪರ್ಧಿಗಳಿಗೆ ಅನುಕೂಲಕರವಾಗಿ ಒದಗಿಬರುತ್ತವೆ. ನೂರಕ್ಕೆ ತೊಂಭತ್ತರಷ್ಟು ಭೂಮಿಯಿಂದ ಉಚ್ಚಾಟಿತರಾದ ರೈತರು ಕೊನೆಗೆ ಯಾವ ಪರಿಹಾರವೂ ಇಲ್ಲದೆ ಸತ್ತು ಹೋಗುತ್ತಾರೆ, ಇಲ್ಲವೆ ಆತ್ಮಹತ್ಯೆಗೆ ಶರಣಾಗುತ್ತಾರೆ.

ಭೂ ಸಮಸ್ಯೆಗೆ ಮೂಲಭೂತ ಕಾರಣ ಭೂಮಿಯನ್ನು ವಾಣಿಜ್ಯ ವಸ್ತುವನ್ನಾಗಿ ಮಾಡಿದ್ದು. ಮನುಷ್ಯ ಈ ಭೂಮಿಯ ಮೇಲೆ ಕಾಣಿಸಿಕೊಂಡಾರಭ್ಯದಿಂದಲೂ, ನಂತರ ಒಂದೆಡೆ ನೆಲೆಸಿ ಕೃಷಿ ಕಾಯಕದಲ್ಲಿ ತೊಡಗಿಸಿಕೊಂಡಾಗಿನಿಂದಲೂ ಮನುಷ್ಯ

ಭೂಮಿಯನ್ನು ತನ್ನ ತಾಯಿಗೆ ಸಮಾನವಾಗಿ ಕಾಣುತ್ತಾ ಬಂದಿದ್ದಾನೆ. ಭೂಮಿಯನ್ನು ಮಾರಿದರೆ, ತಾಯಿಯನ್ನೇ ಮಾರಿದಂತೆ; ಒಬ್ಬರಿಂದ ಭೂಮಿಯನ್ನು ಕಿತ್ತುಕೊಂಡರೆ ಮಗನನ್ನು ತಾಯಿಯಿಂದ ಬೇರ್ಪಡಿಸಿದಂತೆ ಎಂದೆಂಬ ಮೌಲ್ಯಗಳು ಸಮಾಜದಲ್ಲಿ ಸ್ಥಾಪಿತವಾದವು. ಆದರೆ ಈಗ ಆ ಮೌಲ್ಯಗಳ ಬದಲಾಗಿ ಭೂಮಿ ಮಾರಾಟದ ಹಾಗೂ ಕಿತ್ತುಕೊಳ್ಳುವ ವಸ್ತುವಾಗಿದೆ. ಮನುಷ್ಯ ಮತ್ತು ಭೂಮಿ ಮಧ್ಯ ಇದ್ದ ಅವಿನಾಭಾವ ಸಂಬಂಧ, ಕರುಳಿನ ಸಂಬಂಧ ಮುರಿದುಹೋಗಿ ಅವುಗಳ ಬದಲಾಗಿ ಕೇವಲ ಹಣದ ಸಂಬಂಧ ಬಂದಿದೆ. ಭೂ ಸಮಸ್ಯೆ ಈಗ ಕೇವಲ ಮನುಷ್ಯ-ಮನುಷ್ಯರ ಮಧ್ಯ ಮಾತ್ರ ಉದ್ಭವಿಸಿಲ್ಲ; ಮನುಷ್ಯ ಮತ್ತು ಪ್ರಾಣಿವರ್ಗದ ಮಧ್ಯವೂ ಉದ್ಭವಿಸಿದೆ; ಪ್ರಕೃತಿ ಮತ್ತು ಮನುಷ್ಯನ ಮಧ್ಯವೂ ಉದ್ಭವಿಸಿದೆ. ಕಾಡು ನಾ ಬೆಳೆಯುತ್ತೇನೆನ್ನುತ್ತಿದೆ, ನೀ ಬೆಳೆದರೆ ನಾ ನಾಶ ಮಾಡುತ್ತೇನೆ ಎನ್ನುತ್ತಾನೆ ಮಾನವ.

ಜನಸಂಖ್ಯೆ ಹೆಚ್ಚಾಗುತ್ತಿದೆ, ಪ್ರಾಣಿಗಳ ಸಂಕುಲ ಹೆಚ್ಚುತ್ತಿದೆ. ಆದರೆ ಭೂಮಿ ಮಾತ್ರ ಕ್ಷೇತ್ರಫಲದಲ್ಲಿ ಇದ್ದಷ್ಟೇ ಇದೆ. ಆದ್ದರಿಂದ ಮನುಷ್ಯನ ಚಟುವಟಿಕೆಗಳಿಗೆ ಆಕಾಶವನ್ನು ಮಿತಿಯಾಗಿಟ್ಟುಕೊಳ್ಳದೆ ಭೂಮಿಯನ್ನೇ ಮಿತಿಯಾಗಿಟ್ಟುಕೊಳ್ಳಬೇಕಾಗುತ್ತದೆ. ಭೂಮಿಯ ವಿಸ್ತಾರದ ಈ ಮಿತಿಯಲ್ಲಿಯೇ ಇಡೀ ಮಾನವ ಸಮುದಾಯ, ಪಶುಗಳು, ಪಕ್ಷಿಗಳು, ಪ್ರಾಣಿಗಳು ಎಲ್ಲರೂ ಒಟ್ಟಿಗೆ ಪರಸ್ಪರರ ಹಿತಕ್ಕೆ ವಿರೋಧವಿಲ್ಲದೆ ಹೇಗೆ ಜೀವನ ನಡೆಸಬಹುದೆಂಬುದರ ಬಗ್ಗೆ ವೈಜ್ಞಾನಿಕ ಚಿಂತನೆ, ತಾಂತ್ರಿಕ ಬೆಳವಣಿಗೆ ನಡೆಯಬೇಕಿದೆ. ಭೂಮಿಯ ಮೇಲಿನ ಎಲ್ಲ ಜೀವಿಗಳ ಚಿಂತನದ ದಿಕ್ಕು ವಿರಸ ಮರಣ, ಸಮರಸವೇ ಜೀವನ ಎಂಬ ಸೂತ್ರ ಹಿಡಿದು ಸಾಗಬೇಕಿದೆ.

ಇತ್ತೀಚಿಗೆ ಹಸಿದ ಹೊಟ್ಟೆಯವರ ಒಂದು ಬೃಹತ್ ಪಾದಯಾತ್ರೆ ನಡೆಯಿತು. ಈ ಯಾತ್ರೆಯಲ್ಲಿ ಒರಿಸ್ಸಾ, ಮಹರಾಷ್ಟ್ರ, ಮಧ್ಯಪ್ರದೇಶ, ಉತ್ತರಪ್ರದೇಶಗಳಿಂದ ಬಂದಂಥ ಸುಮಾರು ೨೦,೦೦೦ ಜನರು ಗ್ವಾಲಿಯರ್‌ನಿಂದ ದಿಲ್ಲಿಯವರೆಗೆ ೩೫೦ ಕಿಲೋಮಿಟರ್ ದೂರವನ್ನು ನಡೆದುಕೊಂಡು ಕ್ರಮಿಸಿ, ದಿಲ್ಲಿಯಲ್ಲಿ ಸಭೆ ನಡೆಸಿದರು. ಭೂ ಸಮಸ್ಯಯಿಂದ ತಮಗಾಗಿರುವ ತೊಂದರೆಗಳನ್ನು ತಿಳಿಸುವ ಅಹವಾಲನ್ನು ಪ್ರಧಾನ ಮಂತ್ರಿಯವರಿಗೂ, ಸೋನಿಯಾ ಗಾಂಧಿಯವರಿಗೂ ಸಲ್ಲಿಸಿದರು. ದೇಶದ ಮುಖಂಡರೇನಾದರೂ ಅಹಿಂಸಾತ್ಮಕವಾಗಿದ್ದ ಈ ಪ್ರತಿಭಟನೆಯನ್ನು ಉದಾಸೀನ ಮಾಡಿದರೆ ಮುಂದೆ ಅನೇಕ ಅನಾಹುತಗಳು ಕಾದಿವೆ, ಟಾಟಾ, ಅಂಬಾನಿ, ಬಿರ್ಲಾ ಮುಂತಾದವರ ಕೈ ಹಿಡಿದು ಶ್ರೀಮಂತರ ಹಿತದ ಕಡೆಗೆ ಮಾತ್ರ ನೋಡದೆ ಬಹುಸಂಖ್ಯೆಯಲ್ಲಿರುವ ಬಡವರ ಹಿತವನ್ನು ಗಮನಿಸದಿದ್ದರೆ ಎಲ್ಲೆಲ್ಲೂ ಹಿಂಸಾಚಾರ, ಪ್ರಾಣಹಾನಿ, ಆಸ್ತಿಹಾನಿಯಾಗುವುದರಲ್ಲಿ ಸಂದೇಹವಿಲ್ಲ. ಪ್ರಜಾರಾಜ್ಯದಲ್ಲಿ ಪ್ರಜಾಪ್ರತಿನಿಧಿಗಳು ಪ್ರಜೆಗಳ ಸಮಸ್ಯೆಗೆ ಸ್ಪಂದಿಸಬೇಕಾದದ್ದು ಮೊದಲ ಕರ್ತವ್ಯ, ಮೊದಲ ಧರ್ಮ. ಹಾಗಿಲ್ಲವಾದಲ್ಲಿ ಅವರು ತಮ್ಮ ಸ್ಥಾನಗಳನ್ನು ತೆರವು ಮಾಡಬೇಕು.

ದಿಲ್ಲಿಗೆ ಯಾತ್ರೆಮಾಡಿದ ರೈತರ ಪ್ರಮುಖ ಬೇಡಿಕೆಗಳು ಇಂತಿವೆ :-

೩೩ನೇ ಪುಟ ನೋಡಿ........

ಕಲೆ, ಸಾಹಿತ್ಯದ ಬಗ್ಗೆ ಗಾಂಧಿ ಮತ್ತು ಟಾಗೋರ್

- ಗುರುದಯಾಳ್ ಮಲ್ಲಿಕ್

ಒಂದು ಸಲ ಹಿಂದೀ ಅಧ್ಯಾಪಕರು ತಮ್ಮ ವಿದ್ಯಾರ್ಥಿ ಮಕ್ಕಳನ್ನು ಕಲೆ ಎಂದರೇನು ಎಂದು ಕೆಳಿದರು. ಅವರಲ್ಲಿ ಒಬ್ಬನು 'ಕಾಲ್-ಆ' ಎಂದು ಉತ್ತರಿಸಿದನು. ಅಂದರೆ ಕಾಲವೇ ಬಾ. ಅಧ್ಯಾಪಕ ನಂತರ ಕೇಳಿದರು "ಸೌಂದರ್ಯವೆಂದರೇನು"? ಒಳಗಿರುವ ಜೀವವನ್ನು ಸು-ಅಂದರ್ ಎಂದು ಇನ್ನೊಬ್ಬ ಹೇಳಿದ.

ಇವೆರಡು ಉತ್ತರಗಳು ಕಲೆ ಮತ್ತು ಸೌಂದರ್ಯದ ಅರ್ಥವನ್ನು ಬಹು ಮಾರ್ಮಿಕವಾಗಿ ತಿಳಿಸುತ್ತವೆ. ಉದಾಹರಣೆಗೆ, ಓರ್ವ ಶಿಲ್ಪಿ ಒಂದು ವಿಗ್ರಹವನ್ನು ತಯಾರಿಸುವಾಗ ಅವನನ್ನು ಕಾಡುವ ಕನಸು ಯಾವುದು? ವ್ಯಕ್ತಿಯಲ್ಲಿ ಅಥವಾ ವಸ್ತುವಿನಲ್ಲಿರುವ ಸತ್ಯ ಅಥವಾ ಕಾಲಾತೀತತೆಯನ್ನು ಪ್ರಕಟಗೊಳಿಸುವುದು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅವನ ಕಲೆಯು ಪ್ರವಹಿಸುತ್ತಿರುವುದರಲ್ಲಿ ಶಾಶ್ವತತೆಯನ್ನು ಅಭಿವ್ಯಕ್ತಿಸುವುದು. ಅದು ತಾಯಿ ತನ್ನ ಮಗುವಿನ ಕೆನ್ನೆಗಳ ಮೇಲೆ ಇಟ್ಟಂಥ ಮುತ್ತಿನಂತೆ. ಆ ಮುತ್ತು ಕ್ಷಣಿಕವಾಗಿದ್ದರೂ ಕಾಲಾತೀತತೆಯನ್ನೇ ಮತ್ತು ಪ್ರೇಮದ ಸತ್ಯವಂತಿಕೆಯನ್ನೇ ಅಚ್ಚೊತ್ತಿದಂತೆ. ಕಲಾಕಾರ ತನ್ನ ಚಿತ್ರವನ್ನು ಸುಂದರವಾಗಿ ಮಾಡುತ್ತಾನೆ. ಏಕೆಂದರೆ ಹಾಗೆ ಮಾಡುವುದರ ಮೂಲಕ ಅದು ತನ್ನ ಆಧ್ಯಾತ್ಮಿಕ ಸೌಂದರ್ಯವರ್ಧಿಸುತ್ತದೆ ಎಂದು ಅವನು ನಂಬುತ್ತಾನೆ. ಶಾಶ್ವತದ ಬಗ್ಗೆ ಇರುವ ಆತನ ತಿಳುವಳಿಕೆಯನ್ನು ಹೆಚ್ಚಿಸುವಲ್ಲಿ ವಿಫಲವಾದ ಕಲಾಕೃತಿ ಅಂತಿಮವಾಗಿ ಅಗ್ನಿಯ ಕೃತಿಯಂತೆ ಕೇವಲ ಧೂಳು ಮತ್ತು ಬೂದಿ.

ಗಾಂಧೀಜಿ ಮತ್ತು ಗುರುದೇವರಿಬ್ಬರೂ ಸತ್ಯ, ದೇವರು ಮತ್ತು ಸುಂದರತೆಗಾಗಿ ಕಾರ್ಯವೆಸಗಿದರು. ಒಬ್ಬರು ಸತ್ಯವನ್ನೇ ತಮ್ಮ ಅಭಿವ್ಯಕ್ತಿಯ ಸಾಧನವನ್ನಾಗಿ ಮಾಡಿಕೊಂಡರೆ ಇನ್ನೊಬ್ಬರ ಮಾಧ್ಯಮ ಸೌಂದರ್ಯವಾಗಿತ್ತು. ಆದರೆ ಅಂತ್ಯದಲ್ಲಿ ಅವರಿಬ್ಬರೂ ಒಳ್ಳೆಯತನದ ಬಾಗಿಲು ಬಳಿ ತಲುಪಿದರು. ಈ ಮೂರು ಮೌಲ್ಯಗಳು ದೇವರ ಮೂರು ಶಿರಗಳು. ಆದ್ದರಿಂದ ಯಾರೇ ಆಗಲಿ ತನ್ನ ಜೀವನದಲ್ಲಿ ಅವುಗಳಲ್ಲಿಯ ಯಾವುದೇ ಒಂದು ಮೌಲ್ಯವನ್ನು ತಾತ್ವಿಕವಾಗಿ ಅನುಸರಿಸಿರಲಿ ಅದು ತಡವಾಗಿಯಾಗಲಿ, ಬೇಗನೆಯೇ ಆಗಲಿ ಅವನನ್ನು ಸೃಜನಾತ್ಮಕ ಕ್ರಿಯೆಯಲ್ಲಿ ಭಗವಂತನ ಗ್ರಹಿಕೆಯತ್ತ ಕೊಂಡೊಯ್ಯುತ್ತದೆ. ಅದೇ ರೀತಿ ಪ್ರಕೃತಿಯಲ್ಲಿರುವ ಸೌಂದರ್ಯದ ಬಗೆಗಿನ ದೃಷ್ಟಿ ಮತ್ತು ಅದರ ಆರಾಧನೆ ಪ್ರಕೃತಿ ದೇವತೆಯ ಬಗೆಗಿನ ದೃಷ್ಟಿ ಮತ್ತು ಆರಾಧನೆಯತ್ತ ಕೊಂಡೊಯ್ಯುವುದಿಲ್ಲವೆ?

ಯಾವಾಗಲೇ ಆಗಲಿ ಗಾಂಧೀಜಿ ಕಲಾತ್ಮಕ ಕೃತಿಯನ್ನು ನೋಡಿದಾಗ

ಅದು ತನ್ನ ಅಂತರಾತ್ಮವನ್ನು ಜ್ಞಾನದೀಪದಿಂದ ಬೆಳಗುತ್ತದೆಯೆ ಎಂದು ತಕ್ಷಣ ತಮಗೆ ತಾವೇ ಕೇಳಿಕೊಳ್ಳುತ್ತಿದ್ದರು. ಇದರ ಅರ್ಥ ಗಾಂಧೀಜಿಯವರ ರೀತಿ ಉಪಯೋಗಾರ್ಥಕವಾಗಿತ್ತೆಂದಲ್ಲ. ಒಂದು ಉದಾಹರಣೆ ಈ ಮಾತನ್ನು ಹೆಚ್ಚು ಸ್ಪಷ್ಟಗೊಳಿಸುತ್ತದೆ. ಗಾಂಧೀಜಿ ಸುಂದರವಾದ ವಿಷ್ಣುವಿನ ವಿಗ್ರಹವನ್ನು ನೋಡಿದರೆ ವಿಷ್ಣು ಎಂಬ ಸತ್ವವನ್ನು ಕುರಿತು ಅವರು ಧ್ಯಾನ ಮಾಡುತ್ತಿದ್ದರೇ ಹೊರತು ಪರಿಮಳ ದ್ರವ್ಯಗಳನ್ನು ತೇಯುವುದನ್ನಲ್ಲ. ಸೌಂದರ್ಯದ ಬಗ್ಗೆ ಗುರುದೇವರ ಪ್ರತಿಕ್ರಿಯೆ ಕೂಡ ಬಹುರೂಪಗಳಲ್ಲಿ ಗಾಂಧೀಜಿಯವರ ರೀತಿಯಂತೆಯೇ ಇತ್ತು.

ಕೆಲವರು ಜೀವನವೇ ಕಲೆಯೆಂದು ಹೇಳಿದರೆ, ಉಳಿದವರು ಕಲೆಯೆ ಜೀವನವೆಂದು ಆಲೋಚಿಸುತ್ತಾರೆ. ಆದರೆ ಈ ಎರಡು ಹೇಳಿಕೆಗಳಲ್ಲಿ ಯಾವುದೇ ವೈರುಧ್ಯವಿಲ್ಲ. ಮನುಷ್ಯ ತನ್ನ ಜೀವನದಲ್ಲಿ ನಿರ್ದಿಷ್ಟ ಕನಸನ್ನಾಗಲಿ, ಆದರ್ಶವನ್ನಾಗಲಿ ಹೊಂದಿರದೆ ಇರಲು ಸಾಧ್ಯವಿಲ್ಲ ಅಥವಾ ಅವುಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳದೆ ಇರಲೂ ಸಾಧ್ಯವಿಲ್ಲ. ಈ ಅನುಸರಣೆ ಕಲೆಯಲ್ಲದೆ ಮತ್ತೇನು? ಜೀವನವನ್ನಲ್ಲದೆ ಇನ್ನೇನನ್ನು ಪರಿವರ್ತಿಸುತ್ತದೆ. ಜೀವನ ಮತ್ತು ಕಲೆ ಮೂಲಭೂತವಾಗಿ ಒಳ್ಳೆಯತನ, ಸತ್ಯ ಮತ್ತು ಸೌಂದರ್ಯ ಈ ತ್ರಿ ವಿಷಯಗಳ ಸುತ್ತ ಸುತ್ತುತ್ತವಲ್ಲವೆ?

ಗುರುದೇವರ ಗೀತಾಂಜಲಿಯಲ್ಲಿ ಒಂದು ಕವನವಿದೆ. ಅದು ಬಹು ಸುಂದರವಾಗಿ ಸೌಂದರ್ಯದ "ಉಪಯುಕ್ತತೆ" ಯನ್ನು ಪ್ರಕಟಿಸುತ್ತದೆ. ಕನ್ಯೆಯೊಬ್ಬಳು ಒಂದು ರಾತ್ರಿ ಉರಿಯುತ್ತಿರುವ ಹಣತೆಯನ್ನು ತೆಗೆದುಕೊಂಡು ನದಿಯ ತೀರಕ್ಕೆ ಹೋಗುತ್ತಿರುತ್ತಾಳೆ. ಕತ್ತಲೆಯಲ್ಲಿಯೆ ಜೀವಿಸುತ್ತಾ ನಡೆಯುವ ಅನೇಕ ಜನರು ದೀಪದ ಉಪಯೋಗವೇನೆಂದು ಅವಳನ್ನು ಕೇಳುತ್ತಾರೆ. "ಈ ರಾತ್ರಿಯ ನಶ್ವರತೆಯೊಂದಿಗೆ ನನ್ನೊಂದು ಒಪ್ಪಂದವಿದೆ. ಆದ್ದರಿಂದ ಉರಿಯುತ್ತಿರುವ ಈ ದೀಪವನ್ನು ಆ ನಶ್ವರತೆಗೆ ಕೊಡಲು ಹೋಗುತ್ತಿದ್ದೇನೆ. ನಕ್ಷತ್ರಗಳೊಂದಿಗೆ ಇದನ್ನೂ ಇಡಲೆಂಬ ಆಸೆಯಿಂದ." ಎಂಬುದು ಅವಳ ಉತ್ತರವಾಗಿತ್ತು.

ರಸ್ಕಿನ್ ಅಂದಿಲ್ಲವೆ, ಎಲ್ಲ ಕಲೆ ಸ್ತುತಿ ಎಂದು. ಈ ಸ್ತುತಿ ಮಾಡಲು ದೈವೀ ಲೇಖಕನಿಗೆ ಸತ್ಯ, ಸಾತ್ವಿಕತೆ ಮತ್ತು ಸೌಂದರ್ಯ ಕುರಿತಾದ ಅವನ ದೃಷ್ಟಿ, ಧ್ಯಾನವೇ ಪ್ರೇರಣೆ ಕೊಟ್ಟಿದೆ. ಆ ಸ್ತುತಿಯನ್ನು ಮಾಡುವ ಮಾಧ್ಯಮ ಕಲೆ, ಸಾಹಿತ್ಯ ಅಥವಾ ಜೀವನವಾಗಿರಬಹುದು.

ಜೀವನವು ಸೂರ್ಯನಂತೆ. ಕಲೆ, ಸಾಹಿತ್ಯ, ತತ್ವಜ್ಞಾನ ಮತ್ತು ವಿಜ್ಞಾನ ಮುಂತಾದವುಗಳು ಅವನ ಕಾಮನಬಿಲ್ಲಿನ ಬಣ್ಣ ಪಡೆದ ಕಿರಣಗಳು ಪ್ರತಿಯೊಂದೂ ಪ್ರಕಾಶಮಾನ. ಜೀವನದ ಬೆಳಕಿನ ಕಾರಣದಿಂದಾಗಿ ಹಾಗೆ ಇರಲೇಬೇಕಾದುದು. ತತ್ಪರಿಣಾಮವಾಗಿ ಪ್ರತಿಯೊಂದೂ ಮೂಲಾರ್ಥದಲ್ಲಿ ಮಾನವೀಯತೆಯ

ಹಿತಕ್ಕಾಗಿಯೇ ಇರಬೇಕಾದುದು. ಸಾಹಿತ್ಯಕ್ಷೇತ್ರದಲ್ಲಿ ಯಾವುದೇ ಬಗೆಯ ಅಸ್ಪೃಶ್ಯತೆ ಇಲ್ಲ. ವಿಚಾರಗಳಲ್ಲೆಕ್ಕೂ, ವ್ಯಕ್ತಿಗಳೆಲ್ಲರಿಗೂ ಅಲ್ಲಿ ಸ್ವಾಗತವಿದೆ. ಯಾವುದೇ ವಿಚಾರವನ್ನಾಗಲಿ, ಮನುಷ್ಯರನ್ನಾಗಲಿ ಹೊರಗಿಡುವಂಥ ಗೋಡೆಯಿದ್ದಲ್ಲಿ ಅದನ್ನು ಕೆಳ ಬೀಳಿಸಲೇಬೇಕು. ಉದಾಹರಣೆಗೆ, ಗಾಂಧೀಜಿ ಮತ್ತು ಗುರುದೇವರಿಬ್ಬರೂ ಮುಖ್ಯವಾಗಿ ತಮ್ಮ ಪ್ರಾದೇಶಿಕ ಭಾಷೆಗಳಾದ ಗುಜರಾತಿ ಮತ್ತು ಬೆಂಗಾಲಿಯಲ್ಲಿ ಅಭಿವ್ಯಕ್ತಿಸಲು ಹೆಚ್ಚು ಇಷ್ಟ ಪಡುತ್ತಿದ್ದರು. ಏಕೆಂದರೆ ಯಾರಾದರೂ ಇಂಗ್ಲಿಷ್ ಅಥವಾ ಸಂಸ್ಕೃತದಲ್ಲಿ ಜನಸಾಮಾನ್ಯರಿಗೆ ಅರ್ಥವಾಗದ ಕಠಿಣ ಭಾಷಾಶೈಲಿಯಲ್ಲಿ ಮಾತನಾಡಿದರೆ ಅವರು ಸಾಹಿತ್ಯ ಕ್ಷೇತ್ರದಿಂದ ಬಹು ದೊಡ್ಡ ಸಂಖ್ಯೆಯ ಜನರನ್ನು ದೂರವಿಡುತ್ತಿದ್ದಾರೆ ಎಂದು ಅವರು ಭಾವಿಸುತ್ತಿದ್ದರು.

ಗಾಂಧೀಜಿಯವರಿಗಾಗಲಿ, ಗುರುದೇವರಿಗಾಗಲಿ ಬರೆಯ ಬೇಕೆಂಬ ಸ್ಫೂರ್ತಿ ಯಾವುದೇ ರಾಜನ ಆಸ್ಥಾನದಿಂದ ಬಂದುದಾಗಿರಲಿಲ್ಲ. ಸರ್ವ ಸಾಮಾನ್ಯ ಜನತೆಯ ಬಗ್ಗೆ ಅವರಿಗಿದ್ದ ಅಂತಃಸಾಕ್ಷಿಯಿಂದ ಅದು ಬಂದುದಾಗಿತ್ತು. ಆದ್ದರಿಂದ ಅವರ ಸಾಹಿತ್ಯ ಕೃತಿ ಅವ್ಯಕ್ತತೆಯನ್ನು ವ್ಯಕ್ತಗೊಳಿಸುತ್ತದೆ. ಆ ವ್ಯಕ್ತತೆ ಎಷ್ಟೇ ಮಸುಕಾಗಿದ್ದರೂ ಅದು ಮನುಕುಲದ ಬಗ್ಗೆ ಇರುವ ಅವರ ತುಡಿತ, ವಿಚಾರ, ಇಚ್ಛೆಯನ್ನು ಪ್ರಾದೇಶಿಕ ಪ್ರಭಾವಳಿಯೊಂದಿಗೆ ವ್ಯಕ್ತಪಡಿಸುತ್ತದೆ. ಅವರ ಅಂತಿಮ ಉದ್ದೇಶ್ಯ ತಮ್ಮ ಬರಹ ಅಥವಾ ಮಾತಿನ ಮೂಲಕ ತಮ್ಮ ಓದುಗರು ತಮ್ಮಲ್ಲಿರುವ ದೈವಿಕ, ಶಕ್ತಿಯುತ ಆತ್ಮವನ್ನು ತಿಳಿಯುವಂತೆ ಮಾಡುವುದೇ ಆಗಿತ್ತು. ಆತ್ಮ ಜ್ಞಾನವೇ ಎಲ್ಲ ಸಾಹಿತ್ಯದ ಪ್ರಪ್ರಥಮ ಮತ್ತು ಅತಿ ಮಹತ್ವದ ಉದ್ದೇಶ್ಯವಲ್ಲವೆ?

ಗುರುದೇವರು ರಚಿಸಿದ ಸಾಹಿತ್ಯ ಹೆಚ್ಚಾಗಿ ಕಲ್ಪನಾ ಪ್ರಧಾನವಾಗಿದೆಯೆಂದೂ, ಗಾಂಧೀಜಿ ಆ ವಿಷಯದಲ್ಲಿ ನ್ಯೂನ್ಯತೆಯುಳ್ಳವರಾಗಿದ್ದರೂ ವ್ಯವಹಾರಿಕವಾಗಿದ್ದರೆಂದು ಕೆಲವರು ಹೇಳುತ್ತಾರೆ. ಆದರೆ ಅವರಿಬ್ಬರ ಕಲ್ಪನೆ ಮತ್ತು ವ್ಯವಹಾರಿಕತೆಗಳೆರಡೂ ಜೀವನದಲ್ಲಿಯ ಚೈತನ್ಯವನ್ನೂ, ಆತ್ಮವನ್ನೂ ಅರ್ಥ ಮಾಡಿಕೊಳ್ಳುವುದಾಗಿದೆ. ಅದು, ಚರ್ಮಚಕ್ಷುಗಳಿಂದ ಅಥವಾ ಇಂದ್ರಿಯಜ್ಞಾನಗಳಿಂದ ಉಂಟಾದ ತಾತ್ಕಾಲಿಕ ಅರಿವಿನಿಂದಲ್ಲ. ಆದ್ದರಿಂದ ಇತ್ತೀಚಿನ ದಿನಗಳಲ್ಲಿ ಯಾವುದನ್ನು ನೈಜವಾದುದೆಂದು ತಿಳಿಯಲಾಗುತ್ತದೊ ಅದು ನೈಜವಾಗಿರದೆ ಪಶುತ್ವವಾಗಿದೆ. ಗುರುದೇವರು ಒಂದು ಕಡೆ ಹೀಗೆ ಹೇಳಿದ್ದಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ಸತ್ಯವು ನೈಜತೆಯಿಂದ ಅಥವಾ ಸತ್ಯವೆಂದು ಕಾಣುವುದರಿಂದ ಭಿನ್ನವಾಗಿರುತ್ತದೆ. ಯಾವ ರೀತಿ ಛಾಯಾಗ್ರಾಹಕನ ವ್ಯಕ್ತಿಯ ಬಿಂಬ ನೈಜವಾಗಿರುತ್ತದೊ ಅದರಂತೆ. ಆದರೆ ಕಲಾಕಾರನ ಕೃತಿ ಕಾಲ್ಪನಿಕವಾಗಿ ಸತ್ಯವಾಗಿರುತ್ತದೆ. ಒಬ್ಬ ವ್ಯಕ್ತಿಯ ಆತ್ಮಜ್ಞಾನದ ಬಗ್ಗೆ ಕುರಿತಾದ ಒಂದು ಪ್ರಬಂಧವಿರುವಂತೆ. – *ಸಂಗ್ರಹ : ಸು. ಕೌ (ಮುಂದುವರಿಯುವುದು)*

ಜಾಗತೀಕರಣದ ಒಂದು ದಶಕದ ಸಿಂಹಾವಲೋಕನ

ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣ ನೀತಿಗಳು ಜಾರಿಯಾಗಿ ಇದೀಗ ಒಂದೂವರೆ ದಶಕ ಕಳೆದಿದೆ. ಈ ಹದಿನೈದು ವರ್ಷಗಳಲ್ಲಿ ಎಲ್ಲೆಡೆ ಬಿಕಟ್ಟು ಉಲ್ಬಣಗೊಂಡಿದ್ದು, ಹತಾಶೆ ಮಡುಗಟ್ಟಿದೆ. ದೇಶದಾದ್ಯಂತ ರೈತರು, ಕಾರ್ಮಿಕರು ಬದುಕಿಗೆ ವಿದಾಯ ಹೇಳುತ್ತಿದ್ದಾರೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಬಡತನದ ಬವಣೆ ಪರಾಕಾಷ್ಠೆಗೆ ತಲುಪಿದ್ದು ಒಪ್ಪೊತ್ತಿನ ಗಂಜಿಗೂ ಗತಿಯಿಲ್ಲದೆ ನಿರ್ಗತಿಕ ಜನ ಸಾವಿಗೆ ಮೊರೆಹೋಗುತ್ತಿದ್ದಾರೆ.

ಜಾಗತೀಕರಣದ ವಕ್ತಾರರಿಗೆ ಈ ಬಿಕ್ಕಟ್ಟು ಕಾಣದು. ಜನರು ಕಡುಬಡತನ, ಸಂಕಟಗಳ ಬಗ್ಗೆ ಅವರು ಮೊಸಳೆ ಕಣ್ಣೀರು ಹರಿಸುತ್ತಾರೆ. ಕೇಂದ್ರ ಸರ್ಕಾರದ ಅರ್ಥಮಂತ್ರಿಗಳಾದ ಶ್ರೀ ಪಿ. ಚಿದಂಬರಂರವರು ಸಂಸತ್ತಿನಲ್ಲಿ ೨೦೦೭-೮ ನೇ ಸಾಲಿನ ಬಜೆಟ್ ಮಂಡಿಸುತ್ತಾ, "ನಮ್ಮ ಆರ್ಥಿಕತೆ ಚೆನ್ನಾಗಿದೆ. ನಾವು ಕಳೆದ ವರ್ಷ ಶೇ.೯.೨ರ ಜಿಡಿಪಿ (ರಾಷ್ಟ್ರೀಯ ಒಟ್ಟು ಉತ್ಪನ್ನ) ಬೆಳವಣಿಗೆಯನ್ನು ಸಾಧಿಸಿದ್ದೇವೆ. ಕೈಗಾರಿಕಾ ಉತ್ಪನ್ನಗಳು ಶೇ.೧೦.೨ರಷ್ಟು ಬೆಳೆದಿದೆ. ರಫ್ತು ಪ್ರಮಾಣ ಹೆಚ್ಚಾಗಿದೆ. ವಿದೇಶಿ ಬಂಡವಾಳದ ಹಾಗೂ ದೇಶೀಯ ಬಂಡವಾಳದ ಹೂಡಿಕೆ ಅತ್ಯಂತ ಉತ್ತಮವಾಗಿದೆ. ಅಲ್ಲದೆ ವಿದೇಶಿ ವಿನಿಮಯ ಸಂಗ್ರಹ ಅತ್ಯುತ್ತಮವಾಗಿದ್ದು, ಎಲ್ಲ ಸಮಸ್ಯೆಗಳೂ ಪರಿಹಾರವಾಗುತ್ತವೆ. ಆರ್ಥಿಕ ಬೆಳವಣಿಗೆಗೆ ಜಾಗತೀಕರಣ ಹಾಗೂ ಉದಾರೀಕರಣವನ್ನು ಬಿಟ್ಟು ಬೇರೆ ಪರ್ಯಾಯ ಇಲ್ಲ" ಎಂದು ಉದ್ಗರಿಸಿದ್ದಾರೆ.

ಅರ್ಥ ಸಚಿವರ ಮಾತನ್ನು ಆರ್ಥಿಕ ಬೆಳವಣಿಗೆ ಸರ್ವಾಂಗೀಣವಾಗಿದ್ದಾಗ ಒಪ್ಪಬಹುದು. ಆದರೆ ಇಂದು ನಮ್ಮ ದೇಶದಲ್ಲಿ ಕೃಷಿ ಕೃಶವಾಗುತ್ತಿದೆ. ನಿರುದ್ಯೋಗ ಉಲ್ಬಣಗೊಳ್ಳುತ್ತಿದೆ. ಹಣದುಬ್ಬರ ಹೆಚ್ಚಾಗುತ್ತಿದೆ. ನಿತ್ಯೋಪಯೋಗಿ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ಹೀಗಿರುವಾಗ ಈ ಆರ್ಥಿಕ ಬೆಳವಣಿಗೆ ಜನಸಾಮಾನ್ಯರನ್ನು ಹೊರಗಿಟ್ಟು ಕೇವಲ ಬೆರಳೆಣಿಕೆಯ ಏಕಸ್ವಾಮ್ಯ ಬಂಡವಾಳಿಗರ ಶ್ರೀಮಂತಿಕೆಯನ್ನು ಹೆಚ್ಚಿಸುತ್ತಿದೆ. ಅದನ್ನೇ ಅವರು ಆರ್ಥಿಕ ಬೆಳವಣಿಗೆ ಎಂದು ಕರೆಯುತ್ತಿದ್ದಾರೆ. ನಿಜ, ನಮ್ಮ ದೇಶದ ಬಂಡವಾಳಿಗರ ವಹಿವಾಟು ದೇಶವಿದೇಶಗಳಗೆ ಹಬ್ಬುತ್ತಿದ್ದು, ಅತ್ಯಧಿಕ ಲಾಭಗಳಿಸುತ್ತಾ, ಅವರು ಶ್ರೀಮಂತರಾಗುತ್ತಿದ್ದಾರೆ. ವಿಶ್ವದ ೧೦-೧೨ ಅತಿ ಶ್ರೀಮಂತರ ಪಟ್ಟಿಯಲ್ಲಿ ಭಾರತದ ಬಂಡವಾಳಿಗರು ಸ್ಥಾನ ಪಡೆದಿರುವುದು ಮಾನ್ಯ ಚಿದಂಬರಂರವರಿಗೆ ಹಾಗೂ ಜಾಗತೀಕರಣದ ವಕ್ತಾರರಿಗೆ ಹೆಮ್ಮೆಯ ವಿಷಯವೇ ಸರಿ. ಭಾರತೀಯ ಮೂಲದ ಲಕ್ಷ್ಮೀ ಮಿತ್ತಲ್, ಟಾಟಾ ಮುಂತಾದ ಬಂಡವಾಳಿಗರು ವಿಶ್ವದ ಅತೀ ಶ್ರೀಮಂತ ಉಕ್ಕಿನ ಕಂಪನಿಗಳನ್ನು ಖರೀದಿಸಿ, ನಂ. ೧, ೨ ಸ್ಥಾನದಲ್ಲಿ ಮೆರೆಯುತ್ತಿದ್ದಾರೆ. ಮಾನ್ಯ ಚಿದಂಬರಂರವರಿಗೆ ಹಾಗೂ ಜಾಗತೀಕರಣದ ಡೊಳ್ಳು ಬಜಾಯಿಸುವ ಅರ್ಥಶಾಸ್ತ್ರಜ್ಞರಿಗೆ, ಪತ್ರಕರ್ತರಿಗೆ, ಬಂಡವಾಳಶಾಹಿ ಸೇವಕರಿಗೆ ಇದು ಹೆಮ್ಮೆಯ ವಿಷಯವೇ ಆಗಿರಬಹುದು. ಆದರೆ ಉಡಲು, ಉಣಲು ಗತಿಯಿಲ್ಲದ ನಿರ್ಗತಿಕನಿಗೆ ಇದರಿಂದ ಏನು ಪ್ರಯೋಜನ?

ಒಟ್ಟಾರೆ ದೇಶದ ಒಂದು ಭಾಗದ ಜನ ಭಾರಿ ಪ್ರಮಾಣದಲ್ಲಿ

ಆಸ್ತಿವಂತರಾಗುತ್ತಿದ್ದಾರೆ. ಆದರೆ ಶೇ.೯೯ರಷ್ಟು ಜನ ಸರ್ವನಾಶದ ಹಾದಿಗೆ ತಳ್ಳಲ್ಪಟ್ಟಿದ್ದಾರೆ. ಇದು ಸಮಾಜದ ಎಲ್ಲರನ್ನೂ ಒಳಗೊಳ್ಳಬಲ್ಲ ಸರ್ವಾಂಗೀಣವಲ್ಲದ ಬೆಳವಣಿಗೆ. ಈ ಶ್ರೀಮಂತರ ಪರವಾದ ಆರ್ಥಿಕ ಬೆಳವಣಿಗೆ ಕ್ಯಾನ್ಸರ್ ಗಡ್ಡೆಯಂತೆ ಜೀವದ್ರವ್ಯವನ್ನು ಭಕ್ಷಿಸಿ ಬೆಳೆಯುತ್ತದೆ. ಇದು ಸಮಾಜದ ಜೀವವನ್ನೇ ಬಲಿತೆಗೆದುಕೊಳ್ಳುತ್ತಿದೆ. ಜಾಗತೀಕರಣ ಕಾರ್ಪೊರೇಟ್‌ಗಳನ್ನು ಬೆಳೆಸುವ ಕ್ಯಾನ್ಸರ್‌ಗೆ ಜನ್ಮ ನೀಡಿದ್ದು, ಇಡೀ ದೇಶಕ್ಕೆ ಮಾರಕವಾಗಿದೆ. ಬಜೆಟ್ ಪೂರ್ವದ ಆರ್ಥಿಕ ಸಮೀಕ್ಷೆಯನ್ನೊಮ್ಮೆ ನಾವು ಅವಲೋಕಿಸಿದರೆ ಈ ಮಾತಿನ ಸತ್ಯತೆ ನಮ್ಮ ಅರಿವಿಗೆ ಬರುತ್ತದೆ. ಸತ್ಯವೆಂಬುದು ಬಂಡವಾಳಿಗರ ಕೈಯಲ್ಲಿರುವ ಬೃಹತ್ ಮಾಧ್ಯಮಗಳಿಗೆ ಅಪಥ್ಯ.

ಶೇ.೭೦ರಷ್ಟು ಜನತೆ ಕೃಷಿಯನ್ನವಲಂಬಿಸಿಕೊಂಡಿರುವ ನಮ್ಮ ದೇಶದಲ್ಲಿ ಜಾಗತೀಕರಣದ ನಂತರ ಕೃಷಿ ಕ್ಷೇತ್ರವು ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿತು. ೨೦೦೬–೦೭ರ ಆರ್ಥಿಕ ಸಮೀಕ್ಷೆಯೇ ಹೇಳುವಂತೆ, ಕಳೆದ ಸಾಲಿನಲ್ಲಿ ಕೃಷಿ ಕ್ಷೇತ್ರದ ಬೆಳವಣಿಗೆ ಕೇವಲ ಶೇ. ೨.೭ರಷ್ಟು ಮಾತ್ರ ಹಾಗೂ ಈ ಬಾರಿ ಆಹಾರ ಉತ್ಪಾದನೆಯಲ್ಲಿ ಕಳೆದ ಸಾಲಿಗಿಂತ ಕೇವಲ ಶೇ. ೦.೩ರಷ್ಟು ಬೆಳವಣಿಗೆ ಕಂಡು ಬಂದಿದೆ. ಅಲ್ಲದೆ ನಿತ್ಯೋಪಯೋಗಿ ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆ ಆಗಿದ್ದು, ವಿದೇಶಗಳಿಂದ ಅಧಿಕ ಪ್ರಮಾಣದಲ್ಲಿ ಅಧಿಕ ದರವನ್ನು ನೀಡಿ ಅವುಗಳನ್ನು ಆಮದು ಮಾಡಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿ ಬಂದೊದಗಿದೆ. ಇದರಿಂದ ಹಣದುಬ್ಬರ ಒಮ್ಮೆಗೆ ಹೆಚ್ಚಾಗಿ ಶೇ. ೧೨.೫ರ ವರೆಗೂ ಉಲ್ಬಣಗೊಂಡಿತೆಂದು ಸಮೀಕ್ಷೆ ತಿಳಿಸುತ್ತದೆ. ಹೀಗಾಗಿ ಜೀವನಾವಶ್ಯಕ ವಸ್ತುಗಳ ಬೆಲೆ ಗಗನ ಮುಟ್ಟುತ್ತಿದೆ, ಜನಸಾಮಾನ್ಯರ ದೈನಂದಿನ ಬದುಕು ತೀವ್ರ ಸಂಕಷ್ಟಕ್ಕೆ ಸಿಲುಕಿದೆ.

ಒಟ್ಟಾರೆ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗಿಕರಣ ನೀತಿಗಳು ಜಾರಿಯಾದ ಮೇಲೆ ಎಲ್ಲಾ ವಿಭಾಗದ ದುಡಿಯುವ ಜನ ದಿವಾಳಿಯ ಅಂಚಿಗೆ ತಲುಪಿದ್ದಾರೆ. ಕಳೆದ ೮–೧೦ ವರ್ಷಗಳಲ್ಲಿ ಸುಮಾರು ೫೦,೦೦೦ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಹಾರಾಷ್ಟ್ರದ ವಿದರ್ಭ ಭಾಗದ ೬ ಜಿಲ್ಲೆಗಳಲ್ಲಿ ರೈತರ ಆತ್ಮಹತ್ಯೆ ಅವ್ಯಾಹತವಾಗಿ ನಡೆದು ಬರುತ್ತಿದೆ. ಪ್ರಧಾನಮಂತ್ರಿಗಳು ವಿದರ್ಭಕ್ಕೆ ಭೇಟಿ ನೀಡಿ ಪರಿಹಾರದ ಪ್ಯಾಕೇಜ್ ನೀಡಿದ ಮೇಲೂ ಸಾವಿನ ಸರಣಿ ಕೊನೆಗೊಂಡಿಲ್ಲ. ಜಾಗತೀಕರಣ ಅವರ ಭರವಸೆಯ ಬೆಳಕನ್ನು ಸಂಪೂರ್ಣವಾಗಿ ನಂದಿಸಿದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳು ಜಾರಿಯಾದ ಮೇಲೆ ಸರ್ಕಾರಗಳು ಕೃಷಿಗೆ ನೀಡಿದ್ದ ಸಹಾಯಧನವನ್ನು ಹಿಂತೆಗೆದುಕೊಂಡಿದ್ದರ ಪರಿಣಾಮವಾಗಿ ಕೃಷಿ ದುಬಾರಿಯಾಯಿತು. ಆದರೆ ಸರ್ಕಾರದ ನೂತನ ಆಮದು ನೀತಿಯಿಂದಾಗಿ ಆಯಾ ದೇಶಗಳಲ್ಲಿ ನೀಡುವ ಆರ್ಥಿಕ ಸಹಾಯಧನ ಹಾಗೂ ಆಧುನಿಕ ತಂತ್ರಜ್ಞಾನದಿಂದ ಪೋಷಿತವಾದ ಅಗ್ಗವಾದ ವಿದೇಶಿ ಕೃಷಿ ಉತ್ಪನ್ನಗಳು ನಮ್ಮ ದೇಶೀಯ ಮಾರುಕಟ್ಟೆಗೆ ಲಗ್ಗೆ ಹಾಕಿದ ಪರಿಣಾಮವಾಗಿ ದೇಶೀಯ ಕೃಷಿ ಮಾರುಕಟ್ಟೆ ಕುಸಿದು ಸಣ್ಣ ಮತ್ತು ಮಧ್ಯಮ ರೈತರು ತಾವು ಖರ್ಚು ಮಾಡಿದ ಹಣವನ್ನು ವಾಪಸು ಪಡೆಯಲಾಗದ ದುಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಇನ್ನೊಂದೆಡೆ ಉದಾರೀಕರಣದ ನೀತಿಯ ಫಲವಾಗಿ

ಬೀಜ, ಗೊಬ್ಬರ, ಕೀಟನಾಶಕ ಕಂಪನಿಗಳ ಮೇಲಿನ ಸರ್ಕಾರದ ನಿಯಂತ್ರಣ ಸಡಿಲಗೊಂಡು ಗುಣಮಟ್ಟ ಕುಸಿಯುತ್ತಿದೆ. ಕಳಪೆ ಬೀಜ, ಕೀಟನಾಶಕಗಳು ಮಾರುಕಟ್ಟೆಗೆ ಲಗ್ಗೆ ಹಾಕಿ ರೈತರ ಬದುಕನ್ನು ಬಲಿ ತೆಗೆದುಕೊಳ್ಳುತ್ತಿವೆ. ಹೀಗಾಗಿ ಸಣ್ಣ, ಅತಿ ಸಣ್ಣ ರೈತರು ಇತ್ತೀಚಿನ ದಿನಗಳಲ್ಲಿ ಕೃಷಿಯನ್ನು ಕೈಬಿಡುತ್ತಿದ್ದಾರೆ. ಕೂಲಿ ಹುಡುಕಿಕೊಂಡು ನಗರ ಪ್ರದೇಶಗಳಿಗೆ ಗುಳೆ ಹೋಗುತ್ತಿದ್ದಾರೆ.

೨೦೦೬-೦೭ರ ಆರ್ಥಿಕ ಸಮೀಕ್ಷೆಯು ಕೈಗಾರಿಕಾ ಕ್ಷೇತ್ರವು ಕಳೆದ ಸಾಲಿನಲ್ಲಿ ಶೇ. ೧೦.೮ರಷ್ಟು ಬೆಳವಣಿಗೆ ಹೊಂದಿದೆ ಎಂದು ವರದಿ ಸಲ್ಲಿಸಿದೆ ಹಾಗೂ ವಿದೇಶಿ ವ್ಯಾಪಾರ ಹೆಚ್ಚಾಗಿದ್ದು ೮೯.೪೯ ಶತಕೋಟಿ ಡಾಲರ್‌ಗಳ ರಫ್ತು ವಹಿವಾಟು ನಡೆದಿರುವುದಾಗಿ ಹೇಳಿದೆ . ಆದರೆ ಅದೇ ಸಂದರ್ಭದಲ್ಲಿ ನಿರುದ್ಯೋಗ ಉಲ್ಬಣಗೊಂಡಿದೆ ಎಂಬ ಆತಂಕವನ್ನು ವ್ಯಕ್ತಪಡಿಸಿದೆ. ಕಳೆದ ೫ ವರ್ಷಗಳಿಂದ ನಿರುದ್ಯೋಗ ಶೇ. ೩.೧ರಷ್ಟು ಹೆಚ್ಚಾಗಿದೆ ಎಂದು ಸಮೀಕ್ಷೆ ಹೇಳುತ್ತದೆ. ಅಂದರೆ ಇದು ಉದ್ಯೋಗ ರಹಿತ ಬೆಳವಣಿಗೆ. ಹಾಗೆಂದರೇನು?

ಜಾಗತೀಕರಣ, ಉದಾರೀಕರಣ ನೀತಿಗಳು ಜಾರಿಯಾದ ಮೇಲೆ ನಮ್ಮ ದೇಶದಲ್ಲಿ ಚಾಲ್ತಿಯಲ್ಲಿದ್ದ ಏಕಸ್ವಾಮ್ಯ ಬಂಡವಾಳಿಗರನ್ನು ನಿಯಂತ್ರಿಸುವ ಎಂಆರ್‌ಟಿಪಿ ಕಾಯ್ದೆಗೆ ತಿದ್ದುಪಡಿಯನ್ನು ತರಲಾಯಿತು. ಇದರಿಂದ ಸಣ್ಣ ಕೈಗಾರಿಕೆಗಳಿಗೆ ಮಾತ್ರ ಮೀಸಲಾಗಿದ್ದ ಉತ್ಪಾದನಾ ಕ್ಷೇತ್ರಗಳನ್ನು ಏಕಸ್ವಾಮ್ಯ ಬಂಡವಾಳಿಗರಿಗೆ ಹಾಗೂ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ತೆರೆದಿಡಲಾಯಿತು. ಹೀಗಾಗಿ ಸಣ್ಣ ಉದ್ದಿಮೆಗಳು ಸಂಪೂರ್ಣ ನಾಶವಾದವು. ಬೆಂಗಳೂರು ನಗರದಲ್ಲಿ ಏಶಿಯಾದ ಅತಿ ದೊಡ್ಡ ಕೈಗಾರಿಕಾ ಎಸ್ಟೇಟ್ ಎಂಬ ಖ್ಯಾತಿಯನ್ನು ಹೊಂದಿದ್ದ ಪೀಣ್ಯ ಕೇಗಾರಿಕಾ ಪ್ರದೇಶದ ಶೇ.೮೦ರಷ್ಟು ಉದ್ದಿಮೆಗಳು ಕದ ಮುಚ್ಚಿದವು. ರಾಜ್ಯದಾದ್ಯಂತ ೨.೬ ಲಕ್ಷ ಸಣ್ಣ ಉದ್ದಿಮೆಗಳಲ್ಲಿ ಶೇ. ೫೦ಕ್ಕೂ ಹೆಚ್ಚು ಮುಚ್ಚಿ ಹೋದವು. ದಾವಣಗೆರೆಯ ಬಟ್ಟೆ ಗಿರಣಿಗಳು, ಬೆಂಗಳೂರು, ಗುಲ್ಬರ್ಗ, ರಾಯಚೂರುಗಳ ಗಿರಣಿಗಳು ಮುಚ್ಚಿ ಹೋಗಿವೆ. ಮಂಡ್ಯದ 'ಮೈ ಶುಗರ್' ಕಾರ್ಖಾನೆಯನ್ನೊಳಗೊಂಡಂತೆ ಎಲ್ಲಾ ಸಕ್ಕರೆ ಕಾರ್ಖಾನೆಗಳು ರೋಗಗ್ರಸ್ಥವಾಗಿವೆ. ಹೀಗಾಗಿ ಈ ಕೈಗಾರಿಕೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಕೋಟ್ಯಾಂತರ ಕಾರ್ಮಿಕರು ಕೆಲಸ ಕಳೆದುಕೊಂಡು ನಿರುದ್ಯೋಗಿಗಳಾಗಿದ್ದಾರೆ. ಸಾವಿರಾರು ಸಣ್ಣ ಉದ್ದಿಮೆದಾರರು ಆತ್ಮಹತ್ಯೆಗೆ ಮೊರೆಹೊಕ್ಕಿದ್ದಾರೆ.

ಇನ್ನೊಂದೆಡೆ ಖಾಸಗೀಕರಣ ಪ್ರಕ್ರಿಯೆ ಮುಂದುವರೆದಿದೆ. ಬೆಂಗಳೂರು ನಗರ ಒಂದರಲ್ಲೇ ಕೇಂದ್ರ ಸಾರ್ವಜನಿಕ ಉದ್ದಿಮೆಗಳಾದ ಎಚ್‌ಎಂಟಿ, ಎಚ್‌ಎಎಲ್, ಐಟಿಐ, ಬಿಎಚ್‌ಇಎಲ್, ಬಿಇಎಲ್, ಬಿಇಎಂಎಲ್ ಇತ್ಯಾದಿಗಳಲ್ಲಿ ಸುಮಾರು ೮೦,೦೦೦ ಮಂದಿ ದುಡಿಮೆಗಾರರಿದ್ದರು. ಇಂದು ಸಂಖ್ಯಾ ಕಡಿತಕ್ಕೆ ತುತ್ತಾದ ಇವರಲ್ಲಿ ಅರ್ಧದಷ್ಟು ಕೆಲಸಗಾರರಿಲ್ಲ. ಬ್ಯಾಂಕುಗಳ ಆಧುನಿಕರಣ ಪ್ರಕ್ರಿಯೆ ೧೦ ಲಕ್ಷ ಉದ್ಯೋಗಿಗಳನ್ನು ಮನೆಗಟ್ಟಿದೆ. ಎಲ್‌ಐಸಿಯಲ್ಲಿಯೂ ಇದೇ ಗತಿ. ದೇಶದ ಅತಿ ದೊಡ್ಡ ಉದ್ಯೋಗದಾತನಾದ ರೈಲ್ವೆಯಲ್ಲಿ ೪ಲಕ್ಷ ಕಾರ್ಮಿಕರು ಉದ್ಯೋಗ ವಂಚಿತರಾಗಿದ್ದಾರೆ. ಉಳಿದ ನಾಲ್ಕು ಲಕ್ಷ ಕಾರ್ಮಿಕರ ಪರಿಸ್ಥಿತಿಯು ಅದೇ ಜಾಡನ್ನು

ಹಿಡಿದಿದೆ. ಕೇಂದ್ರ ಸರ್ಕಾರದ ೪೦ ಲಕ್ಷ ಹುದ್ದೆಗಳಲ್ಲಿ ೧೨.೫ ಲಕ್ಷ ಹುದ್ದೆಗಳು ನಿರ್ನಾಮದ ಹಾದಿ ಹಿಡಿದಿವೆ. ಕರ್ನಾಟಕವೂ ಈ ವಿಷಯದಲ್ಲಿ ಹಿಂದೆ ಬಿದ್ದಿಲ್ಲ. ರಾಜ್ಯದ ೯೬ ಉದ್ದಿಮೆಗಳಲ್ಲಿ ೩೬ ರೋಗಗ್ರಸ್ಥವಾಗಿವೆ. ಇನ್ನೂ ಹಲವು ದುರ್ಮರಣಕ್ಕೀಡಾಗಿವೆ. ರಾಜ್ಯ ಸರ್ಕಾರದ ಹುದ್ದೆಗಳಲ್ಲಿ ೧ಲಕ್ಷ ಹುದ್ದೆಗಳನ್ನು ರದ್ದುಪಡಿಸಲಾಗಿದೆ. ೨ ಲಕ್ಷ ಹುದ್ದೆಗಳು ಖಾಲಿ ಬಿದ್ದಿವೆ. ಸೇವಾ ಕ್ಷೇತ್ರಗಳಾದ ಸಾರಿಗೆ, ವಿದ್ಯುತ್ ಇತ್ಯಾದಿಗಳು ಖಾಸಗೀಕರಣ ಪ್ರಕ್ರಿಯೆಗೊಳಪಟ್ಟಿವೆ. ಇನ್ನು ಖಾಸಗೀ ವಲಯದಲ್ಲಿ ಗರಿಷ್ಠ ಲಾಭವನ್ನೇ ಪರಮ ಗುರಿಯಾಗಿ ಹೊಂದಿರುವ ಮಾಲೀಕರು ಕಾರ್ಮಿಕರಿಗೆ ಕೆಲಸ ನೀಡಿಯಾರೆ? ಬಹುರಾಷ್ಟ್ರೀಯ ಕಂಪನಿಗಳ ಮಾಲೀಕರೊಡಗೂಡಿ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು, ಅತ್ಯಂತ ಕಡಿಮೆ ಕೆಲಸಗಾರರಿಂದ ಅತ್ಯಧಿಕ ಸಮಯ ದುಡಿಸಿಕೊಂಡು, ಅತಿ ಹೆಚ್ಚಿನ ಲಾಭಗಳಿಸಬೇಕೆಂಬ ಕಡು ಲೋಭಿಗಳವರು. ಆದ್ದರಿಂದ ಆರ್ಥಿಕ ಸಮೀಕ್ಷೆಯೇ ಹೇಳುವಂತೆ ಉದ್ಯೋಗ ನೇಮಕಾತಿ ಕಳೆದ ದಶಕದಲ್ಲಿ ಕುಸಿದುಬಿದ್ದು ೦.೩೮ನ್ನು ತಲುಪಿದೆ. ಆದ್ದರಿಂದ ನಿರುದ್ಯೋಗ ಗ್ರಾಮೀಣ ಹಾಗೂ ನಗರ ಪ್ರದೇಶ ಎರಡರಲ್ಲೂ ವ್ಯಾಪಕವಾಗಿ ತಾಂಡವವಾಡುತ್ತಿದ್ದು ಯುವಜನತೆಯನ್ನು ಮುಂದೇನು ಎಂದು ದಿಕ್ಕುತೋಚದ ಪರಿಸ್ಥಿತಿಗೆ ತಳ್ಳಿದೆ.

ಈ ರೀತಿ ದೇಶದಾದ್ಯಂತ ನಿರುದ್ಯೋಗಿಗಳ ಒಂದು ಬೃಹತ್ ಸೇನೆಯೇ ಬೆಳೆದುನಿಂತಿದ್ದು, ಅವರ ಅಸಹಾಯಕ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ಬಳಸು–ಬಿಸಾಕು (ಹೈರ್ ಅಂಡ್ ಫೈರ್) ನೀತಿಯನ್ನು ಜಾರಿಗೆ ತರಲಾಗುತ್ತಿದೆ. ಬೇಕಾದರೆ ಕೆಲಸ ಮಾಡು, ಇಲ್ಲವಾದರೆ ಬಿಟ್ಟು ಹೋಗು ಎಂಬ ಧೋರಣೆಯಿಂದ ಅತ್ಯಲ್ಪ ಕೂಲಿ/ವೇತನವನ್ನು ನೀಡಿ ವಿವಿಧ ರೀತಿಯ ಹಣೆಪಟ್ಟಿ ಕಟ್ಟಿ, ಅಂದರೆ ಅರೆಕಾಲಿಕ, ದಿನಗೂಲಿ, ಗುತ್ತಿಗೆ, ಟಾಸ್ಕ್‌ವರ್ಕ್, ಕೈ ರಸೀತಿ ಇತ್ಯಾದಿ ಹೆಸರುಗಳಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಅಂತೆಯೇ ಅದಕ್ಕೆ ಪೂರಕವಾಗಿ ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ಮಾಡಲಾಗುತ್ತಿದೆ. ಭಾರತದ ಕಾರ್ಮಿಕ ಕಾಯ್ದೆ ೧೯೨೬, ಕೈಗಾರಿಕಾ ವಿವಾದ ಕಾಯ್ದೆ ೧೯೪೭, ಗುತ್ತಿಗೆ ಕಾರ್ಮಿಕ ಪದ್ಧತಿ (ನಿಯಂತ್ರಣ ಹಾಗೂ ರದ್ದತಿ) ಕಾಯ್ದೆ ೧೯೭೦, ಈ ಎಲ್ಲಾ ಕಾಯ್ದೆಗಳಿಗೆ ತಿದ್ದುಪಡಿಯನ್ನು ತಂದು ಕಾರ್ಮಿಕರನ್ನು ಅವರ ಹಕ್ಕುಗಳಿಂದ ವಂಚಿತಗೊಳಿಸಿ, ಮಾಲೀಕರ ಸ್ವೇಚ್ಛೆಯ ಕಿರುಕುಳಗಳಿಗೆ ಅವರನ್ನು ಬಲಿಪಶುಗಳನ್ನಾಗಿ ಮಾಡಲಾಗುತ್ತಿದೆ. ಸಾಲದೆಂಬಂತೆ ಕಾರ್ಮಿಕರ ಮೇಲೆ ಪೋಲೀಸರ, ಗೂಂಡಾಗಳ ಆಕ್ರಮಣ, ಹಲ್ಲೆ ಹೆಚ್ಚಾಗುತ್ತಿವೆ. ನ್ಯಾಯಯುತ ಬೇಡಿಕೆಗಳಿಗಾಗಿ ಕಾರ್ಮಿಕರು ನಡೆಸುವ ಹೋರಾಟಗಳನ್ನು ಅತ್ಯಂತ ಕ್ರೂರವಾಗಿ, ಅಮಾನವೀಯವಾಗಿ ದಮನ ಮಾಡಲಾಗುತ್ತಿದೆ. ಹರಿಯಾಣದ ಗುರ್‌ಗಾಂವ್‌ನ ಹೋಂಡಾ ಫ್ಯಾಕ್ಟರಿ ಕಾರ್ಮಿಕರ ಮೇಲೆ ಸರ್ಕಾರ ನಡೆಸಿದ ಬರ್ಬರ ದಮನ, ಉತ್ತರ ಪ್ರದೇಶ ಮತ್ತು ಬಿಹಾರ್‌ಗಳಲ್ಲಿ ಗ್ರಾಮ ಶಿಕ್ಷಕರ ಮೇಲೆ, ಪಶ್ಚಿಮ ಬಂಗಾಳ ಮತ್ತು ಒರಿಸ್ಸಾಗಳಲ್ಲಿ ಕಾರ್ಮಿಕರ ಮೇಲೆ ಪೋಲೀಸರು ನಡೆಸಿದ ದೌರ್ಜನ್ಯ ಬರ್ಬರ ಯುಗವನ್ನು ನೆನಪಿಸುತ್ತವೆ.

ವಿವಿಧ ಇಲಾಖೆ ಹಾಗೂ ಸಾರ್ವಜನಿಕ ಉದ್ದಿಮೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಉದ್ಯೋಗ ಭದ್ರತೆ ಇಲ್ಲ. ಮೇಲಧಿಕಾರಿಗಳ, ಮಾಲೀಕರ ಕಿರುಕುಳ ಹೆಚ್ಚಾಗುತ್ತಿದೆ.

ಅನಿಯಮಿತ ಸಮಯದವರೆಗೆ ಬೇಕಾಬಿಟ್ಟಿ ದುಡಿಸಿಕೊಳ್ಳುವ ಪರಂಪರೆ ಪ್ರಾರಂಭವಾಗಿದ್ದು, ಬೆಲೆ ಏರಿಕೆ, ಹಣದುಬ್ಬರಗಳಿಗನುಗುಣವಾಗಿ ವೇತನ ಹೆಚ್ಚಳವಾಗುತ್ತಿಲ್ಲ. ೨೦೦೪ ಜನವರಿ ೧ರಿಂದ ನೇಮಕಾತಿಯಾದ ನೌಕರರಿಗೆ ನಿವೃತ್ತಿ ವೇತನವನ್ನು ತೆಗೆದುಹಾಕಲಾಗಿದೆ. ನಿವೃತ್ತಿವೇತನ ಬಯಸುವ ನೌಕರರು ಪಿಂಚಣಿ ನಿಧಿಗೆ ತಾವೇ ಹಣ ಕಟ್ಟಬೇಕು. ಆ ನಿಧಿಯಲ್ಲಿ ಶೇ.೧೦ ಅನ್ನು ಮಾರುಕಟ್ಟೆಯಲ್ಲಿ ತೊಡಗಿಸಿ ಅದರಿಂದ ಬಂದ ಹಣದಿಂದ ಪೆನ್‌ಷನ್ ನೀಡಲಾಗುವುದಂತೆ. ಶೇರು ಮಾರುಕಟ್ಟೆಯ ಜೂಜಾಟದಲ್ಲಿ ಕಂಪನಿ ಮುಳುಗಿದರೆ ಪೆನ್‌ಷನ್‌ಗೆ ತಿಲಾಂಜಲಿ. ೨೦-೩೦ ವರ್ಷಗಳ ಕಾಲ ಸಲ್ಲಿಸಿದ ಸೇವೆಗಾಗಿ ವೃದ್ಧಾಪ್ಯದಲ್ಲಿ ನೋಡಿಕೊಳ್ಳಬೇಕಾದ್ದು ಮಾಲೀಕನ ಕರ್ತವ್ಯ. ಆದರೆ ಜಾಗತೀಕರಣ ಆ ಜವಾಬ್ದಾರಿಯನ್ನು ನಿರಾಕರಿಸುತ್ತದೆ. ವಯಸ್ಸಾದ ಹಿರಿಯರನ್ನು ಬೀದಿ ಭಿಕಾರಿಗಳನ್ನಾಗಿ ಮಾಡುತ್ತದೆ.

ಜಾಗತೀಕರಣದ ಕ್ರೂರ ಬಾಹುಗಳು ಬಹಳ ದೀರ್ಘವಾಗಿವೆ. ರೈತರು, ಕೃಷಿ ಕಾರ್ಮಿಕರು, ನೌಕರರನ್ನೆಲ್ಲಾ ಹಿಂಡಿ ಹಿಪ್ಪೆ ಮಾಡಿದ ಮೇಲೆ ಇದೀಗ ಅದು ತನ್ನ ರಾಕ್ಷಸೀ ಬಾಹುಗಳನ್ನು ಚಿಲ್ಲರೆ ವ್ಯಾಪಾರಿಗಳತ್ತ ಹರಿಸಿದೆ. ಚಿಲ್ಲರೆ ವ್ಯಾಪಾರಿಗಳನ್ನು ಸಂಪೂರ್ಣ ನಾಶಮಾಡುವಂತಹ ವ್ಯಾಟ್ ತೆರಿಗೆ ಪದ್ಧತಿಯನ್ನು ಜಾರಿಗೊಳಿಸಲಾಗಿದೆ. ಇದರಿಂದ ಸಣ್ಣಪುಟ್ಟ ವ್ಯಾಪಾರಿಗಳು ತೆರಿಗೆ ಅಧಿಕಾರಿಗಳ ಕಬಂಧ ಬಾಹುಗಳಲ್ಲಿ ನಲುಗಿ ಸಾವನ್ನಪ್ಪುತ್ತಾರೆ. ನಂತರ ಅಳಿದುಳಿದ ವ್ಯಾಪಾರಿಗಳನ್ನು ಮುಗಿಸಲು ಚಿಲ್ಲರೆ ವ್ಯಾಪಾರಿ ಕ್ಷೇತ್ರವನ್ನು ಭಾರಿ ಬಂಡವಾಳಿಗರಿಗೆ, ವಿದೇಶಿ ಬಂಡವಾಳಿಗರಿಗೆ ತೆರೆದಿಡಲಾಗುತ್ತಿದೆ. ಈಗಾಗಲೇ ಅಮೆರಿಕಾದ ವಾಲ್‌ಮಾರ್ಟ್, ಜರ್ಮನಿಯ ಮೆಟ್ರೊ, ಭಾರತದ ಬೃಹತ್ ಉದ್ಯಮಿಗಳಾದ ರಿಲಾಯನ್ಸ್ ಮುಂತಾದವರು ವಿವಿಧ ನಗರಗಳಲ್ಲಿ ಬೃಹತ್ ದಿನಸಿ ಅಂಗಡಿಗಳನ್ನು ತೆರೆದಿದ್ದಾರೆ. ಮುಂಬರುವ ದಿನಗಳಲ್ಲಿ ಇವರೊಂದಿಗೆ ಸ್ಪರ್ಧಿಸಲಾಗದೆ ಸಣ್ಣ ವ್ಯಾಪಾರಿಗಳು ಬೀದಿಪಾಲಾಗುತ್ತಾರೆ.

ಈಗಾಗಲೇ ಜಾಗತೀಕರಣ ರೈತರ ಬದುಕನ್ನು ಕಡುಕಷ್ಟಕ್ಕೆ ತಳ್ಳಿರುವುದನ್ನು ನಾವು ಗಮನಿಸಿದೆವು. ಅವರ ಬದುಕನ್ನು ಸುಧಾರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ಬದಲು ಅವರನ್ನು ಭೂಮಿಯಿಂದಲೇ ಉಚ್ಚಾಟಿಸುವ ಹೊಸ ಯೋಜನೆಯೊಂದನ್ನು ರೂಪಿಸಲಾಗಿದೆ. ಅದುವೇ ವಿಶೇಷ ಆರ್ಥಿಕ ವಲಯಗಳು (ಎಸ್‌ಇಜೆಡ್). ಕೈಗಾರಿಕೀಕರಣದ ಹೆಸರಿನಲ್ಲಿ ರೈತರ ಸಾವಿರಾರು ಹೆಕ್ಟೇರು ಭೂಮಿಯನ್ನು ಜಪ್ತಿ ಮಾಡಿಕೊಂಡು ಬಂಡವಾಳಿಗರಿಗೆ ನೀಡಲಾಗುವುದು. ಕರ್ನಾಟಕದಲ್ಲಿಯೇ ಸುಮಾರು ೬೪,೦೦೦ ಎಕರೆ ಭೂಮಿ ವಶಪಡಿಸಿಕೊಂಡು ೪೫ ಎಸ್‌ಇಜೆಡ್‌ಗಳನ್ನು ಸ್ಥಾಪನೆ ಮಾಡುವುದಾಗಿ ಕೈಗಾರಿಕಾ ಮಂತ್ರಿಗಳು ವಿಧಾನಸಭೆಯಲ್ಲಿ ಹೇಳಿದ್ದಾರೆ. ಅವರೇ ಹೇಳಿದಂತೆ ಈ ಭೂಮಿಯಲ್ಲಿ ಶೇ.೨೫ರಷ್ಟು ಮಾತ್ರ ಕೈಗಾರಿಕಾ ಉದ್ದೇಶಕ್ಕೆ ಬಳಕೆಯಾಗಿ ಉಳಿದ ಶೇ.೭೫ ಅನ್ನು ರಿಯಲ್ ಎಸ್ಟೇಟ್ ದಂಧೆಗೆ ಉಪಯೋಗಿಸಲಾಗುವುದುದಂತೆ. ಅಂದರೆ ಬಾರ್‌ಗಳು, ಕ್ಲಬ್‌ಗಳು, ಸಿನಿಮಾ ಸಂಕೀರ್ಣಗಳು, ಹೋಟೆಲ್ ಸಮುಚ್ಚಯಗಳನ್ನು ಸ್ಥಾಪಿಸಿ ಶ್ರೀಮಂತರ ಮೋಜಿನ ತಾಣಗಳನ್ನಾಗಿ ಮಾಡಲಾಗುತ್ತದೆ. ಅದಕ್ಕಾಗಿ ಬಡ ರೈತರ ಬದುಕಿನ ಆಸರೆಯನ್ನೇ ಬಲಿಕೊಡಲಾಗುತ್ತಿದೆ. ಫಲವತ್ತಾದ ಬಹು ಬೆಳೆಯನ್ನು

ತೆಗೆಯುವ ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತಿದೆ. ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಹಾಗೂ ಬಿಜೆಪಿ, ಜೆಡಿ(ಎಸ್) ಒಳಗೊಂಡಂತೆ ಎಲ್ಲಾ ರಾಜಕೀಯ ಪಕ್ಷಗಳು ತಾವು ಅಧಿಕಾರ ನಡೆಸುತ್ತಿರುವ ರಾಜ್ಯಗಳಲ್ಲಿ ಎಸ್‌ಇಜೆಡ್ ಗಳನ್ನು ಸ್ಥಾಪನೆ ಮಾಡುತ್ತಿದ್ದಾರೆ. ಇನ್ನು ತಮ್ಮನ್ನೇ ಎಡವಾದಿಯೆಂದು ಕರೆದುಕೊಳ್ಳುವ, ವಿವಿಧ ರಾಜ್ಯಗಳಲ್ಲಿ ಎಸ್‌ಇಜೆಡ್ ವಿರೋಧಿಸುತ್ತಿರುವ ಸಿಪಿಐ(ಎಂ) ಪಕ್ಷವು ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ ರಾಸಾಯನಿಕ ಎಸ್‌ಇಜೆಡ್‌ಗೆ ಹಾಗೂ ಸಿಂಗೂರ್‌ನಲ್ಲಿ ಟಾಟಾಗಳ ಕಾರು ಕೈಗಾರಿಕೆಗೆ ಭೂಮಿ ಕೊಡಲು ಒಪ್ಪದ ರೈತರ ಮೇಲೆ ಅತ್ಯಂತ ಅಮಾನುಷವಾಗಿ, ರಾಕ್ಷಸೀ ರೂಪದಲ್ಲಿ ಪೋಲೀಸರನ್ನು ಮತ್ತು ಗೂಂಡಾಗಳನ್ನು ಹರಿಬಿಟ್ಟು ದೌರ್ಜನ್ಯ ನಡೆಸಿದೆ. ಹಿಟ್ಲರ್, ಮುಸೋಲಿನಿ, ಬುಷ್, ಬ್ಲೇರ್ ನಾಚುವಂತೆ ನಿಶ್ಯಸ್ತ್ರರಾದ ಜನರ ಮೇಲೆ ಬೇಕಾಬಿಟ್ಟಿಯಾಗಿ ಗೋಲಿಬಾರ್ ಮಾಡಿದೆ. ಮಹಿಳೆಯರ ಮೇಲೆ ಅತ್ಯಾಚಾರವೆಸಗಿದೆ. ಮಕ್ಕಳು, ಮಹಿಳೆಯರು, ವೃದ್ಧರನ್ನು ಚೆಂಡಾಡಿದೆ. ಇಡೀ ಪ್ರದೇಶದಲ್ಲಿ ಭಯದ ವಾತಾವರಣವನ್ನು ಸೃಷ್ಟಿಸಿ ರೈತರನ್ನು ಅಲ್ಲಿಂದ ಓಡಿಸಿ ತಮ್ಮ ಒಡೆಯರಾದ ಇಂಡೋನೇಷ್ಯಾದ ಸಲೀಂಗೆ ಸುಮಾರು ೧೦,೦೦೦ ಎಕರೆ ಭೂಮಿ ಕೊಡಿಸಲು ಸಿಪಿಎಂ ಪ್ರಯತ್ನಿಸಿದೆ. ಆದರೆ ನಂದಿಗ್ರಾಮದ ವೀರ ಜನತೆ ಎಸ್‌ಯುಸಿಐ ಪಕ್ಷದ ಮಾರ್ಗದರ್ಶನದಲ್ಲಿ 'ಭೂಮಿ ಉಚ್ಛೇಡ್ ಪ್ರತಿರೋಧ ಸಮಿತಿ' ಯನ್ನು ರಚಿಸಿಕೊಂಡು ಅತ್ಯಂತ ಶೌರ್ಯದಿಂದ, ವಿವೇಕದಿಂದ ಸಂಘಟಿತರಾಗಿ ಶಿಸ್ತುಬದ್ಧ ಹೋರಾಟವನ್ನು ನಡೆಸಿ ಸಿಪಿಐ (ಎಂ) ಸರ್ಕಾರಕ್ಕೆ ಬುದ್ಧಿ ಕಲಿಸಿದ್ದಾರೆ. ನಂದಿಗ್ರಾಮದ ಎಸ್‌ಇಜೆಡ್‌ಗೆ ಕೊನೆ ಹೇಳಿದ್ದಾರೆ. ತನ್ಮೂಲಕ ದೇಶದಾದ್ಯಂತ ಎಲ್ಲೆಡೆ ರೈತರು, ಕಾರ್ಮಿಕರಿಗೆ, ಎಸ್‌ಇಜೆಡ್ ವಿರುದ್ಧದ ಹೋರಾಟಕ್ಕೆ ಸ್ಫೂರ್ತಿಯ ಸೆಲೆಯಾಗಿದ್ದಾರೆ.

ರೈತರ ಭೂಮಿಯನ್ನು ಅತ್ಯಂತ ಅನ್ಯಾಯದಿಂದ ವಶಪಡಿಸಿಕೊಳ್ಳುವುದು ಈ ಎಸ್‌ಇಜೆಡ್‌ಗಳ ಒಂದು ವಿಶೇಷವಾದರೆ ಮತ್ತೊಂದು ಈ ಎಸ್‌ಇಜೆಡ್‌ಗಳಲ್ಲಿ ಸೇವೆ ಮಾಡುವ ಕಾರ್ಮಿಕರ ಬರ್ಬರ ಶೋಷಣೆ. ಎಸ್‌ಇಜೆಡ್‌ಗಳಿಗೆ ಈಗ ಚಾಲ್ತಿಯಲ್ಲಿರುವ ಕಾರ್ಮಿಕ ಕಾನೂನುಗಳು ಅನ್ವಯಿಸುವುದಿಲ್ಲ. ಆದ್ದರಿಂದ ಮಾಲೀಕರಿಗೆ ಗರಿಷ್ಠ ೮ ಗಂಟೆ ದುಡಿತ, ಕನಿಷ್ಠ ವೇತನ, ವಾರದ ರಜೆ, ನಾಗರಿಕ ಕೆಲಸದ ವಾತಾವರಣ ಇವುಗಳನ್ನು ಒದಗಿಸುವ ನಿರ್ಬಂಧ ಇರುವುದಿಲ್ಲ. ಅವರು ಗುತ್ತಿಗೆ ಪದ್ಧತಿಯಲ್ಲಿ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಬಹುದು, ಬಳಸು-ಬಿಸಾಕು ನೀತಿಯನ್ನು ಅನುಸರಿಸಬಹುದು ಇತ್ಯಾದಿ ಹಾಗೂ ಬಂಡವಾಳಿಗರಿಗೆ ತೆರಿಗೆ ವಿನಾಯ್ತಿ ಮೊದಲಾದ ವಿಶೇಷ ಸವಲತ್ತುಗಳನ್ನು ನೀಡಲಾಗುವುದು. ಒಟ್ಟಿನಲ್ಲಿ ಎಸ್‌ಇಜೆಡ್‌ಗಳಲ್ಲಿ ಬಂಡವಾಳಿಗರು ನಿರಂಕುಶ ಪ್ರಭುಗಳು, ಕಾರ್ಮಿಕರು, ಗುಲಾಮರು.

ಇಂತಹ ಸಂದರ್ಭದಲ್ಲಿ ಎಲ್ಲಾ ಕ್ಷೇತ್ರಗಳ ದುಡಿಯುವ ಜನತೆ ಒಂದುಗೂಡಬೇಕು. ಬಂಡವಾಳಶಾಹಿ ಪರ ಜಾಗತೀಕರಣವನ್ನು ಸೋಲಿಸಲು 'ಮಾಡು ಇಲ್ಲವೇ ಮಡಿ' ಹೋರಾಟಕ್ಕೆ ಸಜ್ಜಾಗಬೇಕು.

– ಸಾಭಾರ : ಕಾರ್ಮಿಕ ದೃಷ್ಟಿಕೋನ

* * *

ದೇಶದ ಹಿತದೃಷ್ಟಿಯಿಂದ ಖಾದಿ ಉಳಿಯಲೇ ಬೇಕು!

– ಸುರೇಂದ್ರ ಕೌಲಗಿ

ಚರಕ ವಾಣಿಜ್ಯೋದ್ಯಮದ ಯುದ್ಧದ ಸಂಕೇತವಲ್ಲ. ಬದಲಿಗೆ ಅದು ವಾಣಿಜ್ಯೋದ್ಯಮದ ಶಾಂತಿಯ ಸಂಕೇತ. – ಮಹಾತ್ಮಾ ಗಾಂಧೀ

ಇಂದಿನ ವಿಜ್ಞಾನ ತಂತ್ರಜ್ಞಾನ ಹಾಗೂ ಜಾಗತೀಕರಣದ ಪೈಪೋಟಿಯ ಭರಾಟೆಯಲ್ಲಿ ಖಾದಿ ಉದ್ಯಮಕ್ಕೆ ಸ್ಥಾನವಿಲ್ಲ, ಅದು ಬದುಕಲೂ ಆರದು ಎಂಬ ಅಭಿಪ್ರಾಯ ಸಾರ್ವತ್ರಿಕವಾಗಿರುವಾಗ ದೇಶದ ಹಿತದೃಷ್ಟಿಯಿಂದ ಖಾದಿ ಉಳಿಯಲೇ ಬೇಕು ಎಂದು ಹೇಳಿದರೆ ಅದನ್ನು ನಂಬುವವರು ಯಾರು? ಕೇಳುವವರು ಯಾರು? ಎಂಥ ಗಾಢ ಕತ್ತಲೇಯೇ ಆಗಿರಲಿ, ಅದು ಕಾಲಕ್ರಮೇಣ ಸರಿದು ಬೆಳಕು ಹರಿಯಲೇ ಬೇಕು. ಅಂತೇಯೇ ಇಂದಿನ ತಂತ್ರಜ್ಞಾನದ ಗ್ರಹಣದ ಛಾಯೆ ದೂರ ಸರಿದಾದ ಮೇಲೆ ಆಧುನಿಕ ತಂತ್ರಜ್ಞಾನ ಮಾನವಕುಲಕ್ಕೆ ಮಾರಕ ಎಂಬ ಜ್ಞಾನೋದಯವಾಗುವುದರಲ್ಲಿ ಸಂದೇಹವಿಲ್ಲ. ಅಂಥ ಜ್ಞಾನೋದಯವಾದಾಗ ಮಾನವೀಯ ಮೌಲ್ಯವುಳ್ಳ ತಂತ್ರಜ್ಞಾನದ ಆವಿಷ್ಕಾರದ ಹರಿಕಾರನಾಗಿ, ಯುಕ್ತ ತಂತ್ರಜ್ಞಾನದ ನಾಯಕನಾಗಿ ಚರಕ ಮಂಚೂಣಿಯಲ್ಲಿರುವುದು! ಇಂಥ ಅಮೃತ ಘಳಿಗೆ ಖಾದಿಗೆ ಕೂಡಿ ಬರುವ ಕ್ಷಣಗಣನೆ ಆರಂಭವಾಗಿದೆ. ಏಕೆಂದರೆ ಇಂದಿನ ತಂತ್ರಜ್ಞಾನ ಪೂರ್ಣವಾಗಿ ರಜೋಗುಣದಿಂದ ಕೂಡಿದುದಾಗಿದೆ. ಅಸಾಧ್ಯವಾದುದೆಲ್ಲವನ್ನೂ ಸಾಧ್ಯ ಮಾಡಬೇಕೆಂಬ ಮನೋಇಚ್ಛೆ ಮಾನವನಲ್ಲಿ ಬಲವಾಗಿ ಬೇರೂರುತ್ತಿದೆ. ಆದರೆ ಮನುಕುಲ ನಡೆದು ಬಂದ ದಾರಿಯನ್ನು ನೋಡಿದರೆ, ಅದರ ವಿಕಾಸವನ್ನು ನೋಡಿದರೆ ಕಾಲಕಾಲಕ್ಕೆ ರಜೋಗುಣವನ್ನು ದೂರ ಸರಿಸಿ ಸತ್ವಗುಣವನ್ನು ತನ್ನದನ್ನಾಗಿ ಮಾಡಿಕೊಳ್ಳುವ ಪ್ರಯತ್ನವನ್ನು ಸಮಾಜ ಮಾಡಿರುವ ಗುರುತುಗಳು ಕಂಡು ಬರುತ್ತವೆ. ತಂತ್ರಜ್ಞಾನದ ಯುಗ ಪ್ರಾರಂಭವಾಗಿ ಸುಮಾರು ನೂರೈವತ್ತು ವರ್ಷಗಳಲ್ಲೇ ತಂತ್ರಜ್ಞಾನದ ವಿರುದ್ಧದ ಕೂಗು ಗಟ್ಟಿಗೊಳ್ಳುತ್ತಾ ಸಾಗಿದೆ. ಈ ತಂತ್ರಜ್ಞಾನದ ಸೊಕ್ಕಿನಿಂದಲೇ ಎರಡು ಮಹಾಯುದ್ಧಗಳಾಗಿ ಹೋದವು. ಈಗ ಮೂರನೇ ಮಹಾಯುದ್ಧದ ಸಂಕೇತಗಳು ಸ್ಪಷ್ಟವಾಗಿ ಕಂಡು ಬರುತ್ತಿವೆ. ದೊಡ್ಡ ದೊಡ್ಡ ವಿಜ್ಞಾನಿಗಳೇ, ತಂತ್ರಜ್ಞಾನಿಗಳೇ ವಿಜ್ಞಾನ ಹಾಗೂ ತಂತ್ರಜ್ಞಾನದ ವಿದುದ್ಧ ಧ್ವನಿ ಎತ್ತುತ್ತಿದ್ದಾರೆ. ತಮ್ಮ ಸಂಶೋಧನೆಗಳಿಗಾಗಿ ವ್ಯಸನ ಪಡುತ್ತಿದ್ದಾರೆ. ಚಂದ್ರಯಾನದಲ್ಲಿಯ ತೊಡಕನ್ನು ಬಗೆಹರಿಸಬಹುದು, ಮಂಗಳ ಗ್ರಹದ ಯಾತ್ರೆಯ ತೊಡಕನ್ನು ಬಗೆ ಹರಿಸಬಹುದು ಹಾಗು ಅವೆರಡನ್ನೂ ಸಾಧಿಸಬಹುದು. ಆದರೆ ಭೂಮಿಯ ಮೇಲಿನ ಮಾನವ ಸಮಾಜದ ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸುವುದು ಸುಲಭವಲ್ಲವೆಂಬ ಅರಿವು ವಿಜ್ಞಾನಿ–ತಂತ್ರಜ್ಞಾನಿಗಳಲ್ಲಿಯೂ, ಅರ್ಥಶಾಸ್ತ್ರಜ್ಞರಲ್ಲಿಯೂ, ರಾಜನೀತಜ್ಞರಲ್ಲಿಯೂ ಮೂಡುತ್ತಿದೆ. ಅಲ್ಲದೆ, ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಷ್ಟು ಮಾನವ ಜೀವನಕ್ಕೆ ಸಂಬಂಧಿಸಿದ ಸಮಸ್ಯೆಗಳೂ ಬೆಳೆಯುತ್ತಿವೆಯೆಂಬ ಅರಿವೂ ಎಲ್ಲರಲ್ಲಿ ಮೂಡುತ್ತಿದೆ. ಇದಕ್ಕೆ ತುಂಬ ಇತ್ತೀಚಿನ ಸಾಕ್ಷಿ ಹವಾಮಾನದಲ್ಲಿ ಉಂಟಾಗುತ್ತಿರುವ ಬದಲಾವಣೆ ಮತ್ತು ಭೂಮಿಯ ಮೇಲಿನ ಉಷ್ಣತೆ ಹೆಚ್ಚಾಗುತ್ತಿರುವುದು. ಈ ಎರಡೂ ಸಮಸ್ಯೆಗಳಿಗೆ

ಕಾರಣ ತಂತ್ರಜ್ಞಾನದ ದುರುಪಯೋಗ ಅಥವಾ ಸಂಯಮ ರಹಿತವಾದ ಅದರ ಉಪಯೋಗವೆಂದೇ ತೀರ್ಮಾನಕ್ಕೆ ಬರಲಾಗಿದೆ. ಹವಾಮಾನದಲ್ಲಿಯ ತೀವ್ರ ಬದಲಾವಣೆ ಮತ್ತು ಉಷ್ಣತೆಯ ಸಮಸ್ಯೆಯ ಕಡೆಗೆ ಇಡೀ ಜಗತ್ತಿನ ಗಮನ ಸೆಳೆದು ಅದರ ಪರಿಹಾರಕ್ಕೆ ಪ್ರತಿಯೊಬ್ಬ ವ್ಯಕ್ತಿಯೂ ಸಮರೋಪಾದಿಯಲ್ಲಿ ಹೋರಾಡುವ ಅಗತ್ಯವಿದೆಯೆಂದು ಹೇಳಿದ ವಿಶ್ವ ಸಂಸ್ಥೆಯ ಅಂತರ್ ಸರಕಾರಗಳ ಹವಾಮಾನ ಬದಲಾವಣೆಯ ಅಧ್ಯಯನ ಸಮಿತಿ (ಐಪಿಸಿಸಿ) ಮತ್ತು ಪರಿಸರ ವಿನಾಶದ ಬಗ್ಗೆ ಹೆಚ್ಚು ಕಾಳಜಿವಹಿಸಿ ಅದಕ್ಕಾಗಿ ಹೋರಾಡುತ್ತಿರುವ ಅಮೇರಿಕಾದ ನಾಯಕ ಆಲ್ ಗೋರ್ ಇಬ್ಬರಿಗೂ ಸಂಯುಕ್ತವಾಗಿ ೨೦೦೭ ನೇ ಸಾಲಿನ ಶಾಂತಿಗಾಗಿ ನೋಬೆಲ್‌ಪ್ರಶಸ್ತಿ ಕೊಟ್ಟಿರುವುದು ಒಂದು ರೀತಿಯಲ್ಲಿ ದಾನವ ಶಕ್ತಿಯಾಗಿ ಬೆಳೆಯುತ್ತಿರುವ ದೇವತಾ ಮುಖವಾಡದ ತಂತ್ರಜ್ಞಾನಕ್ಕೆ ಛೀಮಾರಿಯೆಂದೇ ಅರ್ಥೈಸಬಹುದು.

ಗಾಂಧೀಜಿ ಚರಕವನ್ನು ಓರ್ವ ಹುಚ್ಚನಂತೆ ಪ್ರಚಾರ ಮಾಡಿದರು; ಖಾದಿಯನ್ನು ಒಂದು ಮಂತ್ರದಂತೆ ಜಪಿಸಿದರು. ಆಗ ಪ್ರಬಲರಾಗಿದ್ದ ಬಹುಪಾಲು ನಾಯಕರು ಚರಕವನ್ನೂ, ಖಾದಿಯನ್ನೂ ಗಾಂಧೀಜಿಯವರ ವ್ಯಕ್ತಿತ್ವದ ಪ್ರಭಾವಕ್ಕೆ ಮಣಿದು ಮಾತ್ರ ಒಪ್ಪಿಕೊಂಡಿದ್ದರು. ಗಾಂಧೀಜಿಯವರ ಆಪ್ತ ಶಿಷ್ಯರಾಗಿದ್ದ ನೆಹರೂ, ಬಹು ಗೌರವಕ್ಕೆ ಪಾತ್ರರಾಗಿದ್ದ ರವೀಂದ್ರನಾಥ ಟಾಗೋರರು ಕೂಡ ಚರಕ ಮತ್ತು ಖಾದಿಯನ್ನು ಮನಸಾರೆ ಇಷ್ಟ ಪಡುತ್ತಿರಲಿಲ್ಲ. ನೆಹರೂರವರಂತು ಒಂದು ಕಡೆ ಹೀಗೆ ಹೇಳಿದ್ದಾರೆ, "ಸ್ವತಂತ್ರ ಭಾರತದಲ್ಲಿ ಚರಕಕ್ಕೆ ಸ್ಥಾನವಿರುವುದಿಲ್ಲ. ಅವುಗಳನ್ನು ಗೂಟಕ್ಕೆ ನೇತು ಹಾಕಲಾಗುವುದು." ಆದರೆ ಗಾಂಧೀ ಇಷ್ಟೊಂದು ವಿಕಟ ಪರಿಸ್ಥಿತಿಯಲ್ಲೂ ಚರಕ ಮತ್ತು ಖಾದಿಯನ್ನು ಮಗುವನ್ನು ಎದೆಗವಚಿಕೊಳ್ಳುವ ತಾಯಿಯಂತೆ ಅವುಗಳನ್ನು ತಮ್ಮ ಆತ್ಮಸತ್ ಮಾಡಿಕೊಂಡಿದ್ದರು, ಅವು ತಮ್ಮ ರಾಜಕೀಯ ಹಾಗೂ ಆರ್ಥಿಕ ವಿಚಾರದ ಬಹು ದೊಡ್ಡ ಕಾಣಿಕೆಯೆಂದು ಬಹು ಆತ್ಮ ವಿಶ್ವಾಸದಿಂದ ದಣಿವರಿಯದೆ ಪ್ರಚಾರ ಮಾಡುತ್ತಿದ್ದರು. ಆದರೆ ಇಷ್ಟೇ ದೃಢವಾಗಿ ಅವುಗಳ ಬಗ್ಗೆ ಮುಕ್ತ ಮನಸ್ಸನ್ನೂ ಹೊಂದಿದ್ದರು. ಅವರೇ ಒಂದು ಸಂದರ್ಭದಲ್ಲಿ ಹೀಗೆ ಹೇಳಿದ್ದಾರೆ, " ಯಾರಾದರೂ ಇಂದು ಭಾರತದಲ್ಲಿ ಬಡತನವಿಲ್ಲವೆಂದೂ ಹಾಗು ಒಂದು ರೂಪಾಯಿಯೂ ಇಲ್ಲದೆ ಜನತೆ ಬಳಲುತ್ತಿಲ್ಲವೆಂದೂ ಮನವರಿಕೆ ಮಾಡಿಕೊಟ್ಟರೆ ನಾನು ನನ್ನ ತಪ್ಪನ್ನು ಒಪ್ಪಿಕೊಳ್ಳುವುದಷ್ಟೇ ಅಲ್ಲ ಚರಕವನ್ನು ನಾಶ ಮಾಡಿಬಿಡುತ್ತೇನೆ." ಗಾಂಧೀಜಿಯವರು ಹೇಳಿದ್ದ ಈ ಮಾತನ್ನು ಪ್ರಶ್ನಿಸುವ ಎದೆಗಾರಿಕೆ ಇಂದು ಯಾರಿಗಾದರೂ ಇದೆಯೆ? ಹತ್ತು ಪಂಚವಾರ್ಷಿಕ ಯೋಜನೆಗಳ ನಂತರವೂ ಇಂದು ಪ್ರಧಾನಿ ಮನಮೋಹನ್ ಸಿಂಗ್, ಅರ್ಥಮಂತ್ರಿ ಚಿದಂಬರಂ, ಕಾಂಗ್ರೆಸ್ ನಾಯಕಿ ಸೋನಿಯಾ ಮುಂತಾದವರೆಲ್ಲರೂ ದಿನ ಬೆಳಗಾದರೆ ಬಡತನ ನಿರ್ಮೂಲನದ ಮಾತನ್ನು ಆಡುತ್ತಲೇ ಇದ್ದಾರೆ. "ರೋಟಿ, ಕಪಡಾ ಔರ್ ಮಕಾನ್" ಎಂಬ ಘೋಷಣೆ ಹಾಕುತ್ತಲೇ ಇದ್ದಾರೆ. ಈ ಮೊದಲು "ಬಡತನ ತೊಲಗಿಸಿ" ಎಂಬ ಘೋಷಣೆಯನ್ನೂ ಕೂಗಿದ್ದಾಯಿತು. ಆದಾಗ್ಯೂ ಭಾರತ ದೇಶದ ಗ್ರಾಮೀಣ ಪ್ರದೇಶದ ಉದ್ದಗಲಕ್ಕೂ ರೈತರು ಒಂದಿಲ್ಲ ಒಂದು ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಲೇ ಇದ್ದಾರೆ. ರೈತರ ಹಾಗೂ ಇತರ ಜನರ ಆತ್ಮಹತ್ಯೆಯ ಸಂಖ್ಯೆ ದಿಗಿಲು ಹುಟ್ಟಿಸುವಂಥಾದ್ದಾಗಿದೆ. ಆತ್ಮಹತ್ಯೆಗಳಿಗೆ ಸಾಲವೊಂದೇ ಕಾರಣವಲ್ಲ. ಇತರ ಸಾಮಾಜಿಕ ಕಾರಣಗಳೂ ಇವೆ

ಎಂದು ಹೇಳುತ್ತ ಎಲ್ಲ ನಾಯಕರೂ, ನೀತಿ ನಿರ್ಧಾರಕರೂ ಸಮಾಧಾನಪಟ್ಟು ಕೊಳ್ಳುತ್ತಿದ್ದಾರೆಯೇ ವಿನಃ ಯಾವುದೇ ಕಾರಣವಿರಲಿ ಆತ್ಮಹತ್ಯೆಯನ್ನು ಮಾತ್ರ ತಡೆಯಲು ಇಂದಿನ ಎಲ್ಲ ಸರ್ಕಾರಗಳೂ, ಯೋಜನೆಗಳೂ ವಿಫಲವಾಗಿವೆಯೆಂಬ ಮಾತು ಪ್ರಶ್ನಾತೀತವಾಗಿಯೇ ಇದೆ. ದೇಶದಲ್ಲಿ ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಎಲ್ಲಿಯವರೆಗೆ ಆತ್ಮಹತ್ಯೆಗಳು ನಡೆಯುತ್ತಿರುತ್ತವೆಯೋ ಅಲ್ಲಿಯವರೆಗೆ ಗಾಂಧೀಜಿಯವರು ಚರಕ ಮತ್ತು ಖಾದಿಯ ಬಗ್ಗೆ ಹೇಳಿದ್ದ ಮಾತನ್ನು ತಿರಸ್ಕರಿಸುವಂತಿಲ್ಲ. ಅಷ್ಟೇ ಅಲ್ಲ, ದೇಶದ ಹಿತದೃಷ್ಟಿಯಿಂದ ಖಾದಿ ಉಳಿಯಲೇ ಬೇಕೆಂಬ ನಿರ್ಧಾರಕ್ಕೆ ಬರಬೇಕಾಗುತ್ತದೆ. ಏಕೆಂದರೆ ಗಾಂಧೀ ಸ್ಪಷ್ಟವಾಗಿ ಹೇಳಿದ್ದಾರೆ, "ದೇಶದ ನಿರುದ್ಯೋಗಿಗಳಿಗೆಲ್ಲ ಚರಕಕ್ಕಿಂತ ಉತ್ತಮ ಉತ್ಪಾದನೆಯ ಸಾಧನ ದೊರೆಯುವವರೆಗೆ, ಚರಕ ಮೈದಾನದಲ್ಲಿ ಇರಲೇ ಬೇಕಾಗುತ್ತದೆ." ದೇಶದ ಇಂದಿನ ಆರ್ಥಿಕ ಬೆಳವಣಿಗೆ ನದಿಯ ಸರಾಸರಿ ಆಳವನ್ನು ಲೆಕ್ಕಹಾಕಿ ನದಿ ದಾಟಲು ಹೋಗಿ ಮುಳುಗಿದ ಪಂಡಿತನ ಲೆಕ್ಕದಂತಿದೆ. ದೇಶದ ಇಷ್ಟೆಲ್ಲ ಬೆಳವಣಿಗೆಗಳ ನಂತರವೂ ಗ್ರಾಮೀಣ ಪ್ರದೇಶದಲ್ಲಿ ಇಂದೂ ಒಬ್ಬನ ಒಂದು ದಿನ ಆದಾಯ ೫೦ ರೂ ಮೀರಿಲ್ಲ.

ಚರಕದ ಪ್ರಚಾರದ ಉತ್ತುಂಗ ಸ್ಥಿತಿಯಲ್ಲಿ ಗಾಂಧೀಜಿ ಇದ್ದಾಗ ದೇಶದಲ್ಲಿ ಸುಮಾರು ೭೦,೦೦೦ ನೂಲುಗಾರರಿದ್ದರು. ಈಗ ಅವರ ಸಂಖ್ಯೆ ಕೋಟಿಗೂ ಹೆಚ್ಚಿದೆ. ಚರಕದಲ್ಲಿ ಇನ್ನೊಂದಿಷ್ಟು ತಾಂತ್ರಿಕ ಸುಧಾರಣೆ ಮಾಡಿ ನೂಲುವ ಸಾಮರ್ಥ್ಯವನ್ನು ಉತ್ತಮ ಪಡಿಸಿದಲ್ಲಿ ಗಾಂಧೀಜಿಯವರು ಕನಸು ಕಂಡಿದ್ದ " ಮನೆ-ಮನೆಯಲ್ಲಿ ಚರಕ" ಎಂಬುದು ನನಸಾಗುತ್ತದೆ.

ಗಾಂಧೀಜಿಯವರು ಚರಕ ಮತ್ತು ಖಾದಿಯನ್ನು ಭೌತಿಕ ವಸ್ತುಗಳೆಂದು ಭಾವಿಸಿರಲಿಲ್ಲ. ಅವುಗಳಲ್ಲಿ ಅವರು "ದರಿದ್ರ ನಾರಾಯಣನ" ಅವತಾರವನ್ನು ಕಾಣುತ್ತಿದ್ದರು. ಅವುಗಳನ್ನು ಅವರು ಆಧ್ಯಾತ್ಮಿಕ ಹಾಗೂ ನೈತಿಕ ಚಿಂತನೆಯ ಸಾಧನಗಳೆಂದೂ ಭಾವಿಸಿದ್ದರು. ಇಂದು ಜಗತ್ತಿನಲ್ಲಿ ಆಧ್ಯಾತ್ಮಿಕ ರಹಿತ ವಿಜ್ಞಾನ ರಾರಾಜಿಸುತ್ತಿರುವಾಗ ಪುನಃ ವಿಜ್ಞಾನದೊಂದಿಗೆ ಆಧ್ಯಾತ್ಮಿಕವನ್ನು ಜೋಡಿಸುವ ಕೆಲಸವನ್ನು ಚರಕವಲ್ಲದೆ ಬೇರೆ ಇನ್ನಾವ ಯಂತ್ರವೂ ಮಾಡಲಾರದು. ಇಂದು ಸರ್ವಾಂತರ್ಯಾಮಿಯಾದ ಕಂಪ್ಯೂಟರ್ ಮಾನವನ ಆಂತರಿಕ ಮೂಲ ಚಿಂತನಾ ಶಕ್ತಿಯನ್ನೇ ಕುಂಠಿತಗೊಳಿಸಿದೆ. ಸಾಮಾನ್ಯ ಕೂಡುವಿಕೆ, ಗುಣಿಸುವಿಕೆ ಮತ್ತು ಭಾಗಾಕಾರಕ್ಕೂ ಕ್ಯಾಲುಕಲೇಟರ್ ಬೇಕೆನ್ನುವಷ್ಟು ಮಾನವ ತನ್ನ ಬುದ್ಧಿಶಕ್ತಿಯನ್ನು ಮೊಟಕು ಮಾಡಿಕೊಂಡಿದ್ದಾನೆ. ಕೇವಲ ಬುದ್ಧಿಶಕ್ತಿಯನ್ನಷ್ಟೇ ಅಲ್ಲ ಇತರ ಎಲ್ಲ ಅವಯವಗಳ ಶಕ್ತಿಯನ್ನೂ ಕುಂಠಿತಗೊಳಿಸಿಕೊಳ್ಳುತ್ತಿದ್ದಾನೆ.

ಇದಕ್ಕೆ ಮುಖ್ಯ ಕಾರಣ ಅನಾವಶ್ಯಕವಾದ ತಂತ್ರಜ್ಞಾನದ ಬೆಳವಣಿಗೆ ಹಾಗೂ ಅದರ ಉಪಯೋಗ. ಈ ಮಾತನ್ನು ಆಲೋಚಿಸುವಾಗ ಗಾಂಧೀಜಿಯವರು ಚರಕ ಆಂದೋಲನದ ಬಗ್ಗೆ ಹೇಳಿದ ಮಾತನ್ನು ಹೋಲಿಕೆ ಮಾಡಬೇಕಾಗುತ್ತದೆ. ಅವರು ಖಚಿತವಾಗಿ ಹೀಗೆ ಹೇಳಿದ್ದಾರೆ, "ಯಾವುದೇ ಪ್ರಕಾರದ ಸಾಹಸೀ ಉದ್ಯಮವನ್ನು ಖಾದಿ ಆಂದೋಲನ ನಷ್ಟ ಮಾಡುವುದಿಲ್ಲ ಅದು ಜೀವನವೊದಗಿಸುವ ಕ್ರಿಯೆ. ಆದ್ದರಿಂದ ನಾನು ಅದನ್ನು "ಅನ್ನಪೂರ್ಣೆ" ಅಥವಾ ಅಕ್ಷಯ ಪಾತ್ರೆ ಎಂದು ಕರೆದಿದ್ದೇನೆ. ಯಂತ್ರ ಕಣ್ಮರೆಯಾದರೆ ನಾನು ಅಳುವುದೂ ಇಲ್ಲ."

ಭಾರತದಲ್ಲಿ ಚರಕ ಇರಬೇಕೆ ಅಥವಾ ಬೇಡವೇ ಎಂದು ಆಲೋಚಿಸುವಾಗ ನಾವು ನಮ್ಮ ಕಣ್ಮುಂದೆ ಆಧುನಿಕ ತಂತ್ರಜ್ಞಾನ ಮತ್ತು ಅದರ ಉತ್ಪನ್ನಗಳನ್ನು ಮಾತ್ರ ತಂದುಕೊಳ್ಳುತ್ತೇವೆಯೆ ವಿನಃ ಕಣ್ಣಿಗೆ ಕಾಣದ ಬಡತನ, ನಿರುದ್ಯೋಗ, ಸಮಯದ ಅಪವ್ಯಯ, ದುಂದುಗಾರಿಕೆ, ಪ್ರಕೃತಿ ಸಂಪತ್ತಿನ ಲೂಟಿ, ಪರಿಸರ ವಿನಾಶ, ಆರೋಗ್ಯ ಹಾನಿ ಇತ್ಯಾದಿ ಸಾಮಾಜಿಕ ಸಮಸ್ಯೆಗಳನ್ನು ನೆನೆದುಕೊಳ್ಳುವುದೇ ಇಲ್ಲ. ನಾವು ಊಟ ಮಾಡುವಾಗ, ಒಳ್ಳೆಯ ಬಟ್ಟೆ ಧರಿಸುವಾಗ, ಒಳ್ಳೆಯ ಮನೆ ಕಟ್ಟುವಾಗ ನಮಗೆ ಹಸಿದವರ, ಮನೆಯಿಲ್ಲದವರ ನೆನಪೇ ಆಗುವುದಿಲ್ಲ. ಆದರೆ ಗಾಂಧೀಜಿ ಪ್ರತಿಯೊಬ್ಬನ ಕಣ್ಣಲ್ಲಿಯ ಕಣ್ಣೀರನ್ನು ಒರೆಸಲು ಬಯಸಿದ್ದರು. ಅದಕ್ಕಾಗಿ ಚರಕ ಬೇಕು, ಖಾದಿ ಬೇಕು ಎಂದು ಸಾರಿದರು. ಏಕೆಂದರೆ ಅವರ ಪ್ರಕಾರ, ತಕ್ಷಣದ ಸಮಸ್ಯೆ ದೇಶದ ಸರ್ಕಾರವನ್ನು ನಡೆಸುವುದು ಹೇಗೆ ಎಂಬುದಕ್ಕಿಂತ ದೇಶವಾಸಿಗಳಿಗೆ ಬಟ್ಟೆಯನ್ನೂ, ಅನ್ನವನ್ನೂ ಕೊಡುವುದು ಹೇಗೆ ಎಂಬುದಾಗಿದೆ. ಇಂದಿನ ಆಧುನಿಕ ಯಾವ ಯಂತ್ರವೂ ಚರಕದಂತೆ ಸಾರ್ವತ್ರಿಕವಾಗಿ, ಸರ್ವಕಾಲಿಕವಾಗಿ, ಸರ್ವತ್ರ, ಸರ್ವರಿಗೂ ಉದ್ಯೋಗ ಒದಗಿಸುವುದರ ಮೂಲಕ ಅನ್ನ ಮತ್ತು ಬಟ್ಟೆಯನ್ನು ಕೊಡಲಾರವು. ಅಲ್ಲದೆ ಇವತ್ತಿನ ಕೈಗಾರಿಕಾ ನೀತಿಯಲ್ಲಿ, ವೈಜ್ಞಾನಿಕ ಶೋಧನೆಯಲ್ಲಿ ಸಾಧನ ಶುದ್ಧಿಯ ವಿಚಾರ ಇಲ್ಲವೇ ಇಲ್ಲ. ಆದ್ದರಿಂದ ಒಳ್ಳೆಯ ಗುರಿಯೂ ಹಾನಿಕರವಾಗಿದೆ. ಇದನ್ನರಿತೇ ಗಾಂಧೀಜಿ "ಖಾದಿಯು ಮಾನವ ಮೌಲ್ಯಗಳನ್ನು ಪ್ರತಿನಿಧಿಸಿದರೆ, ಮಿಲ್ ಬಟ್ಟೆ ಕೇವಲ ಲೋಹದ ಮೌಲ್ಯವನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ಖಾದಿಯನ್ನು ಬಿಟ್ಟು ಕೊಡುವುದೆಂದರೆ ನಮ್ಮ ಜನತೆಯನ್ನೇ ಮಾರಿಕೊಂಡಂತೆ, ಹಾಗೆ ಮಾಡಿದಾಗ ಭಾರತದ ಆತ್ಮವನ್ನೂ ಮಾರಿದಂತೆ" ಎಂದು ಸಾರಿದ್ದರು.

ಖಾದಿಯ ವಿರುದ್ಧ ಬಹಳ ಮಹತ್ವದ ದೂರು ಏನೆಂದರೆ ಖಾದಿಯು ಆರ್ಥಿಕವಾಗಿ ವ್ಯವಹಾರಿಕವಾಗಿಲ್ಲವೆಂಬುದು. ಹಾಗೆ ನೋಡಿದರೆ ಮಾನವ ಶಕ್ತಿಯಿಂದ ತಯಾರಾದ ಪ್ರತಿಯೊಂದು ವಸ್ತುವೂ ಮೌಲ್ಯದ ದೃಷ್ಟಿಯಿಂದ ಯಂತ್ರದ ಮೂಲಕ ತಯಾರಾದ ವಸ್ತುವಿನ ಹೋಲಿಕೆಯಲ್ಲಿ ತುಟ್ಟಿಯಾಗಿಯೇ ಇರುತ್ತದೆ. ಆದರೆ ಯಂತ್ರದಿಂದ ತಯಾರಾದ ವಸ್ತುವನ್ನು ಮಾನವ ಶಕ್ತಿಯಿಂದ ತಯಾರಾದ ಪದಾರ್ಥದೊಂದಿಗೆ ಹೋಲಿಕೆ ಮಾಡಿದರೆ ಹಾಗೆ ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಪ್ರಕೃತಿಯಲ್ಲಿ ಚಿಕ್ಕ ಮೀನನ್ನು ದೊಡ್ಡ ಮೀನು ತಿನ್ನುವಂತೆಯೇ ಕೈಗಾರಿಕಾ ಕ್ಷೇತ್ರದಲ್ಲಿಯೂ ಸಹ ಅತಿ ಬಂಡವಾಳ ಪಡೆದ, ಅತಿ ಸಂಕೀರ್ಣ ತಾಂತ್ರಿಕತೆಯ ಹಾಗೂ ಸರ್ಕಾರದಿಂದ ಬಹಳಷ್ಟು ರಿಯಾಯಿತಿ ಪಡೆದ ಕೈಗಾರಿಕೆಯಲ್ಲಿ ತಯಾರಾದ ವಸ್ತುವು ಅತಿ ಕಡಿಮೆ ಬಂಡವಾಳದ, ಅತಿ ಸರಳ ತಾಂತ್ರಿಕತೆಯ ಹಾಗೂ ಸರ್ಕಾರದಿಂದ ಹೆಚ್ಚಿನ ರಿಯಾಯಿತಿ ಪಡೆಯದೇ ಇರುವ ಮಾನವ ಶಕ್ತಿಯಿಂದ ತಯಾರಾದ ಪದಾರ್ಥವನ್ನು ದುಬಾರಿ ಮಾಡುವುದರಲ್ಲಿ ಸಂದೇಹವಿಲ್ಲ. ಈಗ ಚಲಾವಣೆಯಲ್ಲಿ ಬಂದಿರುವ ವಿಶೇಷ ಆರ್ಥಿಕ ವಲಯಗಳಲ್ಲಿಯ ಕೈಗಾರಿಕೆಗಳು ತಯಾರಿಸುವ ವಸ್ತುಗಳೊಂದಿಗೆ ಅಂಥ ವಲಯಗಳಲ್ಲಿ ಇಲ್ಲದ ಕೈಗಾರಿಕೆಗಳಲ್ಲಿ ತಯಾರಾದ ವಸ್ತುಗಳು ಸ್ಪರ್ಧಿಸುವುದು ಸಾಧ್ಯವೇ ಇಲ್ಲ. ವಿದೇಶದಿಂದ ಬರುವ ವಸ್ತುಗಳೊಂದಿಗೆ ಭಾರತದಲ್ಲಿ ತಯಾರಾದ ವಸ್ತುಗಳು ಸ್ಪರ್ಧಿಸಲಾರವು. ನೈಜ ಪರಿಸ್ಥಿತಿ ಹೀಗಿರುವಾಗ ಖಾದಿಯು ಆರ್ಥಿಕವಾಗಿ ವ್ಯವಹಾರಿಕವಲ್ಲವೆಂದು ಹೇಳುವುದಾಗಲೀ, ಖಾದಿಯು ಜಪಾನಿ ಬಟ್ಟೆ, ಚೀನಿ ಬಟ್ಟೆ, ಮಿಲ್ ಬಟ್ಟೆ, ನೈಲಾನ್ ಬಟ್ಟೆ, ಟೆರಿಕಾಟ್ ಬಟ್ಟೆಯೊಂದಿಗೆ

ಸ್ಪರ್ಧಿಸಲಾರದೆಂದು ದೂರುವುದಾಗಲೀ ಮೂರ್ಖತನದ ಪರಮಾವಧಿ. ಅಷ್ಟೇ ಅಲ್ಲ, ಯಾವ ದೇಶವು ವಿದೇಶಗಳೊಡನೆ ಮಿತಿಮೀರಿದ ಸ್ಪರ್ಧೆಗೆ ತನ್ನನ್ನು ತಾನು ಸಮರ್ಪಿಸಿಕೊಳ್ಳುತ್ತದೋ ಆ ದೇಶ ಹಸಿವಿನಿಂದ ಬಳಲಬೇಕಾಗುತ್ತದೆ ಮತ್ತು ವಿದೇಶದವರು ಇಷ್ಟಪಟ್ಟಲ್ಲಿ ಆ ದೇಶದ ಗುಲಾಮವೂ ಆಗಬೇಕಾಗುತ್ತದೆ.

ಈಗಾಗಲೇ ಭಾರತ ಆರ್ಥಿಕವಾಗಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿದೆ. ಸ್ಪರ್ಧೆಯ ಹುಚ್ಚು ಹೊಳೆಗೆ ಸಿಕ್ಕಿ ಹಾಕಿಕೊಂಡು ಜಗತ್ತಿನ ಪ್ರತಿಯೊಂದು ಶ್ರೀಮಂತ ದೇಶಗಳಿಂದ, ವಿಶ್ವ ಬ್ಯಾಂಕ್‌ನಿಂದ, ಅಂತರರಾಷ್ಟ್ರೀಯ ನಿಧಿಯಿಂದ ಮಿಲಿಯನ್‌ಗಟ್ಟಲೆ ಸಾಲ ಪಡೆದು ಭಾರತ ತನ್ನ ರಾಜಕೀಯ ಸ್ವಾತಂತ್ರ್ಯ ಕಳೆದುಕೊಳ್ಳುವ ಭೀತಿ ಉಂಟಾಗಿದೆ. ಇದನ್ನು ಗಾಂಧೀಜಿಯವರು "ಶಾಂತಿಯುತ ದಾಳಿ" ಯೆಂದು ಕರೆದಿದ್ದಾರೆ. ಈಗ ದೇಶದಲ್ಲಿಯ ಕೃಷಿ ಕೂಡ ಲಾಭದಾಯಕವಾಗಿರದೆ ಹಾನಿದಾಯಕವಾಗಿದೆ. ಕೆಲವು ಬೆಳೆಗಳನ್ನು ಬೆಳೆದರೆ ರೈತನಿಗೆ ಬೀಜದ ಖರ್ಚೂ ಹುಟ್ಟುವುದಿಲ್ಲ. ಆದ್ದರಿಂದಲೇ ಗಾಂಧೀಜಿ ಚರಕ ಭಾರತಕ್ಕೆ ಅದರಲ್ಲಿಯೂ ಗ್ರಾಮೀಣ ಭಾರತಕ್ಕೆ ಅಗತ್ಯವೆಂದು ಪ್ರತಿಪಾದಿಸಿದ್ದರು. ಆದರೆ ಖಾದಿಗೆ ವಿರೋಧ ಎಲ್ಲಿಂದ ಬರುತ್ತಿದೆ ಎಂಬ ಅವರ ಮಾತನ್ನು ಗಮನಿಸಿದರೆ ೧೯೩೪ರಲ್ಲಿ ಗಾಂಧೀಜಿ ಹೇಳಿದ್ದ ಮಾತು ಇಂದಿಗೂ ನಿಜವಿದೆ ಎಂಬುದು ಗೊತ್ತಾಗುತ್ತದೆ. ಗಾಂಧೀಜಿ ಹೀಗೆ ಹೇಳಿದ್ದಾರೆ, "ಗ್ರಾಮೀಣ ಜನರು ಹೊಂದಿರುವ ಕೆಲ ಪೂರ್ವಗ್ರಹಗಳ ವಿರುದ್ಧ ಖಾದಿ ಕೆಲಸ ಮಾಡಬೇಕಿದೆ; ಸರ್ಕಾರದ ಅನುಮತಿಯಿಲ್ಲದೆ ನಡೆಯುತ್ತಿರುವ ಅನೈತಿಕ ಸ್ಪರ್ಧೆಯ ವಿರುದ್ಧ ಹೋರಾಡಬೇಕಿದೆ; ಆರ್ಥಿಕ ಕ್ಷೇತ್ರದಲ್ಲಿರುವ ತಥಾಕಥಿತ ತಜ್ಞರ ಪ್ರಚಲಿತ ಅಭಿಪ್ರಾಯದ ವಿರುದ್ಧ ಹೋರಾಡಬೇಕಿದೆ; ಸ್ವತಃ ಖಾದಿ ನೇಕಾರರ ಅಗ್ಗದ ಖಾದಿ ಬೇಡಿಕೆಯ ವಿರುದ್ಧ ಹೋರಾಡಬೇಕಿದೆ. ಕಣ್ಣೀರನ್ನೇ ಹೊಂದಿರುವ ಈ ದೇಶದ ಗ್ರಾಮೀಣ ಜನರಿಗೂ, ನಗರ ವಾಸಿಗಳಿಗೂ ಖಾದಿಯ ಬಗ್ಗೆ ಅರಿವು ಮೂಡಿಸುವ ಕೆಲಸವಾಗಬೇಕಿದೆ. ಈ ಎಲ್ಲವೂ ಎಲ್ಲ ಧರ್ಮಗಳನ್ನು ಮೀರಿ ಇರುವಂಥ ಪ್ರಶ್ನೆಗಳು. ಗ್ರಾಮಾಂತರ ಪ್ರದೇಶದಲ್ಲಿ ಇರುವ ಎಲ್ಲ ಧರ್ಮೀಯರೂ ಅದೇ ಬಡತನದ ರೋಗದಿಂದ, ದಾರಿದ್ರ್ಯದಿಂದ ಬಳಲುತ್ತಿದ್ದಾರೆ. ವ್ಯತ್ಯಾಸವಿದ್ದರೆ ಅದು ಒಂದೆರಡು ಡಿಗ್ರಿಯಷ್ಟು ಮಾತ್ರ.

ಆದ್ದರಿಂದ ಮಿಲ್ ಬಟ್ಟೆಯ ಒಂದೊಂದು ಗಜದ ಹೋಲಿಕೆಯಲ್ಲಿ ಖಾದಿಯ ಒಂದೊಂದು ಗಜ ಬಟ್ಟೆ ದುಬಾರಿಯಾಗಿರಬಹುದು ಆದರೆ ಒಟ್ಟಿನಲ್ಲಿ ಹಾಗೂ ಗ್ರಾಮೀಣ ಜನರ ಸಂದರ್ಭದಲ್ಲಿ ಖಾದಿಗೆ ಎದುರಾಳಿ ಇಲ್ಲದಿದ್ದ ಪಕ್ಷದಲ್ಲಿ ಖಾದಿ ಅತ್ಯಂತ ಆರ್ಥಿಕ ಮತ್ತು ವ್ಯಾವಹಾರಿಕ ಸಲಹೆಯಾಗಿದೆ. ಈ ಸಲಹೆಯ ಪೂರ್ಣ ಪರೀಕ್ಷೆಯ ದೃಷ್ಟಿಯಿಂದ ಖಾದಿಯೊಂದಿಗೆ ಇತರ ಗ್ರಾಮೋದ್ಯೋಗಗಳೂ ಸೇರಿವೆಯೆಂದು ಅರ್ಥೈಸಬಹುದು."

ಗಾಂಧೀಜಿಯವರು ೧೭೧ ವರ್ಷಗಳ ಹಿಂದೆ ಹೇಳಿದ ಮಾತು ಇಂದಿಗೂ ಎಷ್ಟು ನಿಜವಾಗಿವೆ, ಎಷ್ಟು ಕರಾರುವಕ್ಕಾಗಿವೆ ಎಂಬುದನ್ನು ನೋಡಿದಾಗ ಗಾಂಧೀಜಿ ಚರಕ ಮತ್ತು ಖಾದಿ ಭಾರತದ ದೇಶದ ಆರ್ಥಿಕ ನೀತಿಯ ತಳಹದಿ ಎಂದು ಭಾವಿಸಿದ್ದರು ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಗಾಂಧೀಜಿಯವರ ರಾಜಕೀಯ ಚಿಂತನೆಯ ಪ್ರಕಾರ ಈಗ ನಮ್ಮ ಮುಂದಿರುವ ತಕ್ಷಣದ ಸಮಸ್ಯೆ ಸರ್ಕಾರವನ್ನು ಹೇಗೆ ನಡೆಸುತ್ತೇವೆ ಎಂಬುದಕ್ಕಿಂತ ಭಾರತೀಯರಿಗೆ

ಬೇಕಾದ ಅನ್ನ ಮತ್ತು ವಸ್ತ್ರವನ್ನು ಹೇಗೆ ದೊರಕಿಸಿಕೊಳ್ಳುವುದು ಎಂಬುದಾಗಿದೆ. ಏಕೆಂದರೆ ಒಂದು ಅಂಕಿ ಸಂಖ್ಯೆಯ ಪ್ರಕಾರ ೧೯೧೮ ರಷ್ಟು ಹಿಂದೆಯೇ ಭಾರತ ೬೦ ಕೋಟಿಯಷ್ಟು ಹಣವನ್ನು ಬಟ್ಟೆಗಾಗಿ ವಿದೇಶಕ್ಕೆ ಕಳುಹಿಸಿತ್ತು. ಆಗ ಭಾರತದ ಜನಸಂಖ್ಯೆ ಇದ್ದುದು ೨೦ ಕೋಟಿ ಮಾತ್ರ. ಈಗ ೨೦೦೭ರಲ್ಲಿ ೧೧೧ ಕೋಟಿ ಪ್ರಜಾ ಸಂಖ್ಯೆ ಇರುವ ದೇಶ ತನ್ನ ಅನ್ನ-ಬಟ್ಟೆ ಹಾಗೂ ಇತರ ಜೀವನಾವಶ್ಯಕ ವಸ್ತುಗಳಿಗಾಗಿ ಎಷ್ಟು ಬಿಲಿಯನ್ ಹಣವನ್ನು ಹೊರ ದೇಶಕ್ಕೆ ಕಳುಹಿಸುತ್ತಿರಬಹುದು ಎಂಬುದನ್ನು ಆಲೋಚಿಸಬಹುದು. ಇಂದಿಗೂ ಓರ್ವ ಗ್ರಾಮೀಣ ರೈತನ ಒಂದು ದಿನದ ಖರ್ಚು ಐವತ್ತು ರೂಪಾಯಿಯನ್ನು ಮೀರುವುದಿಲ್ಲ; ಆದಾಯ ೮೦ ರೂಪಾಯಿಗಳಷ್ಟು ಇದೆ. ಇಂಥ ವಿಕಟ ಆರ್ಥಿಕ ಪರಿಸ್ಥಿತಿಯಲ್ಲಿ ಪ್ರತಿ ವರ್ಷ ಬಿಲಿಯನ್‌ಗಟ್ಟಲೆ ಭಾರತದ ಹಣ ಆಮದಿಗಾಗಿ ಹೊರ ದೇಶಗಳಿಗೆ ಹೋದರೆ ದೇಶದ ಸ್ವಾತಂತ್ರ್ಯ ಉಳಿಯುತ್ತದೆಯೇ, ದೇಶದ ನಿರುದ್ಯೋಗ ಹೋಗುತ್ತದೆಯೇ, ಅಗೋಚರವಾದ ಬಡತನ ತೊಲಗುತ್ತದೆಯೇ ಎಂದು ಯೋಚಿಸಬೇಕಿದೆ.

ಬಟ್ಟೆಯ ಈ ಆಮದಿಗಾಗಿ ಹೊರ ದೇಶಕ್ಕೆ ಹರಿದು ಹೋಗುವ ಬಿಲಿಯನ್‌ಗಟ್ಟಲೆ ಹಣವನ್ನು ಖಾದಿ ಉದ್ಯಮದ ಮೂಲಕ ತಡೆಯಲು ಸಾಧ್ಯವಾದರೆ ಎಂಥ ಅದ್ಭುತ ಸಾಮಾಜಿಕ, ನೈತಿಕ ಹಾಗೂ ಕೈಗಾರಿಕ ಕ್ರಾಂತಿ ದೇಶದಲ್ಲಿ ಆದೀತು, ಆದರೆ ಗಾಂಧೀಜಿ ಹೇಳಿದಂತೆ ಖಾದಿಯ ಕಷ್ಟ ಅದರಲ್ಲಿಯ ದೋಷಗಳಲ್ಲ, ಬದಲಿಗೆ ಖಾದಿಯ ಸ್ನೇಹಿತರೂ ಮತ್ತು ಶತ್ರುಗಳೂ ಖಾದಿಯ ಬಗ್ಗೆ ಹೊಂದಿರುವ ಅಜ್ಞಾನ !

೧೯೨೭ ರಲ್ಲಿ "ಖಾದಿ ಚೇತನ" ಎಂಬ ಶೀರ್ಷಿಕೆಯ ಅಡಿಯಲ್ಲಿ ಗಾಂಧೀಜಿ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಬರೆದದ್ದನ್ನು ಈಗ ಓದಿದರೆ ಆಧುನಿಕ ಭಾರತೀಯರು ಖಾದಿಯ ಬಗ್ಗೆ ಎಷ್ಟು ಅಜ್ಞಾನಿಗಳಾಗಿದ್ದಾರೆ ಎಂಬುದು ಗೊತ್ತಾಗುವುದರ ಜೊತೆಗೆ ಚರಕ ಮತ್ತು ಖಾದಿ ೨೧ ನೇ ಶತಮಾನದ ಶಕ್ತಿಗಳೆಂದೂ ಮನವರಿಕೆಯಾಗುತ್ತದೆ. ಗಾಂಧೀ ೧೮೦ ವರ್ಷಗಳ ಹಿಂದೆ "ಖಾದಿ ಚೇತನ" ಕುರಿತು ಹೀಗೆ ಬರೆದಿದ್ದಾರೆ :-

"ಖಾದಿ ಚೇತನವೆಂದರೆ ಖಾದಿ ಧರಿಸುವುದರ ಅರ್ಥವನ್ನು ತಿಳಿಯುವುದು. ಪ್ರತಿದಿನ ಬೆಳಗ್ಗೆ ನಾವು ಹೊರ ಹೋಗುವಾಗ ಖಾದಿ ಬಟ್ಟೆಯನ್ನು ತೊಡುವ ವೇಳೆಯಲ್ಲಿ ನಾವು ಇದನ್ನು ದರಿದ್ರನಾರಾಯಣನ ಹೆಸರಿನಲ್ಲಿ ಮಾಡುತ್ತಿದ್ದೇವೆ ಮತ್ತು ಭಾರತದ ಕೋಟ್ಯಾವಧಿ ಕಂಗಾಲರಿಗಾಗಿ ಮಾಡುತ್ತಿದ್ದೇವೆ ಎಂದು ಜ್ಞಾಪಿಸಿಕೊಳ್ಳಬೇಕು. ನಮ್ಮಲ್ಲಿ ಖಾದಿ ಚೇತನವಿದ್ದ ಪಕ್ಷದಲ್ಲಿ ನಮ್ಮ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಸರಳತೆಯನ್ನೇ ನಮ್ಮ ಸುತ್ತಲೂ ಹೊಂದಿರುತ್ತೇವೆ. 'ಖಾದಿ ಚೇತನ' ವೆಂದರೆ ಅಪರಿಮಿತ ಸಹನೆ. ಖಾದಿ ಉತ್ಪಾದನೆ ಹೇಗೆ ಆಗುತ್ತದೆಂಬುದು ಗೊತ್ತಿದ್ದವರಿಗೆ ಓರ್ವ ನೂಲುಗಾರನು, ಓರ್ವ ನೇಕಾರನು ತನ್ನ ಉದ್ಯೋಗಕ್ಕಾಗಿ ಎಷ್ಟೊಂದು ಸಹನೆಯಿಂದ ಕಷ್ಟ ಪಡುತ್ತಾನೆ ಎಂಬುದನ್ನು ತಿಳಿದವರಾಗಿರುತ್ತಾರೆ. ಅದೇ ರೀತಿ ನಾವೂ ಸ್ವರಾಜ್ಯಕ್ಕಾಗಿ ನೂಲುವಾಗ ಅದೇ ಸಹನೆ ಹೊಂದಿರಬೇಕು. ಖಾದಿ ಚೇತನವೆಂದರೆ ಅಪರಿಮಿತ ನಂಬುಗೆ. ಯಾವ ರೀತಿ ಓರ್ವ ನೂಲುಗಾರ ತಾನು ನೂತ ದಾರವು ಎಷ್ಟೇ ಸಣ್ಣ ಪ್ರಮಾಣದ್ದಾದರೂ ಅದರಿಂದ ಒಟ್ಟಾರೆಯಾಗಿ ಭಾರತದಲ್ಲಿಯ ಪ್ರತಿಯೊಬ್ಬರಿಗೂ ಸಾಕಾಗುವಷ್ಟು ಬಟ್ಟೆ ತಯಾರಾಗುತ್ತದೆ ಎಂಬ ನಂಬಿಕೆ ಇಟ್ಟುಕೊಂಡಿರುತ್ತಾನೋ ಅದೇ ರೀತಿ ನಾವು ಸತ್ಯ

ಮತ್ತು ಅಹಿಂಸೆಯ ಮೂಲಕ ನಮ್ಮ ದಾರಿಯಲ್ಲಿಯ ಪ್ರತಿಯೊಂದು ಅಡ್ಡಿಯನ್ನೂ ಜಯಿಸುತ್ತೇವೆಂಬ ನಂಬಿಕೆ ಇಟ್ಟುಕೊಳ್ಳಬೇಕು.

ಖಾದಿ ಚೇತನವೆಂದರೆ ಈ ಭೂಮಿಯ ಮೇಲೆ ಇರುವ ಪ್ರತಿಯೊಬ್ಬನೊಂದಿಗೂ ಸಹೋದರತ್ವದ ಅನಿಸಿಕೆ. ನಮ್ಮ ಸಹಜೀವಿಗಳಿಗೆ ಗಾಸಿಗೊಳಿಸಬಹುದಾದಂಥ ಎಲ್ಲವನ್ನೂ ತ್ಯಜಿಸುವುದು. ಈ ಭಾವನೆಯನ್ನು ನಮ್ಮ ದೇಶದ ಲಕ್ಷಾವಧಿ ಜನರಲ್ಲಿ ಬೆಳೆಸಿದ್ದೇಯಾದರೆ ನಮ್ಮ ಈ ಭಾರತ ಎಂಥ ಅದ್ಭುತವಾದೀತು! ಆದರೆ ಇದರ ಹಿಂದೆ ತಿಳಿಯಬೇಕಾದ ಒಂದು ಮಾತು ಇದೆ. ಆ ಚೇತನಕ್ಕೆ ಸಂಬಂಧಿಸಿದ ಒಂದೇ ಒಂದು ಕರಾರು ಅದು ಎಂದು ನಾನು ಒಪ್ಪುತ್ತೇನೆ. ಅದೇನೆಂದರೆ, ಯಾವ ರೀತಿ ಬಹು ತಪಸ್ಸು ಮಾಡಿದವರು ರಾಮನಾಮವನ್ನು ನಮಗೆ ಕೊಟ್ಟರೋ ಮತ್ತು ಯಾವ ಅವರ ತಪಸ್ಸಿನ ಕಾರಣದಿಂದ ಅದು ಒಂದು ಜೈವಿಕ ಶಕ್ತಿಯಾಯಿತೋ ಅದೇ ರೀತಿಯಲ್ಲಿ ಈ ಖಾದಿ ಆಂದೋಲನ. ಈ ಆಂದೋಲನದ ಹಿಂದೆ ಇರುವವರ ತಪಸ್ಸು ಅದರೊಟ್ಟಿಗೆ ಇರಲೇ ಬೇಕು. ಒಂದು ವೇಳೆ ಖಾದಿಗಾಗಿ ಯಾರು ತಮ್ಮ ಜೀವನವನ್ನೇ ಬಲಿಕೊಟ್ಟಿದ್ದಾರೋ ಅವರು ಅವ್ಯಾಹತವಾಗಿ ಜೀವನ ಶುದ್ಧಿಗೋಸ್ಕರ ಒತ್ತಾಯಿಸದಿದ್ದರೆ ನಮ್ಮ ದೇಶದ ಪ್ರತಿಯೋರ್ವನ ಮೂಗಿನಲ್ಲಿ ದುರ್ವಾಸನೆ ಹೊಡೆದೀತು."

ಮೇಲ್ಕಾಣಿಸಿದ ಗಾಂಧೀಜಿಯವರ ಮಾತಿನ ಹಿಂದೆ ಇರುವ ಮರ್ಮಾರ್ಥವನ್ನು ನಮ್ಮ ದೇಶದ ನಾಯಕರು, ಯೋಜಕರು, ಅರ್ಥಶಾಸ್ತ್ರಜ್ಞರು, ಮುಖ್ಯವಾಗಿ ಜನ ಸಾಮಾನ್ಯರು ತಿಳಿದುಕೊಂಡರೆ ನಮ್ಮ ದೇಶದ ಹಿತದೃಷ್ಟಿಯಿಂದ ಖಾದಿ ಉಳಿಯಲೇ ಬೇಕು ಎಂಬ ಸಂಕಲ್ಪವನ್ನು ಕೈಗೊಳ್ಳುವುದು ಇಂದಿನ ಪ್ರತಿಯೊಬ್ಬ ಭಾರತೀಯನ ಯುಗಧರ್ಮವಾಗುತ್ತದೆ.

ಏಕೆಂದರೆ ಖಾದಿ ಎಂದರೆ ಕೇವಲ ಬಟ್ಟೆಯಲ್ಲ, ಚರಕವೆಂದರೆ ಕೇವಲ ಸಾಧನವಲ್ಲ. ಖಾದಿ ಮತ್ತು ಚರಕ ಯಾವುದೇ ಒಂದು ರಾಷ್ಟ್ರ ಜೀವನಕ್ಕೆ ಅಗತ್ಯವಾಗಿ ಬೇಕಾದ ಮೌಲ್ಯಗಳ ಸಂಕೇತವಾಗಿವೆ. ಅವು ವಿಕೇಂದ್ರಿತ ಮತ್ತು ಶೋಷಣೆ ರಹಿತ ಮತ್ತು ಸರಳ ಜೀವನ ಹಾಗೂ ಉನ್ನತ ವಿಚಾರಗಳ ಸಂಕೇತವಾಗಿವೆಯಷ್ಟೇ ಅಲ್ಲ ಆ ಮೌಲ್ಯಗಳನ್ನು ಜೀವನದಲ್ಲಿ ಅನುಷ್ಠಾನಕ್ಕೆ ತರುವ ಸಾಧನಗಳೂ ಆಗಿವೆ.

ಇಂದಿನ ಆಧುನಿಕ ಯುಗಕ್ಕೆ ತಕ್ಕಂತೆ ಖಾದಿ ಬಟ್ಟೆಯ ಗುಣಮಟ್ಟದಲ್ಲಿ, ವಿನ್ಯಾಸದಲ್ಲಿ ಸುಧಾರಣೆ ಖಂಡಿತವಾಗಿಯೂ ಆಗಬೇಕಿದೆ. ಅಂತೆಯೇ ಚರಕದಲ್ಲಿಯೂ ಸಹ ಸೂಕ್ತ ಸುಧಾರಣೆಯಾಗಬೇಕು. ಪ್ರತಿಯೊಂದು ಮನೆಯಲ್ಲಿ, ಶಾಲೆ-ಕಾಲೇಜುಗಳಲ್ಲಿ-ಆಫೀಸುಗಳಲ್ಲಿ-ರೈಲಿನಲ್ಲಿ ಸಹ ದಾರದ ಉತ್ಪಾದನೆ ಮಾಡುವಷ್ಟು ಸುಲಭವೂ-ಸರಳವೂ ಆದ ಚರಕದ ತಯಾರಿಕೆ ಆಗಬೇಕು. ಊಟ ಮಾಡುವ ಕೈಗಳೆಲ್ಲವೂ ಚರಕವನ್ನು ನಡೆಸುವ ಕೈಗಳಾಗಬೇಕು. ಆಗ ಗಾಂಧೀಜಿಯವರು ಪ್ರತಿಪಾದಿಸಿದ್ದ ಮಾನವೀಯವೂ ಮತ್ತು ಶಾಶ್ವತವೂ ಆದ ದೊಡ್ಡ ಅರ್ಥನೀತಿಯನ್ನು ಜಾರಿಗೊಳಿಸಲು ಸಾಧ್ಯವಾಗುವುದು. ಗಾಂಧೀಜಿ ಹೇಳಿದ್ದರು, " ನನಗೆ ಬೃಹತ್ ಉತ್ಪಾದನೆ ಬೇಕಿಲ್ಲ; ಬೃಹತ್ ಜನ ಸಮುದಾಯದಿಂದ ಉತ್ಪಾದನೆ ಬೇಕು." ಈ ರೀತಿ ಆದಾಗಲೇ ದೇಶ ನಿಜವಾಗಿಯೂ ಕೈಗಾರೀಕೃತಗೊಂಡಂತಾಗುವುದು. ದೇಶದ ಜನರ ಪ್ರತಿಯೊಂದು ಕೈಗೂ ಉದ್ಯೋಗ ಕೊಟ್ಟಾಗಲೇ ನಿಜವಾದ ಕೈಗಾರೀಕರಣವೆಂಬುದನ್ನು ನಮ್ಮ ಯೋಜಕರು ತಿಳಿಯಬೇಕು.

ಈ ಮಾತಿನೊಂದಿಗೆ ಸರ್ ಎಂ. ವಿಶ್ವೇಶ್ವರಯ್ಯನವರು ಹೇಳಿದ ಮಾತನ್ನೂ ಜೋಡಿಸಿಕೊಳ್ಳಬೇಕು. ಅವರು ಹೇಳಿದ್ದರು, "ಕೈಗಾರೀಕರಣಗೊಳಿಸಿ, ಇಲ್ಲವೆ ನಾಶ ಹೊಂದಿ."ನಮ್ಮ ದೇಶದ ತಂತ್ರಜ್ಞರು, ಜವಳಿ ಉದ್ಯಮಿಗಳು ಖಾದಿ ಬಟ್ಟೆಯಲ್ಲಿ ಹಾಗೂ ಚರಕದಲ್ಲಿ ಸುಧಾರಣೆ ಮಾಡಿದ್ದೇ ಆದರೆ ಗಾಂಧೀ ಮತ್ತು ವಿಶ್ವೇಶ್ವರಯ್ಯನವರ ವಿಚಾರಗಳನ್ನು ಪರಸ್ಪರ ವಿರೋಧವಿಲ್ಲದೆ, ಪೂರಕವಾಗಿರುವಂತೆ ಜಾರಿಗೆ ತರಬಹುದು.

ಸ್ವಾತಂತ್ರ್ಯ ಪೂರ್ವದಿಂದ ಸ್ವಾತಂತ್ರ್ಯೋತ್ತರದವರೆಗೆ ಚರಕ ಮತ್ತು ಖಾದಿ ಬಹು ಮಹತ್ವದ ಐತಿಹಾಸಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಪಾತ್ರಗಳನ್ನು ನಿರ್ವಹಿಸಿದವು. ಅವುಗಳ ಒಂದು ಅಧ್ಯಾಯ ಮುಗಿಯಿತಾದರೂ ಹೊಸ ಸ್ವತಂತ್ರ ಭಾರತದಲ್ಲಿ ಇನ್ನೊಂದು ನೂತನ ಅಧ್ಯಾಯ ಪ್ರಾರಂಭವಾಗಬೇಕಿದೆ. ಅದು ಸತ್ಯ ಹಾಗೂ ಅಹಿಂಸಾಧಾರಿತ ಸಮಾಜದ ಸಾಧನಗಳಾಗಿ ಕೆಲಸ ಮಾಡುವಂಥದು. ಏಕೆಂದರೆ ಗಾಂಧೀಜಿಯ ಪ್ರಕಾರ ಜಗತ್ತಿನಲ್ಲಿ ಸ್ನೇಹ ಮತ್ತು ಶಾಂತಿಯನ್ನು ಸ್ಥಾಪಿಸಬೇಕಾದಂಥ ಉದಾತ್ತ ಧ್ಯೇಯವನ್ನು ಭಾರತ ಹೊಂದಿದೆ. ಚರಕಾ ಅಹಿಂಸೆಯ ಸಂಕೇತ. ೧೯೨೧ ರಲ್ಲಿಯೇ ಚರಕಕ್ಕೆ ರಾಷ್ಟ್ರ ಬಾವುಟದಲ್ಲಿ ಗೌರವಸ್ಥಾನ ದೊರೆಯಿತು. ಆದರೆ ದೇಶ ಅಹಿಂಸೆಯಾಚರಣೆಯ ವಿಷಯವನ್ನು ಮರೆಯಿತು. ೧೯೪೭ ರಲ್ಲಿ ದೇಶ ಅನಿವಾರ್ಯತೆಯ ರಾಜಕೀಯ ಕಾರಣದಿಂದಾಗಿ ಇಬ್ಭಾಗವಾದಾಗ ಹಿಂಸೆ ತನ್ನೆಲ್ಲ ನಗ್ನತೆಯೊಂದಿಗೆ ದೇಶದಲ್ಲಿ ಅಟ್ಟಹಾಸ ಮೆರೆಯಿತು. ಗಾಂಧೀಜಿಯವರ ಆತ್ಮಕ್ಕೆ ಎಲ್ಲಿಲ್ಲದಷ್ಟು ನೋವಾಯಿತು. ದೇಶದಲ್ಲಿ ಅವರು ಒಬ್ಬಂಟಿಗರಾದರು. ೧೦೦ ವರ್ಷ ಬದುಕುವ ತಮ್ಮ ಇಚ್ಛೆಯನ್ನು ಬಿಟ್ಟು ತಕ್ಷಣದ ಸಾವಿಗಾಗಿ ಪ್ರಾರ್ಥಿಸಿದರು. ಸ್ವಾತಂತ್ರ್ಯ ಬಂದು ಅರವತ್ತು ಮೂರು ವರ್ಷಗಳ ನಂತರ ಬಹಳಷ್ಟು ಸೈನ್ಯ ಪಡೆ, ಪೋಲಿಸ್ ಪಡೆ ಮತ್ತು ಆಧುನಿಕ ಶಸ್ತ್ರಾಸ್ತ್ರಗಳನ್ನು ದೇಶ ಹೊಂದಿದ್ದರೂ ದೇಶದಾದ್ಯಂತ ಹಿಂಸಾಚಾರ ಅವ್ಯಾಹತವಾಗಿ ನಡೆಯುತ್ತಲೇ ಇದೆ. ದೇಶದ ನಾಗರಿಕರಲ್ಲಿ ಅಹಿಂಸೆಯ ಮೌಲ್ಯವನ್ನು ಸ್ಥಾಪಿಸುವುದಕ್ಕಾಗಿ ದೇಶದ ನಾಯಕರೆಲ್ಲರೂ, ಸಂಘ ಸಂಸ್ಥೆಗಳೂ, ಶಿಕ್ಷಣ ಸಂಸ್ಥೆಗಳೂ ವಿಫಲವಾಗಿವೆ. ಅಲ್ಲದೆ ಇಂದಿನ ಅತಿ ಸಂಕೀರ್ಣತೆಯಿಂದ ಕೂಡಿದ ತಂತ್ರಜ್ಞಾನ, ಆಡಳಿತ ಕೇಂದ್ರೀಕರಣ, ಅಸಮಾನ ಆರ್ಥಿಕ ಅಭಿವೃದ್ಧಿ ಇತ್ಯಾದಿಗಳೆಲ್ಲವೂ ಹಿಂಸಾಚಾರವನ್ನು ಪ್ರವೃದ್ಧಗೊಳಿಸಲು ಕಾರಣವಾಗಿವೆ. ಇಂಥ ಪರಿಸ್ಥಿತಿಯಲ್ಲಿ ಗಾಂಧೀಜಿಯವರು ಅಹಿಂಸೆ, ವಿಕೇಂದ್ರೀಕರಣ ಮತ್ತು ಹಣದ ವಿಕೇಂದ್ರೀಕೃತ ಹಂಚಿಕೆಯ ಸಾಧನವನ್ನಾಗಿ ದೇಶಕ್ಕೆ ಕೊಡುಗೆಯಾಗಿ ಕೊಟ್ಟಿದ್ದ ಚರಕವನ್ನು ಪುನಃ ಸಮರೋಪಾದಿಯಲ್ಲಿ ಉಪಯೋಗಕ್ಕೆ ಬರುವಂತೆ ಮಾಡಬೇಕಿದೆ.

ದೇಶಕ್ಕೆ ಸ್ವಾತಂತ್ರ್ಯ ಬಂದಿತೆ ಹೊರತು ಸ್ವರಾಜ್ಯ ಬರಲಿಲ್ಲ. ಅಂದರೆ ರಾಜಕೀಯವಾಗಿಯೂ, ಆರ್ಥಿಕವಾಗಿಯೂ ದೇಶ ಪರಾತಂತ್ರ್ಯ ಕಡೆಗೆ ಸಾಗಿದೆ.

ದೇಶ ನಿಜವಾದ ಅರ್ಥದಲ್ಲಿ ಸರ್ವತಂತ್ರ ಸ್ವತಂತ್ರ ಪ್ರಜಾಸತ್ತಾತ್ಮಕ ಸಮಾಜವಾದಿ ಗಣರಾಜ್ಯವಾಗಬೇಕಿದ್ದರೆ ಭಾರತದ ಏಳೆಂಟು ಲಕ್ಷ ಗ್ರಾಮಗಳೂ ರಾಷ್ಟ್ರ ಜೀವನದ ಪ್ರಮುಖ ಘಟಕಗಳಾಗಬೇಕು. ಈ ಉದ್ದೇಶ್ಯ ನೆರವೇರಬೇಕಾದರೆ ಖಾದಿ ಮತ್ತು ಚರಕಾ ಉಳಿಯಲೇಬೇಕು.

* * *

ಸಂಗೀತ ಕಲಾವಿದರು – ೧

ವೀಣಾ ವಿದೂಷಿ ಶ್ರೀಮತಿ ಎಸ್. ರಾಜಮ್

ಬಾಲ್ಯ ಪ್ರತಿಭೆಯಾಗಿ ತಮ್ಮ ಸಂಗೀತ ಜೀವನ ವೃತ್ತಿಯನ್ನು ಪ್ರಾರಂಭಿಸಿದ ಶ್ರೀಮತಿ ಎಸ್. ರಾಜಮ್‌ರವರು ತಮ್ಮ ಕಳೆದ ೫೦ ವರ್ಷಗಳ ಶ್ರೇಷ್ಠ ಪರಿಣಿತಿಯನ್ನು ಪಡೆದ ಏಕ ವ್ಯಕ್ತಿ ವೀಣಾವಾದಕರಾಗಿ ಅದ್ವೀತಿಯ ಸ್ಥಾನವನ್ನು ಪಡೆದಿದ್ದಾರೆ. ವೀಣೆಯ ಮೇಲೆ ಗಾಯಕಿ ಪ್ರಕಾರವನ್ನು ಪರಿಚಯಿಸುವುದರಲ್ಲಿ ಅಗ್ರಣಿ ಆಗಿರುವ ಡಾ. ರಾಜಮ್ ಮತ್ತು "ಗಾಯಕಿ ಅಂಗ" ಎಂಬುವು ಇಂದಿನ ಸಂಗೀತ ಕ್ಷೇತ್ರದಲ್ಲಿ ಪರ್ಯಾಯವಾಚಕ ಶಬ್ದಗಳಾಗಿವೆ.

ಅನೇಕ ತಲೆಮಾರುಗಳವರೆಗೆ ಶ್ರೇಷ್ಠ ಸಂಗೀತದ ಅಭಿವೃದ್ಧಿಗೆ ಅರ್ಪಿಸಿಕೊಂಡಿದ್ದ ಕುಟುಂಬದಲ್ಲಿ ಜನಿಸಿದ ರಾಜಮ್ ತಮ್ಮ ಸುವಿಖ್ಯಾತ ತಂದೆ ದಿ॥ ವಿದ್ವಾನ್ ಶ್ರೀ ಎ. ನಾರಾಯಣ ಅಯ್ಯರ್‌ರವರ ಬಳಿ ವೀಣೆ ನುಡಿಸುವ ಜ್ಞಾನವನ್ನು ಕಠಿಣ ಪರಿಶ್ರಮದಿಂದ ಪಡೆದರು. ಆನಂತರ ಅವರು ಹಿಂದೂಸ್ತಾನಿ ಸಂಗೀತದ ಸಾಮ್ರಾಟರಾಗಿದ್ದ ದಿ॥ ಸಂಗೀತ ಮಾರ್ತಾಂಡ ಪಂಡಿತ್ ಓಂಕಾರನಾಥ ಠಾಗೂರ್ ಅವರ ಬಳಿ ದೀರ್ಘಕಾಲದ ಪರಿಶ್ರಮಪೂರ್ಣ ಶಿಕ್ಷಣವನ್ನು ಪಡೆದರು. ವೀಣೆಯನ್ನು ನುಡಿಸುವುದರಲ್ಲಿ ಅತ್ಯದ್ಭುತ ನೈಪುಣ್ಯತೆ ಮತ್ತು "ಸ್ವರ"ದ ಸೂಕ್ಷ್ಮ ಗ್ರಹಿಕೆಯ ಬಲದಿಂದ ಅವರು ತಮ್ಮ ಕಛೇರಿಗಳನ್ನು ತೀವ್ರತಮವಾದ ಸಂಗೀತಮಯ ಅಭಿವ್ಯಕ್ತಿ ಮತ್ತು ಸಹಜ ಸೌಂದರ್ಯದಿಂದ ಪರಿಪೂರ್ಣವಾಗಿ ನಡೆಸುತ್ತಾರೆ. ಮತ್ತು ತನ್ಮೂಲಕ ತಮ್ಮ ಗುರುಗಳ ಆತ್ಮಿಕ ಸ್ಮರಣೆಗಳನ್ನು ಪ್ರಕಟ ಪಡಿಸುವುದರಲ್ಲಿ ಸಮರ್ಥರಾಗುತ್ತಾರೆ.

ಪ್ರತಿಷ್ಠಿತ ಪದ್ಮಶ್ರೀ, ಪದ್ಮಭೂಷಣ ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದಿರುವಂಥ ಡಾ. ರಾಜಮ್‌ರವರು ಅದ್ವಿತೀಯ ವೀಣಾವಾದಕರಾಗಿರುವರಲ್ಲದೆ ಕುಶಾಗ್ರಮತಿಯ ಶಿಕ್ಷಣತಜ್ಞರೂ ಆಗಿದ್ದಾರೆ.

ಅನುಭವಶಾಲಿ ದಿ॥ ಪಂಡಿತ್ ಮಹಾದೇವ ಪ್ರಸಾದ್ ಮಿಶ್ರಾರವರಲ್ಲಿ ತರಬೇತಿ ಪಡೆದು ಟುಮರಿ ಪದ್ಧತಿಯ ತಜ್ಞರಾಗಿದ್ದಾರೆ.

ಸಂಗ್ರಹ : ಸು. ಕೌ. (ಮುಂದುವರಿಯುವುದು)

ಭಾಷೆಗಳು ಸೃಷ್ಟಿಸುತ್ತಿರುವ ಪ್ರಶ್ನೆಗಳು

– *ಎ.ಎಸ್. ಲಕ್ಷ್ಮೀನಾರಾಯಣ*

ಯಾವುದೇ ಭಾಷೆಗೆ ನಾಲ್ಕು ಬಗೆಯ ಆಯಾಮಗಳಿವೆ. ಒಂದು–ಜನಪದರ ಆಡುನುಡಿ (ಮಾತೃ ಭಾಷೆ). ಎರಡು–ಸ್ಥಳೀಯರು, ಹೊರಗಿನವರು ಅಥವಾ ಕೊಟ್ಟು ಕೊಳ್ಳುವವರ ಮಧ್ಯದ ವ್ಯವಹಾರಕ್ಕಾಗಿ ಬಳಸುವ ವಾಣಿಜ್ಯ ನುಡಿ (ಸಂಪರ್ಕ ಭಾಷೆ). ಮೂರು–ಆಳುವವರು, ಆಳಿಸಿಕೊಳ್ಳುವವರ ನಡುವಿನ ಆಡಳಿತ ನುಡಿ (ರಾಜ ಭಾಷೆ). ನಾಲ್ಕು–ಜನಪದರ ಸಾಂಸ್ಕೃತಿಕ ಮತ್ತು ಧಾರ್ಮಿಕ ಅಗತ್ಯಗಳನ್ನು ಪೂರೈಸುವ ಇಂದಿನ ಅಥವಾ ಹಿಂದಿನ ಚರಿತ್ರೆಯ ನುಡಿ (ಸಾಂಸ್ಕೃತಿಕ ಭಾಷೆ).

ಮಾತೃ ಭಾಷೆಯಾಗಿ ನುಡಿಗೆ ಭಾವನಾತ್ಮಕ ಗುಣವಿದೆ. ತನ್ನ ತೆಕ್ಕೆಯಲ್ಲಿನ ಉಪಭಾಷೆಗಳಾಗಿ ಅನನ್ಯತೆಯನ್ನು ಉಳಿಸಿಕೊಳ್ಳುವ ಸ್ವಾತಂತ್ರ್ಯ ಪಡೆದಿದೆ. ಸ್ಥಳೀಯ ಸೊಲ್ಲಿನ ಸೊಗಡನ್ನು ಉಳಿಸಿಕೊಂಡು ಭಿನ್ನವಾಗಿದ್ದೂ ಒಟ್ಟಾರೆ ಒಂದು ಭಾಷೆಯಾಗಿ ಉಳಿದುಕೊಳ್ಳಲು ಸಾಧ್ಯವಾಗುವ ಸ್ಥಳಾವಕಾಶವಿದೆ. ನಾಮ–ಕ್ರಿಯಾ ವಿಶೇಷಣಗಳು, ನುಡಿಯಲ್ಲಿನ ಅಲಂಕಾರಗಳು, ನುಡಿಗಟ್ಟುಗಳು, ಭಾವನೆಗಳು ಮತ್ತು ಅವನ್ನು ವ್ಯಕ್ತಪಡಿಸುವ ಯಾವುದೇ ಬಗೆಯ ಮೆಚ್ಚುಗೆ, ನಿಂದನೆ, ಉದ್ಗಾರಗಳು ನೇರವಾಗಿ ಮಾತೃ ಭಾಷೆಗೆ ಸೇರಿದವು. ಆದ್ದರಿಂದ ಸಮಕಾಲೀನ ಸೃಜನಶೀಲ ಸಾಹಿತ್ಯದ ಸೃಷ್ಟಿಯೂ ಮಾತೃ ಭಾಷೆಯಲ್ಲೇ ಆಗುತ್ತದೆ. ಶಿಷ್ಟವಲ್ಲದ ಸೃಜನಶೀಲ ಸಾಹಿತ್ಯ ಜನಪದರ ಆಡುನುಡಿಯ, ಸ್ಥಳೀಯ ಸೊಲ್ಲಿನ ಸೊಗಡನ್ನು ಪ್ರಧಾನವಾಗಿ ಬಳಸಿಕೊಂಡರೆ, ಶಿಷ್ಟ ಸೃಜನಶೀಲ ಸಾಹಿತ್ಯ ಹೆಚ್ಚಾಗಿ ರಾಜನುಡಿ ಮತ್ತು ಚರಿತ್ರೆಯ ನುಡಿಗಳನ್ನು ಬಳಸುತ್ತದೆ. ಅಧ್ಯಯನ, ಚಿಂತನೆ, ಶಿಕ್ಷಣಗಳ ಭಾಷೆಯೂ ರಾಜನುಡಿ ಮತ್ತು ಚರಿತ್ರೆಯ ನುಡಿಗಳ ಪಾಕದಿಂದಲೇ ನಿರ್ಮಿತವಾಗಿದೆ.

ಒಂದು ಭಾಷೆಯ ಆಳುವ ವರ್ಗ ಮತ್ತೊಂದು ಭಾಷೆಯ ಜನರನ್ನು ಆಳುತ್ತಿದೆಯೆಂದರೆ ಅದು ತನ್ನ ಭಾಷೆಯನ್ನು ಆ ಜನರ ಮೇಲೆ ಹೇರುತ್ತಿದೆಯೆಂಬ ಅಂಶ ಮೇಲುನೋಟಕ್ಕೆ ಎದ್ದು ಕಾಣುತ್ತದೆ. ಆದರೆ ಒಂದು ಭಾಷೆ ಮತ್ತೊಂದು ಭಾಷೆಯ ಜನರ ಮೇಲೆ ಹೇರಿಕೆಯಾಗಿದ್ದಾಗ ಆ ಭಾಷೆಯ ಆಳುವ ವರ್ಗ, ಹೇರಿಸಿಕೊಂಡ ಮತ್ತೊಂದು ಭಾಷೆಯ ಜನರನ್ನು ತಮ್ಮ ಆಳ್ವಿಕೆಗೆ ಒಳಪಡಿಸಿದ್ದಾರೆಂಬ ಸತ್ಯ ಬೇಗನೆ ಗೋಚರಿಸುವುದಿಲ್ಲ.

ಭಾಷಾಭಿಮಾನ ಅಥವಾ ಅನ್ಯಭಾಷಾ ಹೇರಿಕೆಯ ವಿರೋಧ ಮೇಲುನೋಟಕ್ಕೆ ಭಾವಾತಿರೇಕದ ನಡವಳಿಕೆಯಂತೆ ಕಂಡರೂ ವಾಸ್ತವವಾಗಿ ಅದು ಜನರ ಸ್ವಾತಂತ್ರ್ಯಹರಣ ಮಾಡುವ ಆಳುವ ವರ್ಗದ ವಿರುದ್ಧ ವ್ಯಕ್ತಪಡಿಸುವ ರೀತಿಯಲ್ಲಿ ಭಾವಾತಿರೇಕವಿರಬಹುದೇ ಹೊರತು ಭಾಷಾ ವಿರೋಧವೇ ಭಾವಾತಿರೇಕವಲ್ಲ.

ಇಂಗ್ಲೀಷ್, ಇಂಗ್ಲೆಂಡಿನಲ್ಲಿ ಜನಪದರ ಭಾಷೆಯಾಗಿ, ಬ್ರಿಟಿಷರ ಭಾಷೆ. ಅದು ಸಂಪರ್ಕ ಭಾಷೆಯಾಗಿ ಬ್ರಿಟಿಷ್ ವ್ಯಾಪಾರಿಗಳ ಮೂಲಕ ಭಾರತದೊಳಕ್ಕೆ ಬಂದಿತು. ಬ್ರಿಟಿಷರು ಭಾರತವನ್ನು ಬ್ರಿಟನ್ನಿನ ಅಧಿಕೃತ ವಸಾಹತೆಂದು ಘೋಷಿಸುವ ಸಂದರ್ಭದಲ್ಲಿ ಆಳುವ ವರ್ಗದ ಭಾಷೆಯಾಗಿ ಇಂಗ್ಲಿಷ್ ಇಲ್ಲಿ ಪ್ರತಿಷ್ಠಾಪನೆಗೊಂಡಿತು. ಬ್ರಿಟಿಷರು

ಭಾರತವನ್ನು ಬಿಟ್ಟು ಹೋದಮೇಲೂ ಬ್ರಿಟಿಷ್ ಆಡಳಿತವನ್ನು ಇಂಗ್ಲಿಷ್ ಶಿಕ್ಷಣದ ಮೂಲಕ ಭಾರತದಲ್ಲಿ ಮುಂದುವರಿಸುವುದು ಸಾಧ್ಯ ಎಂಬುದು, ಮೆಕಾಲೆ ವರದಿಯ ಮುಖ್ಯ ಆಶಯ. ಹೀಗೆ, ಅದು ಭಾರತದ ಶಿಕ್ಷಣಕ್ಷೇತ್ರಕ್ಕೆ ಕಾಲಿಟ್ಟಿದ್ದು ರಾಜಕೀಯ ಕಾರಣಗಳಿಗಾಗಿ. ಬ್ರಿಟಿಷರು ಭಾರತದ ಆಳುವ ವರ್ಗ ಆಗಿರುವವರೆಗೂ ರಾಜಭಾಷೆಯಾಗಿದ್ದು, ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಮೇಲೆ ದೇಶೀಯ ಆಳುವ ವರ್ಗದ ರಾಜಭಾಷೆಯಾಗಿ ಮುಂದುವರಿಯಿತು. ಭಾರತದ ಒಕ್ಕೂಟದಲ್ಲಿ ಅದರ ಜಾಗವನ್ನು ಹಿಂದಿಯು ಆಕ್ರಮಿಸುವವರೆಗೂ ಇಂಗ್ಲಿಷ್ ರಾಜಭಾಷೆಯಾಗಿಯೇ ಮುಂದುವರಿದಿತ್ತು. ನಂತರದ ದಿನಗಳಲ್ಲಿ ಅದು ಸರಕಿನ ರೂಪ ತಾಳಿತು. ಇಂದು ಭಾರತದಲ್ಲಿ ಮಾತ್ರವಲ್ಲ ಬ್ರಿಟನ್ನಿನ ವಸಾಹತುಗಳಾಗಿದ್ದ ದೇಶಗಳಲ್ಲಿ ಮತ್ತು ಇತರ ದೇಶಗಳಲ್ಲಿಯೂ ಅತ್ಯಧಿಕವಾಗಿ ಮಾರಾಟವಾಗುವ ಭಾಷೆ.

ಭಾಷಾವಾರು ಪ್ರಾಂತ್ಯಗಳ ವಿಂಗಡನೆ, ಜನಪದರ ಕಣ್ಣೊರೆಸಲು ಆಳುವ ವರ್ಗದ ಉದ್ಯಮಿಗಳು ಮತ್ತು ಭೂಮಾಲೀಕರು ಕೈಗೊಂಡ ರಾಜಕೀಯ ಕ್ರಮ, ಆಡಳಿತಾತ್ಮಕ ಸೌಕರ್ಯ ಮತ್ತು ಭಾಷಾಭಿಮಾನದ ಅಂಶ ಅದರ ಹೊರಕವಚ ಮಾತ್ರ. ಭಾರತದ ಒಕ್ಕೂಟದಲ್ಲಿ ಹಿಂದಿಯ ಘಟಕ ಭಾಷೆಗಳು ಸಾಂವಿಧಾನಿಕವಾಗಿ ಇತರ ಭಾಷೆಗಳಂತೆ ಪ್ರಾಂತೀಯ ಭಾಷೆಗಳಾಗಿದ್ದರೂ, ಉತ್ತರಭಾರತದ ಕೈಗಾರಿಕೋದ್ಯಮಿಗಳು ಮತ್ತು ಜಮೀನ್ದಾರರೇ ಮೇಲುಗೈ ಪಡೆದ ಕೇಂದ್ರ ಸರಕಾರದ ಹಿಂದಿಯೆಂಬ ಕೃತಕ ಭಾಷೆಯನ್ನು ಸಂಯೋಜಿಸಿ ಭಾರತಾದ್ಯಂತ ಬಳಕೆಗೆ ತಂದಿತು. ಅದನ್ನು ಕೇವಲ ಸಂಪರ್ಕ ಭಾಷೆಯೆಂದು ಹೇಳುತ್ತಲೇ ಉಳಿದ ಭಾಷಿಕರ ಮೇಲೆ ಹೇರುತ್ತಾ ಇಂಗ್ಲಿಷಿನ ಜಾಗದಲ್ಲಿ ರಾಷ್ಟ್ರಭಾಷೆಯಾಗಿ ಪ್ರತಿಷ್ಠಾಪಿಸುವ ಯತ್ನದಲ್ಲಿ ಬಹುಮಟ್ಟಿಗೆ ಸಫಲವಾಯಿತು. ತಾತ್ತ್ವಿಕವಾಗಿ ಭಾರತದ ಇತರ ಭಾಷೆಗಳು ಹಿಂದಿಯಷ್ಟೇ ಸಾಂವಿಧಾನಿಕ ಮಹತ್ವ ಪಡೆದಿದ್ದರೂ, ರಾಜಕೀಯವಾಗಿ ಪ್ರಾಂತೀಯ ಭಾಷೆಗಳ ಸ್ಥಾನಕ್ಕೆ ತಳ್ಳಲ್ಪಟ್ಟವು. ಉತ್ತರ ಭಾರತದ ಉದ್ಯಮಿಗಳೊಂದಿಗೆ ಸೆಣೆಸಲು ಸಾಂಸ್ಕೃತಿಕ ಭಿನ್ನತೆ ಮತ್ತು ಭಾಷಾಭಿಮಾನವನ್ನು ಬಳಸಿದ ಹಿಂದಿಯೇತರ ರಾಜ್ಯಗಳ ಬಂಗಾಲಿ, ತಮಿಳು ಮತ್ತು ಮಲಯಾಳಿ ಉದ್ಯಮಿಗಳು ಈ ಸೆಣಸಾಟದಲ್ಲಿ ರಾಜಕೀಯವಾಗಿ ಬಲಿಷ್ಠರಾದರೂ ಹಿಂದಿಯ ಆಕ್ರಮಣವನ್ನು ಹಿಮ್ಮೆಟ್ಟಿಸಲಾಗಲಿಲ್ಲ.

ಉದ್ಯಮಿಗಳಿಗಿಂತ ಭೂಮಾಲೀಕರೆ ಹೆಚ್ಚಿನ ಸಂಖ್ಯೆಯಲ್ಲಿರುವ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳು ಕೇವಲ ಭಾವನಾತ್ಮಕ ರೂಪದ ನಾಡು-ನುಡಿಗಳ ಭಜನೆಯಾಗಿ ನಾಡಗೀತೆ, ಸಾಹಿತ್ಯ, ಸಿನಿಮಾಗಳ ಮೂಲಕ ಭಾಷಾಭಿಮಾನವನ್ನು ಉತ್ತೇಜಿಸಬೇಕಾಯಿತು. ಅವು ಏಕಕಾಲಕ್ಕೆ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳ ಮೇಲುಗೈಯನ್ನು ಎದುರಿಸಬೇಕಾಯಿತು. ಉದ್ಯೋಗಾವಕಾಶಗಳನ್ನು ಇಂಗ್ಲಿಷ್‌ಗೂ, ರಾಷ್ಟ್ರೀಯತೆಯನ್ನು ಹಿಂದಿಗೂ ಗಂಟು ಹಾಕಿದ್ದು ಉತ್ತರಭಾರತದ ಉದ್ಯಮಿ ಭೂಮಾಲೀಕ ಆಳುವ ವರ್ಗದ ರಾಜಕೀಯ. ಈ ಎರಡರಲ್ಲಿ ಯಾವುದನ್ನೂ ಬಿಡಲಾಗದೆ ತಮ್ಮ ಮಾತೃ ಭಾಷಾಭಿಮಾನವನ್ನು ಕೇವಲ ಭಾವನಾತ್ಮಕ ರೂಪದಲ್ಲಿ ಮಾತ್ರ ಪ್ರಕಟಿಸಬೇಕಾದ ಇಕ್ಕಟ್ಟಿಗೆ ಸಿಕ್ಕಿರುವ ಕನ್ನಡ ಮತ್ತು ತೆಲುಗು ಜನಪದರು ಮಾತೃ ಭಾಷಾಂಧತೆ ಮತ್ತು ನಿರಭಿಮಾನದ ಅಪಾದನೆಗಳಿಗೆ ಏಕಕಾಲಕ್ಕೆ ಗುರಿಯಾಗಬೇಕಾದ ವಿಪರ್ಯಾಸ ಒದಗಿದೆ.

ಹಿಂದಿ ಚಿತ್ರೋದ್ಯಮ, ತಮಿಳು ಮತ್ತು ಹಿಂದಿ ಉದ್ಯಮಿಗಳ ನಿಯಂತ್ರಣದಲ್ಲಿದೆ. ಟೆಲಿವಿಷನ್ನ, ಮನರಂಜನಾ ಉದ್ಯಮಗಳು ಬಹುದೇಶೀ ಉದ್ಯಮಿಗಳ ಕೈಲಿವೆ. ಹೀಗಾಗಿ ಇವು ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳನ್ನು ಉಳಿದ ಪ್ರಾಂತೀಯ ಭಾಷಿಕರ ಮೇಲೆ ಹೇರಲು ತುಂಬಾ ಸಹಾಯಕವಾಗಿವೆ. ಇಂದು ದೇಶೀಯ ಉದ್ಯಮಿಗಳು ಮತ್ತು ಭೂಮಾಲೀಕರು ಬಹುದೇಶೀಯ ವ್ಯಾಪಾರೋದ್ಯಮಿಗಳೊಂದಿಗೆ ಸೇರಿ ಸ್ಥಳೀಯ ನೆಲ-ಜಲಗಳನ್ನು ಆಕ್ರಮಿಸ ತೊಡಗಿದ್ದಾರೆ. ಈ ಕಾರಣಕ್ಕಾಗಿ ಕನ್ನಡದ ಸೊಲ್ಲು ನುಡಿ, ಸಾಹಿತ್ಯಗಳಿಗೆ ಮಾತ್ರ ಸೀಮಿತವಾಗಿದ್ದ ಭಾಷಾ ಪ್ರೇಮ ಕರ್ನಾಟಕದ ನೆಲ-ಜಲಗಳ ಕಾಳಜಿಯನ್ನೂ ಒಳಗೊಂಡು ಸಂಸ್ಕೃತಿಪ್ರೇಮವಾಗಿ ವಿಸ್ತರಿಸುತ್ತಿದೆ. ಹೀಗೆ ಸಾಹಿತ್ಯ ಚಿಂತನೆ, ಸಾಹಿತ್ಯ ವಿಮರ್ಶೆಯ ಚೌಕಟ್ಟಿನಲ್ಲಿ ಸಂಸ್ಕೃತಿ ಚಿಂತನೆ-ಸಂಸ್ಕೃತಿ ವಿಮರ್ಶೆಗಳು ಸ್ಥಳಾವಕಾಶ ಕಲ್ಪಸಿಕೊಂಡಿವೆ. ಇದನ್ನು ಅರ್ಥ ಮಾಡಿಕೊಳ್ಳಲಾಗದ, ರಾಜಕೀಯವಾಗಿ ಯೋಚಿಸದ ಜನರಿಗೆ ಈ ವಿದ್ಯಮಾನ ವಿಚಿತ್ರವಾಗಿ ಕಾಣುತ್ತಿದೆ. ಇಂಥವರು ಭಾಷಾಭಿಮಾನದ ಹೆಸರಿನಲ್ಲಿ ಬಾವುಟ, ಭುವನೇಶ್ವರಿ, ಸಾಹಿತ್ಯ ರಚನೆಕಾರರ ಸಂಕೀರ್ತನೆಯಲ್ಲಿ ಮುಳುಗಿದ್ದಾರೆ. ಈಸಂದರ್ಭದಲ್ಲೇ, ಇಂಗ್ಲಿಷ್ ಹೊಸ ರೂಪದಲ್ಲಿ, ಜಾಗತಿಕ ಬಂಡವಾಳದ, ಸಾಮ್ರಾಜ್ಯಶಾಹಿ ಉದ್ಯಮದೊಂದಿಗೆ ಬೆಸೆದುಕೊಂಡ ಅಮೆರಿಕೀಕರಣದ ಶಿಕ್ಷಣದ ಭಾಗವಾಗಿ ಭಾರತದ ಜನಸಾಮಾನ್ಯರನ್ನು ತಲುಪುತ್ತಿದೆ. ಕರ್ನಾಟಕದಲ್ಲಿ ಇಂಗ್ಲಿಷ್ ಭಾಷೆಯನ್ನು ಒಂದನೇ ತರಗತಿಯಿಂದಲೇ ಕಲಿಸಬೇಕೆ, ಬೇಡವೇ ಎಂಬ ವಿವಾದವನ್ನು ಹುಟ್ಟುಹಾಕಿದ್ದು ಸಹ ವಾಣಿಜ್ಯ ಮತ್ತು ಉದ್ಯಮ ಮೂಲದ ಭಾಷಾ ರಾಜಕೀಯವೆ. ಇದನ್ನು ವಿಶದವಾಗಿ ಅರ್ಥ ಮಾಡಿಕೊಳ್ಳದಿದ್ದರೆ ಇಂಗ್ಲಿಷ್ ನಮ್ಮ ಜನರಿಗೆ ಅಗತ್ಯವೆಂಬ ವಾದವನ್ನು ಕುರುಡಾಗಿ ಸಮರ್ಥಿಸಬೇಕಾಗುತ್ತದೆ. ಅಥವಾ ತಪ್ಪು ಕಾರಣಗಳಿಗಾಗಿ ವಿರೋಧಿಸಬೇಕಾಗುತ್ತದೆ.

ಭಾರತ ಬ್ರಿಟಿಷರ ನೇರ ವಸಾಹತು ಆಗಿದ್ದಾಗ ಅನುಷ್ಠಾನಗೊಂಡ ಇಂಗ್ಲಿಷ್ ಶಿಕ್ಷಣ, ಇಂಗ್ಲಿಷ್ ಭಾಷೆಯನ್ನು ರಾಜಕೀಯ ಅಸ್ತ್ರ ಮತ್ತು ವ್ಯಾಪಾರೀ ಸರಕನ್ನಾಗಿ ಬಳಸಿತೆಂದು ಈ ಮೊದಲೆ ಹೇಳಿದ್ದೇನೆ. ಆಗ ಕೇವಲ ಶೇ. ೨ರಿಂದ ೩ರಷ್ಟಿದ್ದ ಇಂಗ್ಲಿಷ್ ಬಲ್ಲ ಭಾರತೀಯ 'ಬಾಬು' ಗಳಿಗೆ 'ರಾಯಲ್ ಇಂಗ್ಲಿಷ್' ಆದರ್ಶಪ್ರಾಯವಾದ ಭಾಷೆಯಾಗಿತ್ತು. ಅದಕ್ಕಿಂತ ಭಿನ್ನವಾದುದೆಲ್ಲಾ ಸರಿಯಲ್ಲದ ಭಾಷೆಯೆಂದು ಅವಹೇಳನಕ್ಕೆ ಗುರಿಯಾಗುತ್ತಿತ್ತು. ದೈನಂದಿನ ಉಪಯೋಗಕ್ಕೆ ಬೇಕಾದ ಇಂಗ್ಲಿಷ್‌ನ್ನು ಕಲಿಸಲು ಕಾನ್ವೆಂಟ್‌ಗಳೂ ಸ್ಥಳೀಯರು ಇಂಗ್ಲಿಷ್ ಉಚ್ಚಾರದ ತಪ್ಪು ಏರಿಳಿತಗಳನ್ನು 'ವೈಜ್ಞಾನಿಕ'ವಾಗಿ ತಿದ್ದಲು ಇಂಗ್ಲಿಷ್ ಭಾಷಾ ಕೇಂದ್ರಗಳೂ ಇದ್ದವು. ಪದದ ಅರ್ಥವನ್ನು ಅಧಿಕಾರಯುತವಾಗಿ ತಿಳಿಸುವ ಆಕ್ಸಫರ್ಡ್ ನಿಘಂಟುಗಳು ಲಕ್ಷಗಟ್ಟಲೆ ಮಾರಾಟವಾದವು. ಇಂಗ್ಲಿಷ್ ವಿದ್ಯಾರ್ಥಿಗಳಿಗೆ ಶೇಕ್‌ಸ್ಪಿಯರ್ ಪ್ರಪಂಚದ ಶ್ರೇಷ್ಠ ಕವಿ ಎಂದು ಪರಿಚಿತನಾಗಿದ್ದ. ಬ್ರಿಟಿಷ್ ಪ್ರಭುಗಳ ಕರಾರುವಾಕ್ಕತೆ, ಸಮಯಪ್ರಜ್ಞೆ, ನ್ಯಾಯಪರಿಪಾಲನೆ, ಪ್ರಜಾಪ್ರಭುತ್ವ ಮೌಲ್ಯಗಳು, ವೇಷ-ಭೂಷಣಗಳು ಒಟ್ಟಿನಲ್ಲಿ ಇಂಗ್ಲಿಷ್ ಸಂಸ್ಕೃತಿ ಭಾರತೀಯ ಯುವಜನರಿಗೆ ಆದರ್ಶಪ್ರಾಯವಾಗಿತ್ತು.

ಸ್ವಾತಂತ್ರ್ಯ ಪೂರ್ವದ ಬ್ರಿಟಿಷ್ ಆಡಳಿತದಲ್ಲಿ ಬ್ರಿಟಿಷರು ಮಾಡಿದ ಮೊದಲ ಕೆಲಸ ಕಾಡುಗಳ ಸರ್ವೇಕ್ಷಣೆ, ರೈಲು ಹಾದಿಗಳ ನಿರ್ಮಾಣ ಮತ್ತು ಭಾರತೀಯ ಜನಾಧಾರಿತ ಕೈಗಾರಿಕೆಗಳ ಸಮಾಧಿಯ ಮೇಲೆ ಯಂತ್ರಾಧಾರಿತ ಉದ್ಯಮಗಳನ್ನು

ಸ್ಥಾಪಿಸಿದ್ದು. ಸಾಧ್ಯವಿರುವ ಭಾರತೀಯವೆಂದು ಕರೆಯಬಹುದಾದ ಎಲ್ಲಾ ಸ್ಥಳೀಯ ಸಂಸ್ಥೆಗಳನ್ನೂ ನಾಶಪಡಿಸಿ, ಇಲ್ಲವೆ ತುಳಿದು ತಮ್ಮ ವ್ಯಾಪಾರವನ್ನು ಅವರು ರಾಜಕೀಯಗೊಳಿಸಿದರು ಅಂದರೆ ಕಾನೂನುಬದ್ಧ ನಿಯಂತ್ರಣಕ್ಕೆ ಒಳಪಡಿಸಿದರು.

ಭಾರತದ ಬಲಿಷ್ಠ ಭೂಮಾಲೀಕರು ಮತ್ತು ಬ್ರಿಟಿಷ್ ಬಂಡವಾಳಶಾಹಿಯ ದೇಶೀಯ ಬಂಡವಾಳಿಗರ ಪ್ರತಿನಿಧಿಯಾಗಿ ರೂಪುಗೊಂಡ ನೆಹರೂ ನೇತೃತ್ವದ ಆಳುವ ವರ್ಗ ಗಾಂಧಿ ಪ್ರತಿಪಾದಿಸಿದ ಗ್ರಾಮಸ್ವರಾಜ್ಯದ ಕನಸನ್ನು ಬದಿಗೊತ್ತಿ 'ಸಮಾಜವಾದೀ ಘೋಷಣೆಗಳು ಮತ್ತು ವಾಣಿಜ್ಯೋದ್ಯಮ ಅಶಯಗಳ ಸಮನ್ವಯ' ವಾಗಿ ಅಲಿಪ್ತ ನೀತಿಯನ್ನು ಜಾರಿಗೆ ತಂದಿತು. ಬಂಡವಾಳಶಾಹಿ ಮೂಲದ ಅಭಿವೃದ್ಧಿ ಕಲ್ಪನೆಯನ್ನು ಸಮಾಜವಾದೀ ಯೋಜನೆಗಳಿಗೆ ಸರಿಹೊಂದಲು ಮಾಡಿದ ವ್ಯರ್ಥ ಪ್ರಯತ್ನ ಇದು. ಭಾರೀ ಅಣೆಕಟ್ಟುಗಳು, ಭೂಮಾಲೀಕರ ಹಿಡಿತದ ಆಧುನಿಕ ವ್ಯವಸಾಯ ಪದ್ಧತಿಗಳು, ಪಶ್ಚಿಮದ ಕಲ್ಪನೆಯ, ನಗರಕೇಂದ್ರಿತ, ಬೃಹತ್ ಉದ್ಯಮಗಳು ಮತ್ತು ಇಂಗ್ಲಿಷ್ ತಳಹದಿಯ ಪಾಶ್ಚಿಮಾತ್ಯ ಶಿಕ್ಷಣ, ನೆಹರೂ ಕಲ್ಪನೆಯ ಆಧುನಿಕ ಭಾರತವನ್ನು ಕಟ್ಟುವ ಸಾಧನಗಳಾದವು. ಭಾರತದ ಹಳ್ಳಿಗಾಡಿನ ರೈತಾಪಿ ಜನ ಮತ್ತು ಕೃಷಿ ಕಾರ್ಮಿಕರು, ಆಧುನಿಕ ಶಿಕ್ಷಣ ಪಡೆದ ಭೂಮಾಲೀಕರ ಹಿಡಿತದಲ್ಲೂ, ನಗರವಾಸಿಗಳು ಮತ್ತು ಕಾರ್ಮಿಕರು ದೇಶೀಯ ಬಂಡವಾಳಶಾಹಿಗಳ ಹಿಡಿತದಲ್ಲೂ ಶೋಷಿತರಾಗೇ ಮುಂದುವರಿದರು. ಈ ಬಗೆಯ ವಿಭಾಗ ಭಾರತದ ಉದ್ದಗಲಕ್ಕೂ ಏಕರೀತಿಯದಾಗಿರದೆ ಪ್ರಾದೇಶಿಕ ಭಿನ್ನತೆಯಲ್ಲಿ ಜಾತಿ–ವರ್ಗಗಳ ತಿಕ್ಕಾಟಗಳಾಗಿ ವ್ಯಕ್ತವಾಗಿದ್ದವು.

ನೆಹರೂ ಕುಟುಂಬದ ತೀವ್ರ ವಿರೋಧಿಯಾದ ಲೋಹಿಯಾ, ಮಾರ್ಕ್ಸ್‌ನ ಸಾಮ್ಯವಾದ ಮತ್ತು ಬಂಡವಾಳವಾದದ ತೇಪೆದಾರಿಕೆಯಾದ ಸಮಾಜವಾದವನ್ನು ಭಾರತದ ಸಂದರ್ಭಕ್ಕೆ ಹೊಂದಿಸಲು ಪ್ರಯತ್ನಿಸಿದರು. ಗಾಂಧಿವಾದದ ಸಾಧನ ಶುದ್ಧತೆ ಮತ್ತು ಅಹಿಂಸಾಮಾರ್ಗ, ಸಮಾಜವಾದದ ಸಾಮಾಜಿಕ ಬದ್ಧತೆ ಹಾಗೂ ಲೋಕಕಲ್ಯಾಣದ ಆಶಯಗಳನ್ನು ಮರುತೇಪೆ ಹಾಕಿ, ಜಾತಿ–ವರ್ಗ, ನಗರ–ಹಳ್ಳಿ, ಶಿಕ್ಷಿತ–ಅಶಿಕ್ಷಿತ, ಮೇಲ್ಜಾತಿ–ಕೆಳಜಾತಿ ಮುಂತಾಗಿ ಭಾಗಕ್ರಮಗಳ ಮೂಲಕ ನೆಹರೂ ಆರ್ಥಿಕತೆಯನ್ನು ವಿರೋಧಿಸಿದರು. ಭೂಒಡೆತನ, ಶಿಕ್ಷಣ, ಉದ್ಯೋಗ ಮತ್ತು ಸಾಂಸ್ಕೃತಿಕ ವಲಯಗಳ ಮೇಲೆ ಮೇಲ್ಜಾತಿಗಳ ಜನರು ಮತ್ತು ಭೂಮಾಲೀಕರಿಗಿದ್ದ ಹಿಡಿತವನ್ನು ಸಡಿಲಗೊಳಿಸಲು ಮಧ್ಯಮ ಜಾತಿಗಳ ಜನ ಮತ್ತು ಸಣ್ಣ ಹಿಡುವಳಿದಾರರ ಒಂದು ಬಣ, ಲೋಹಿಯಾರವರ ಆಲೋಚನ ಕ್ರಮವನ್ನು ಕರ್ನಾಟಕದಲ್ಲಿ ಸ್ಥಳೀಯ ಮಾರ್ಪಾಡುಗಳೊಂದಿಗೆ ಬಳಸಿಕೊಂಡರು.

ಹೀಗಿದ್ದರೂ ಬ್ರಿಟಿಷರ ರಾಜಭಾಷೆಯಾದ ಇಂಗ್ಲಿಷ್, ಭಾರತದ ರಾಜಭಾಷೆ–ಸಂಪರ್ಕ ಭಾಷೆಯಾಗಿ ಮುಂದುವರಿಯಿತು. ಕ್ರಮೇಣ ಭಾರತದ ಭಾಷೆಗಳಲ್ಲೊಂದಾಯಿತು. ಬಂಡವಾಳಶಾಹಿ ಆರ್ಥಿಕತೆಯನ್ನು ವಿರೋಧಿಸದೆ ಬಂಡವಾಳಶಾಹಿಯೊಳಗೇ ಅಭಿವೃದ್ಧಿ ಹೊಂದಲು ಬಯಸುವ ಬಡವರಿಗೆ, ಕೆಳಜಾತಿಯ ಜನರಿಗೆ ಅದು ಬಡತನದಿಂದ, ಜಾತಿಯ ಅವಮಾನಗಳಿಂದ ಬಿಡುಗಡೆ ಕೊಡುವ ಭಾಷೆಯಾಯಿತು. ದಾಸ್ಯದ ಭಾಷೆಯಾಗಿದ್ದೂ ಕುವೆಂಪು ಅವರಂಥ ಶೂದ್ರ ಲೇಖಕರಿಗೆ ಇಂಗ್ಲಿಷ್ ಬಿಡುಗಡೆಯ ಭಾಷೆಯಾಗಿದ್ದು ಹೀಗೆ. ಜಾತಿಮೂಲದ ಅವಮಾನಗಳಿಗೆ ಪಕ್ಕಾಗಿದ್ದು, ಜತೆಗೆ ಬಡವರಾಗಿದ್ದ ದಲಿತರ ವಿಮೋಚನೆಯನ್ನು ಅಂಬೇಡ್ಕರ್ ಅಂಥವರಿಗೆ ಅವರು ಒಪ್ಪಿಕೊಂಡ ಇಂಗ್ಲಿಷ್ ಮತಾಂತರದಿಂದ ಜಾತಿಯ ಬಿಡುಗಡೆ ಸಾಧ್ಯವಾಗಲಿಲ್ಲ. ಅದಕ್ಕಾಗಿ ಅವರು ಧಾರ್ಮಿಕ

ಸಾಧನದ ಮೊರೆ ಹೋಗಬೇಕಾಯಿತು. ಅಂದರೆ ಬೌದ್ಧಮತವನ್ನು ಸ್ವೀಕರಿಸಬೇಕಾಯಿತು. ಭಾರತೀಯ ಊಳಿಗಮಾನ್ಯದ ಮತ್ತು ಬ್ರಿಟಿಷ್ ಬಂಡವಾಳಶಾಹಿಯ ಮೌಲ್ಯ ಕಲ್ಪನೆಗಳಿಂದ ಬಿಡಿಸಿಕೊಳ್ಳದ ಕುವೆಂಪು ಶ್ರೀಸಾಮಾನ್ಯ ಮತ್ತು ಮಹಾನತೆಗಳನ್ನು ಒಟ್ಟಿಗೆ ಒಪ್ಪುವ ಇಬ್ಬಂದಿತನದಲ್ಲೇ ಉಳದು ಇಂಗ್ಲಿಷ್ ಬಳಸಿದರು, ಕನ್ನಡದಲ್ಲಿ ಬರೆದರು. ಸಮಾನತೆ ಸಾಧ್ಯವಿಲ್ಲವೆಂದು ನಂಬಿದ್ದ ಅಂಬೇಡ್ಕರ್ ಜಾತಿ ಅಸಮಾನತೆಯ ವಿರುದ್ಧ ಇಂಗ್ಲಿಷ್‌ನಲ್ಲಿ ಬರೆದರು. ಸಮಾಜದಲ್ಲಿ ಮೇಲೆ ಬರಬೇಕಾದರೆ, ಅಂದರೆ, ಬಂಡವಾಳಶಾಹಿ ಅಭಿವೃದ್ಧಿ ಕಲ್ಪನೆಯ ಏಣಿಯಲ್ಲಿ ಮೇಲೇರಬೇಕಿದ್ದರೆ, ಶೂದ್ರರು ಮತ್ತು ದಲಿತರಿಗೆ ಬ್ರಿಟಿಷ್ ಮೌಲ್ಯಗಳ ಇಂಗ್ಲಿಷ್ ಅತ್ಯಗತ್ಯ ಎಂಬ ಪಾಠ ಈ ಇಬ್ಬರು ಮೇಧಾವಿಗಳ ಚಿಂತನೆಯಲ್ಲಿ ಅಂತರ್ಗತವಾಗಿದೆ.

ಆದರೆ ಸಾಮ್ರಾಜ್ಯಶಾಹಿಯಾಗಿದ್ದು. ಜಾಗತಿಕ ಯುದ್ಧಗಳು ಮತ್ತು ಸಮಾಜವಾದಿ ಪರಿವರ್ತನೆಗಳ ಫಲವಾಗಿ ತನ್ನ ವಸಾಹತುಗಳನ್ನು ಕಳೆದುಕೊಂಡ ಬ್ರಿಟನ್ ಅನ್ನು ನವಸಾಮ್ರಾಜ್ಯಶಾಹಿಯಾದ ಅಮೆರಿಕ ಕೆಳಕ್ಕೆ ಹಾಕಿತು. ವಿಶ್ವದ ಸ್ವಯಂ ಘೋಷಿತ ಪೋಲೀಸ್ ಆಗಿ, ತನ್ನದೆ ಆದ ಮಾದರಿಯ ಪ್ರಜಾತಂತ್ರ, ಮಾನವ ಹಕ್ಕುಗಳ ಪರಿಕಲ್ಪನೆ ಮತ್ತು ಸಾಮ್ರಾಜ್ಯಶಾಹಿ ರಾಜಕೀಯ ವ್ಯವಸ್ಥೆಯನ್ನು ಎಲ್ಲ ದೇಶಗಳೂ ಅನುಸರಿಸಬೇಕೆಂದು ಬಲಾತ್ಕರಿಸುವ ಅಮೆರಿಕ ಬಳಸುವ ಇಂಗ್ಲಿಷ್ ಕೇವಲ ವ್ಯಾಪಾರಿ ಭಾಷೆಯಲ್ಲ. ಅದು ಯುದ್ಧೋದ್ಯಮದ, ಸ್ಪರ್ಧೆ-ಶ್ರೇಣೀಕೃತ ಮೌಲ್ಯಗಳನ್ನು ಆಧರಿಸಿದ ನುಡಿಗಟ್ಟಿನ ಭಾಷೆಯನ್ನು ರಾಜಭಾಷೆಯನ್ನಾಗಿ ಇಂಗ್ಲಿಷನ್ನು ಭಾರತೀಯರ ಮೇಲೆ ಹೇರಿತ್ತು. ಅಮೆರಿಕನ್ ಇಂಗ್ಲಿಷ್ ವ್ಯಾಪಾರೋದ್ಯಮದೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಸರಕು ರೂಪದ ಭಾಷೆ. ಇದು ಹೊಸಬಗೆಯ ಸಾಮ್ರಾಜ್ಯಶಾಹಿ ಆಳುವ ವರ್ಗದ ರಾಜಭಾಷೆಯಾಗಿದೆ. ಇದರ ಮೂಲಕ ಪ್ರವೇಶ ಪಡೆಯುವ ಎಲ್ಲರಿಗೂ ಸ್ಪರ್ಧಾತ್ಮಕವಾಗಿ ಬದುಕುವ ಶಕ್ತಿ ಪ್ರಾಪ್ತವಾಗಿದೆ ಎಂಬ ಹುಸಿ ನಂಬಿಕೆಯನ್ನು ಅದು ಹುಟ್ಟಿಸಿದೆ. ಅಂದರೆ ಇಂದಿನ ಕರ್ನಾಟಕದಲ್ಲಿ ಇನ್ನೂ ರಾಜಭಾಷೆಯಾಗುವ ಪ್ರಯತ್ನದಲ್ಲೇ ಹೆಣಗುತ್ತಿರುವ ಕನ್ನಡವನ್ನು ಮತ್ತಷ್ಟು ಕೆಳಕ್ಕೆ ಹಾಕಿ ಅಮೆರಿಕನ್ ಇಂಗ್ಲಿಷನ್ನು ಪ್ರತಿಷ್ಠಾಪಿಸುವ ಪ್ರಯತ್ನಗಳು ಶಿಕ್ಷಣ ಕ್ಷೇತ್ರದಲ್ಲಿ ಪ್ರಾರಂಭವಾಗಿದೆ. ದಿನೇ ದಿನೇ ವಿಸ್ತರಿಸುತ್ತಿರುವ ಐಟಿ ಉದ್ಯಮ, ಕಂಪ್ಯೂಟರ್ ಸೇವೆಗಳು, ಶಿಕ್ಷಣೋದ್ಯಮ, ಪ್ರವಾಸೋದ್ಯಮ,ಕಾಲ್‌ಸೆಂಟರ್, ಬಿಪಿಒ, ಸೇವಾ ವ್ಯಾಪಾರ ಮುಂತಾದ ಕ್ಷೇತ್ರಗಳಲ್ಲಿ ಕರ್ನಾಟಕದ ನಗರಕೇಂದ್ರಿತ 'ಗಿರಾಕಿ'ಗಳಿಗೆ ಅಮೆರಿಕನ್ ಇಂಗ್ಲಿಷ್ ಜ್ಞಾನ ಅನಿವಾರ್ಯವಾದ ಅರ್ಹತೆಯಾಗಿ ಪರಿಣಮಿಸಿದೆ. ಭ್ರಷ್ಟಕಾರಣಗಳಿಗಾಗಿ ಈ ಕ್ಷೇತ್ರಗಳನ್ನು ವಿಸ್ತರಿಸುತ್ತಿರುವ ರಾಜಕಾರಣಿಗಳು ಬಹುರಾಷ್ಟ್ರೀಯ ಉದ್ಯಮಿಗಳೊಂದಿಗೆ ಮಾಡಿಕೊಂಡಿರುವ ಒಳ ಒಪ್ಪಂದಗಳು ಜನಪರವಲ್ಲವೆಂಬ ಸತ್ಯ ಮಧ್ಯಮವರ್ಗೀಯ ಯುವಕರಿಗೆ, ಅದರಲ್ಲೂ ಗ್ರಾಮೀಣ ಪ್ರದೇಶಗಳಿಗೆ ವಲಸೆ ಬರುತ್ತಿರುವ ಎರಡು ಮತ್ತು ಮೂರನೆಯ ತಲೆಮಾರಿನ ಸಾಕ್ಷರರಿಗೆ ಅರ್ಥವಾಗುತ್ತಿಲ್ಲ. ಜಾಗತಿಕ ಬಂಡವಾಳದ ಅವಿಭಾಜ್ಯ ಅಂಗವಾಗಿ ಶಿಕ್ಷಣೋದ್ಯಮದ ಭಾಷಾ ನೀತಿಗಳನ್ನು ರೂಪಿಸಲಾಗುತ್ತಿದೆಯೆಂಬ ಅಂಶವನ್ನು ಅರ್ಥಮಾಡಿಕೊಳ್ಳಲು ಇರಬೇಕಾದ ಭಾಷೆ ಮತ್ತು ಆಳ್ವಿಕೆಗಳ ಅಂತರ್ ಸಂಬಂಧಗಳ ರಾಜಕೀಯ ವಿಶದತೆ ಜನಸಾಮಾನ್ಯರಲ್ಲಾಗಲಿ, ಜನಪರ ಚಿಂತಕರಲ್ಲಾಗಲಿ ಕಾಣುತ್ತಿಲ್ಲ. ಜನಪ್ರಿಯ ಯೋಚನೆಯೇನೆಂದರೆ. ಜಾಗತೀಕರಣದ ದೂರಗಾಮಿ ಕೆಡುಕುಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಸದ್ಯದ ಲಾಭಗಳನ್ನು ಹೇಗೆ ಹೆಕ್ಕಿಕೊಳ್ಳಬಹುದು ಎಂಬುದು.

ಭಾರತ ಬ್ರಿಟನ್ನಿನ ವಸಾಹತಾಗುವ ಸಂದರ್ಭದಲ್ಲೂ ಬಹುಜನರ ದೃಷ್ಟಿ ಇದಕ್ಕಿಂತ ಭಿನ್ನವಾಗೇನೂ ಇರಲಿಲ್ಲ.

ಅದರಲ್ಲೂ ದಲಿತರು ಮತ್ತು ಹಿಂದುಳಿದ ಜಾತಿಯ ಜನರಿಗೆ, ಬಂಡವಾಳಶಾಹಿಯನ್ನು ವಿರೋಧಿಸದೆ, ಅಥವಾ ಅದರೊಂದಿಗೆ ಹೊಂದಾಣಿಕೆ ಮಾಡಿಕೊಂಡು, ಅಮೆರಿಕನ್ ಸಂಸ್ಕೃತಿಯ ಆರಾಧನೆಯನ್ನು ಕಲಿಸುವ, ಶ್ರೇಣೀಕೃತ ಸಮಾಜದಲ್ಲಿ ಮೇಲೇರಲು ಇರುವ ಹೊಸ ಬಗೆಯ ಸಾಧ್ಯತೆಯಾಗಿ ಇಂಗ್ಲಿಷ್ ಕಾಣಿಸುತ್ತಿದೆ.

ಶಿಕ್ಷಣದ ಹೆಸರಿನಲ್ಲಿ ನಮ್ಮ ಎಳೆಯರನ್ನು ಅವರ ಆಸೆಬುರುಕ ಪೋಷಕರನ್ನು ಬಂಡವಾಳಶಾಹಿ ಅಭಿವೃದ್ಧಿ ವರ್ತುಲದೊಳಕ್ಕೆ ಸೆಳೆಯುತ್ತಿರುವ ಅಮೆರಿಕನ್ ಇಂಗ್ಲಿಷ್, ಜಾಗತೀಕ ಬಂಡವಾಳಕ್ಕೆ ಮತ್ತು ಅದರ ದೇಸೀಯ ತಲೆಹಿಡುಕ ಪಾಲುದಾರರಿಗೆ ಗಿರಾಕಿಗಳನ್ನು ನಿರಂತರವಾಗಿ ಒದಗಿಸಬಲ್ಲ, ಅಮೆರಿಕನ್ ಜೀವನಮೌಲ್ಯ ಮತ್ತು ದೃಷ್ಟಿಕೋನಗಳನ್ನು ಜನರಲ್ಲಿ ನೆಲೆಯೂರಿಸುವ ವ್ಯಾಪಾರದ ಭಾಷೆಯಾಗಿ ಭಾರತದಲ್ಲಿ ತಳವೂರುತ್ತಿದೆ. ಅದರಲ್ಲೂ ವಿಶೇಷವಾಗಿ ಐಟಿ ಉದ್ಯಮಕ್ಕೆ ಅಧಿಕಸಂಖ್ಯೆಯಲ್ಲಿ ಕೂಲಿಗಳನ್ನು ಒದಗಿಸುತ್ತಿರುವ ತಮಿಳುನಾಡು, ಆಂಧ್ರ ಮತ್ತು ಕರ್ನಾಟಕದ ಭ್ರಷ್ಟ ರಾಜಕಾರಿಣಿಗಳು, ಕೇಂದ್ರ ಸರಕಾರ ಪ್ರತಿನಿಧಿಸುತ್ತಿರುವ ಬಂಡವಾಳಗಾರರಿಂದ ಸಿಗಬಹುದಾದ ಹಣದ ಆಸೆಗೆ ಜನಸಾಮಾನ್ಯರನ್ನು ಅಭಿವೃದ್ಧಿಯ ಹೆಸರಿನಲ್ಲಿ ವಂಚಿಸುತ್ತಿದ್ದಾರೆ.

ಭಾರತದಲ್ಲಿ ಈಗಿರುವ ನಿರುದ್ಯೋಗಿಗಳ ಸಂಖ್ಯೆಯನ್ನು ಅನುಲಕ್ಷಿಸಿ ಹೇಳಬಹುದಾದರೆ, ಉತ್ತರ ಭಾರತದ ಜನಸಾಮಾನ್ಯರು ದಕ್ಷಿಣದ ರಾಜ್ಯಗಳ ಜನರಷ್ಟು ಇಂಗ್ಲಿಷಿನ ಮೇಲೆ ಅವಲಂಬಿತವಾಗಿಲ್ಲ. ಇದಕ್ಕೆ ಕಾರಣ ಅವರು ಇಂಗ್ಲಿಷ್‌ನಲ್ಲಿ ಪ್ರಾವೀಣ್ಯವಿಲ್ಲದೆಯೂ ಉದ್ಯೋಗವನ್ನು ಪಡೆಯುವ ಅವಕಾಶಗಳನ್ನು ಹಿಂದಿನ ಯಜಮಾನಿಕೆ ಅವರಿಗೆ ಒದಗಿಸಿಕೊಟ್ಟಿದೆ. ಆದರೆ ದಕ್ಷಿಣಭಾರತದ ರಾಜ್ಯಗಳಲ್ಲಿ ಇಂಗ್ಲಿಷಿನ ಯಜಮಾನಿಕೆ ಸತತವಾಗಿ ಮುಂದುವರಿದಿರುವುದಕ್ಕೆ ನಿರ್ದಿಷ್ಟ ವಲಯಗಳಲ್ಲಿರುವ ಉದ್ಯೋಗಾವಕಾಶಗಳಿಗೂ ಇಂಗ್ಲಿಷಿಗೂ ಇರುವ ಭದ್ರ ನಂಟು ಕಾರಣ ಅದರಲ್ಲೂ ಉತ್ತರಭಾರತದ ಮತ್ತು ರಾಜ್ಯಗಳ ವ್ಯಾಪಾರೋದ್ಯಮಿಗಳು ಮತ್ತು ಪ್ರಾಂತೀಯ ಸಣ್ಣಹಿಡುವಳಿದಾರರು ತುಂಬಿರುವ ಕರ್ನಾಟಕದಲ್ಲಿ ಹಿಂದಿ ಮತ್ತು ಇಂಗ್ಲಿಷ್, ಅಥವಾ ಕಡೆಯ ಪಕ್ಷ ಇಂಗ್ಲಿಷ್‌ನ ಪ್ರಾವೀಣ್ಯವಾದರೂ ಇಲ್ಲದೆ ಉದ್ಯೋಗ ದೊರೆಯುವುದಿಲ್ಲ. ಇತರ ಭಾಷೆಗಳ ಜನ ತಮ್ಮ ತಮ್ಮಲೇ ವ್ಯವಹರಿಸುವಾಗ, ಇಂಗ್ಲಿಷ್ ಗೊತ್ತಿದ್ದರೂ, ತಮ್ಮ ಮಾತೃ ಭಾಷೆಯನ್ನೇ ಬಳಸುತ್ತಾರೆ. ಆದರೆ ಕನ್ನಡದ ಜನರೊಂದಿಗೆ ವ್ಯವಹರಿಸುವಾಗ ಮಾತ್ರ ಇಂಗ್ಲಿಷ್‌ನ್ನು ಮುಂದೆ ತರುತ್ತಾರೆ ಅಥವಾ ತಮ್ಮ ಮಾತೃಭಾಷೆಯನ್ನು ಸ್ಥಳೀಯರ ಮೇಲೆ ಹೇರುತ್ತಾರೆ.

ಇಂಥ ಪರಿಸ್ಥಿತಿಯಲ್ಲಿ ಹೊಂದಾಣಿಕೆ ಮಾಡಿಕೊಂಡು ಉದ್ಯೋಗ ಖಾತರಿ ಮಾಡಿಕೊಳ್ಳಬಯಸುವ ಜಾಣ ಕನ್ನಡಿಗರು ಇಂಗ್ಲಿಷ್ ಮತ್ತು ಅಥವಾ ಯಜಮಾನಿಕೆಯ ಭಾಷೆಯನ್ನು ಕಲಿತುಕೊಳ್ಳಲು ಹಿಂಜರಿಯುವುದಿಲ್ಲ. ಕನ್ನಡಪರ ಕಾಳಜಿಯುಳ್ಳ ಬರಹಗಾರರು, ಚಳವಳಿಗಾರರು ಮತ್ತು ಮುಂದಾಳುಗಳು ತಮ್ಮ ಮಕ್ಕಳು, ಮೊಮ್ಮಕ್ಕಳು ಉದ್ಯೋಗ ಮಾರುಕಟ್ಟೆಯಲ್ಲಿ ಇತರರೊಂದಿಗೆ ಸ್ಪರ್ಧೆಗಿಳಿಸುವಾಗ ಇಂಗ್ಲಿಷ್‌ನ ಅನಿವಾರ್ಯತೆಯನ್ನು ಅಂಗೀಕರಿಸುತ್ತಾರೆ. ತಮ್ಮ ತಮ್ಮ ಮಕ್ಕಳನ್ನು ಮಾತ್ರ ಕಾನ್ವೆಂಟ್‌ಗೆ ಕಳಿಸಿ ಬಡವರ ಮಕ್ಕಳು ಇಂಗ್ಲಿಷ್ ಪ್ರಾವೀಣ್ಯ ತಂದುಕೊಡುವ ಸವಲತ್ತುಗಳಿಂದ ವಂಚಿತರಾಗಬೇಕಾದ

ಕನ್ನಡ ಪ್ರೇಮವನ್ನು ಬೋಧಿಸುತ್ತಾರೆ ಎಂಬ ಆರೋಪ ಹೊತ್ತ ಈ ಜನರು ಮಂಡಿಸುವ ಕನ್ನಡದ ಪರ ಅಥವಾ ಇಂಗ್ಲಿಷ್‌ನ ವಿರುದ್ಧದ ಭಾವನಾತ್ಮಕ ಅಥವಾ ತಾತ್ವಿಕ ವಾದಗಳನ್ನು ಜನಸಾಮಾನ್ಯರು ತಿರಸ್ಕರಿಸುತ್ತಾರೆ ಅಥವಾ ಗುಮಾನಿಯಿಂದ ನೋಡುತ್ತಾರೆ. ಅವರ ಇಬ್ಬಂದಿತನವನ್ನ ಗೋಸುಂಬೆಯಾಟವೆಂದು ಹೀಗಳೆಯುತ್ತಾರೆ. ಇಂಗ್ಲಿಷ್ ಮಾಧ್ಯಮದ ಶಿಕ್ಷಣಕ್ಕೂ, ಇಂಗ್ಲಿಷ್ ಭಾಷೆಯನ್ನು ಮಕ್ಕಳಿಗೆ ಕಲಿಸುವುದಕ್ಕೂ ವ್ಯತ್ಯಾಸವಿದೆಯೆಂಬ ಅಂಶವನ್ನು ನಿರ್ಲಕ್ಷಿಸುತ್ತಾರೆ.

ಕರ್ನಾಟಕದಲ್ಲಿ ಶಿಕ್ಷಣನೀತಿ, ಉದ್ಯಮ ಮತ್ತು ಉದ್ಯೋಗ ಮಾರುಕಟ್ಟೆಯಲ್ಲಿ ಸ್ಥಳೀಯರಿಗೆ ಅಂದರೆ ಕನ್ನಡಿಗರಿಗೆ ಆದ್ಯತೆ ಇರಬೇಕೆಂದು ಆಗ್ರಹಿಸುವ ಜನರ ನಾಯಕತ್ವ ಕರ್ನಾಟಕದ ಸಣ್ಣ ಹಿಡುವಳಿದಾರ, ಕೃಷಿಕರ ಹಿನ್ನೆಲೆಯಿಂದ ಬಂದ ಜನರ ಕೈಲಿದೆ. ಗ್ರಾಮೀಣ ಹಿನ್ನೆಲೆಯ ಕೃಷಿ ಪರಿಸರದಿಂದ ಬರುವ ಕೆಳಜಾತಿಗಳ ಮತ್ತು ದಲಿತ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಕಬ್ಬಿಣದ ಕಡಲೆ. ವಿದ್ಯಾಭ್ಯಾಸದಲ್ಲಿ ಮುಂದೆ ಹೋಗದಂತೆ ಹಿಂದಕ್ಕೆಳೆಯುವ ತೊಡರುಗಳ ಅಡ್ಡಗಟ್ಟೆ, ಮೇಲ್ಜಾತಿಯ–ಮೇಲ್ವರ್ಗದ ವಿದ್ಯಾರ್ಥಿಗಳ ಬಗ್ಗೆ ಅಸೂಯೆ, ಮತ್ತು ತಮ್ಮ ಬಗ್ಗೆ ಕೀಳರಿಮೆಯಿಂದ ಬಳಲುವ ಯುವಜನರು ಕನ್ನಡಪರವಾದ ಭಾವನಾತ್ಮಕ ಕಾಳಜಿಗಳನ್ನು ಇಂಗ್ಲಿಷ್ ವಿರುದ್ಧದ ಭಾವನೆಗಳನ್ನು ಜನಸಾಮಾನ್ಯರಲ್ಲಿ ಹರಡಲು ಮಾತ್ರವಲ್ಲ, ಸ್ಥಳೀಯ ಪಕ್ಷ ರಾಜಕಾರಣದಲ್ಲಿ ಮೇಲೇರಲೂ ಬಳಸಿಕೊಳ್ಳುತ್ತಾರೆ. ತಮ್ಮ ಮಕ್ಕಳಿಗೆ ಉದ್ಯೋಗ ಖಾತರಿಯನ್ನು ಎಲ್ಲಕ್ಕಿಂತ ಮುಖ್ಯವೆಂದು ಸಹಜವಾಗೇ ಪರಿಗಣಿಸುವ ಜನಸಾಮಾನ್ಯರಿಗೆ ಈ ನಾಯಕರ ಮೇಲೆ ಸಹಾನುಭೂತಿಯಿದ್ದರೂ ಅವರ ಮಾತಿನ ಮೇಲೆ ನಂಬಿಕೆ ಬರುವುದಿಲ್ಲ. ಜನಸಾಮಾನ್ಯರ ಒಟ್ಟು ಹಿತಕ್ಕಿಂತ, ಜಾಗತಿಕ ಬಂಡವಾಳ ತಮ್ಮತ್ತ ಚಾಚುತ್ತಿರುವ ಲಾಭಾಂಶಗಳನ್ನು ಬಾಚಿಕೊಳ್ಳುವುದರಲ್ಲಿ ಮಾತ್ರ ಆಸಕ್ತರಾದ ನಾರಾಯಣಮೂರ್ತಿಯಂಥವರು ಇಂಗ್ಲಿಷ್‌ನ ಪರವಾಗಿ ಕೊಡುವ ಹೇಳಿಕೆಗಳು ಜನಸಾಮಾನ್ಯರಿಗೆ ಹೆಚ್ಚು ಅನುಷ್ಠಾನ ಯೋಗ್ಯವಾಗಿ ತೋರುತ್ತವೆ. ಜನಸಾಮಾನ್ಯರ ಅಘೋಷಿತ ಆಶಯಗಳಿಗೆ ಸ್ಪಂದಿಸಿದಂತೆ ಕಂಡೂ, ಜಾಗತಿಕ ಬಂಡವಾಳಿಗರ ಪ್ರಸ್ತುತ ಅಗತ್ಯಗಳನ್ನು ಪೂರೈಸಲು ಕರ್ನಾಟಕ ಸರಕಾರ ಜಾರಿಗೆ ತಂದ ಇಂಗ್ಲಿಷ್ ಪರವಾದ ಶಿಕ್ಷಣನೀತಿ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆದ ಕ್ರಮ. ಇದು ಒಂದನ್ನು ತೋರಿಸಿ ಇನ್ನೊಂದನ್ನು ಮರೆಮಾಚುವ ನಯವಂಚನೆಯೂ ಹೌದು.

ಇಂದಿನ ಶಿಕ್ಷಣೋದ್ಯಮದಲ್ಲಿ ಇಂಗ್ಲಿಷ್ ಅತ್ಯಂತ ಹೆಚ್ಚಿನ ಗಿರಾಕಿಗಳನ್ನು ಹೊಂದಿರುವ ವ್ಯಾಪಾರೀ ಸರಕು ಮತ್ತು ಜಾಗತಿಕ ಬಂಡವಾಳದ ಸಮುದಾಯ ವಿರೋಧಿ ಮೌಲ್ಯ ಪದ್ಧತಿಯನ್ನು ಜನಸಮುದಾಯದ ಖರ್ಚಿನಲ್ಲೇ ಎಳೆಯರಲ್ಲಿ ಬೇರೂರಿರುವ ಸಾಧನ. ಪ್ರಾರಂಭದಲ್ಲಿ ಸಮುದಾಯ ಶಿಕ್ಷಣವನ್ನು ಚುನಾಯಿತ ಸರಕಾರವೇ ಆಯೋಜಿಸಿ, ಸಂಘಟಿಸಿ, ನಂತರ ಹಂತಹಂತವಾಗಿ ಜಾಗತಿಕ ವ್ಯಾಪಾರಿಗಳ ಕೈಗೆ ಒಪ್ಪಿಸುವುದು. ಈಗ ಕರ್ನಾಟಕದಲ್ಲಿ ಘಟಿಸುತ್ತಿರುವ ಶೈಕ್ಷಣಿಕ ಕಾರ್ಯಯೋಜನೆ. ಜಾಗತಿಕ ಬಂಡವಾಳದ ಪಾಲುದಾರರು, ಏಜೆಂಟರು ಮತ್ತು ಫಲಾನುಭವಿಗಳೂ ಆಗಿರುವ ಆಳುವ ವರ್ಗವನ್ನು ಪ್ರತಿನಿಧಿಸುವ ಕೇಂದ್ರ ಸರಕಾರ ಇದರ ರೂವಾರಿ. ರಾಜ್ಯ ಸರಕಾರವೂ ಇದರಲ್ಲಿ ಪಾಲುದರವೆಂಬುದು ನಿಜ. ಆದರೆ ಅದಕ್ಕೆ ಆಯ್ಕೆಯ ಅವಕಾಶ ಇಲ್ಲವೆಂಬ ವಾಸ್ತವವನ್ನು ಗಮನಿಸಿದರೆ ಅದರಲ್ಲಿನ ಶಕ್ತಿಗಳು ಈ ಶಿಕ್ಷಣ ನೀತಿಯನ್ನು ತಮ್ಮ

ಬೇಳೆಯನ್ನು ಬೇಯಿಸಿಕೊಳ್ಳಲೂ ಬಳಸುತ್ತಿರುವ ಕಾರ್ಯಾಂಗದ ಪಾತ್ರವನ್ನು ವಹಿಸುತ್ತಿವೆ ಎಂಬ ಅಂಶ ಗೋಚರಿಸುತ್ತದೆ.

ಇಂಗ್ಲಿಷ್‌ನ್ನು ಒಂದನೆ ತರಗತಿಯಿಂದಲೇ ಭಾಷೆಯಾಗಿ ಕಲಿಸುವುದು ಭಾಷಾ ರಾಜಕೀಯದ ಒಟ್ಟು ಯೋಜನೆಯಲ್ಲಿನ ಮೊದಲ ಹಂತ. ಅದರ ಮೂಲಕ ವ್ಯಾಪಾರಿಗಳು ತಮ್ಮ ಗಿರಾಕಿಗಳ ಮೇಲೆ, ಅಂದರೆ ವಿದ್ಯಾರ್ಥಿಗಳು ಮತ್ತು ಅವರ ಖರ್ಚನ್ನು ಪಾವತಿ ಮಾಡುವ ಜನಸಾಮಾನ್ಯರ ಜೀವನ ಮೌಲ್ಯಗಳಲ್ಲಾಗುವ ಪಲ್ಲಟ ಎರಡನೆಯದು. ಕಾನ್ವೆಂಟಿನಲ್ಲಿ ತಮ್ಮ ಮಕ್ಕಳನ್ನು ಓದಿಸುವ ಕೆಳಮಧ್ಯಮವರ್ಗೀಯ ಪೋಷಕರು ಮಾತ್ರ ಮಾಡುತ್ತಿದ್ದ ಖರ್ಚುವೆಚ್ಚಗಳನ್ನು ಕಾಣುತ್ತಿದ್ದ ಕನಸುಗಳನ್ನು ಕಡ್ಡಾಯ ಇಂಗ್ಲಿಷ್ ಕಲಿಕೆ ಎಲ್ಲಾ ವರ್ಗದ ಜನರಿಗೂ ವಿಸ್ತರಿಸಿದೆ. ಇಂಗ್ಲಿಷ್ ಕಲಿಯುವ ಪ್ರತಿ ಮಗುವಿನ ಪೋಷಕರು ಇಷ್ಟವಿರಲಿ, ಇಲ್ಲದಿರಲಿ, ಗೊತ್ತಿದ್ದೊ ಗೊತ್ತಿಲ್ಲದೆಯೇ, ಶೂನಿಂದ ಹಿಡಿದು ಚೂಯಿಂಗ್ ಗಮ್‌ವರೆಗೆ ಸುಮಾರು ಹನ್ನೆರಡು ಬಗೆಯ ಉದ್ಯಮಗಳ ಗಿರಾಕಿಗಳಾಗುವುದು ಅನಿವಾರ್ಯ. ಇವು ಮೇಲುನೋಟಕ್ಕೆ ಅಲಕ್ಷ್ಯ ಮಾಡುವಷ್ಟು ಚಿಕ್ಕದಾಗಿ ಕಂಡರೂ, ಒಟ್ಟಾರೆ ವಹಿವಾಟು, ರಾಜ್ಯದ ಉದ್ದಗಲಗಳಲ್ಲಿ ಕೈಗೆ ಸಿಗುವ ಗಿರಾಕಿಗಳ ಸಂಖ್ಯೆ ಮತ್ತು ಲಾಭದ ಒಟ್ಟು ಮೊತ್ತದ ದೃಷ್ಟಿಯಿಂದ ಸಣ್ಣ ಉದ್ಯಮಗಳೇನಲ್ಲ.

ದೂರಸಂಪರ್ಕ ಸಾಧನಗಳು,ಮಾಹಿತಿ ತಂತ್ರಜ್ಞಾನ ಮತ್ತು ಸಂಚಾರ-ಸಾರಿಗೆ ಉದ್ಯಮಗಳು ದಿನೇ ದಿನೆ ಹೆಚ್ಚು ಹೆಚ್ಚು ಕೃಷಿಭೂಮಿಯನ್ನು ಆಕ್ರಮಿಸಿಕೊಳ್ಳುತ್ತಾ ಆಹಾರದ ಉತ್ಪಾದನೆಯನ್ನು ಕಿರಿದುಗೊಳಿಸಿ, ಕೃಷಿಯನ್ನು ಕೇಂದ್ರೀಕೃತ, ನಿಯಂತ್ರಣಕ್ಕೆ ಒಳಪಡಿಸುತ್ತಿವೆ. ಇದರಿಂದ ಭೂಮಿಯ ಒಡೆತನದಲ್ಲಿ ತೀವ್ರತರ ಬದಲಾವಣೆಗಳಾಗಿವೆ. ರೈತರು ಆಹಾರ ಭದ್ರತೆಯಿಂದ ಹಣ ಭದ್ರತೆಯ ಕಡೆಗೆ ಹೆಚ್ಚು ಹೆಚ್ಚು ವಾಲುತ್ತಿದ್ದಾರೆ. ಇದೆಲ್ಲದರ ಪರಿಣಾಮ ಗ್ರಾಮೀಣ ಯುವಕರ ಮೇಲಾಗುತ್ತಿದ್ದ ವ್ಯವಸಾಯದ ಶ್ರಮಭರಿತ ಬದುಕಿಗಿಂತ ನಗರ ಕೇಂದ್ರಿತ ಉದ್ಯೋಗದ ಬದುಕು ಸಹಜವಾಗೇ ಅವರಿಗೆ ಹೆಚ್ಚು ಹೆಚ್ಚು ಆಕರ್ಷಕವಾಗಿ ಕಾಣಿಸುತ್ತಿದೆ. ಇದರಿಂದ ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ಶಿಕ್ಷಿತ- ಅರೆಶಿಕ್ಷಿತ ಯವಜನರ ವಲಸೆ ಹೆಚ್ಚು ಹೆಚ್ಚು ಅನಿವಾರ್ಯವಾಗಿದೆ. ನಗರ ಜೀವನಕ್ಕೆ ಹೊಂದಿಕೊಳ್ಳಲು, ನಗರ ಪ್ರದೇಶಗಳ ಶಿಕ್ಷಿತ- ಅರೆಶಿಕ್ಷಿತ ಯುವಕರೊಂದಿಗೆ ಸ್ಪರ್ಧಿಸಲು ಇಂಗ್ಲಿಷ್ ಎಂದಿಗಿಂತ ಹೆಚ್ಚು ಅಗತ್ಯವಾಗಿ ತೋರುತ್ತಿದೆ. ತನಗೆ ಸಮಾನ ಯೋಗ್ಯತೆ ಇದ್ದೂ ಇಂಗ್ಲಿಷ್‌ನ ಪ್ರಾವೀಣ್ಯತೆಯ ಅಭಾವದಿಂದಾಗಿ ನೌಕರಿ ಕೈತಪ್ಪಿಹೋದಾಗ ಯಾವ ಯುವಕ-ಯುವತಿಗೆ ತಾನೆ ಇಂಗ್ಲಿಷ್ ಅನಿವಾರ್ಯವೆನಿಸುವುದಿಲ್ಲ? ಈ ಪರಿಸ್ಥಿತಿಯನ್ನು ನಗದೀಕರಿಸಿಕೊಳ್ಳಲು ಎಲ್ಲೆಡೆ ಇಂಗ್ಲಿಷ್ ಸಂವಾದ ಕೇಂದ್ರಗಳು ಹುಟ್ಟಿಕೊಂಡಿವೆ. ಈ ಕಾರಣದಿಂದಲೂ ಎಳೆಯರು ಒಂದನೆಯ ತರಗತಿಯಿಂದಲೇ ಇಂಗ್ಲಿಷ್ ಕಲಿತರೆ ಮುಂದೆ ಅವರು ನೌಕರಿ ಪಡೆಯಲು ಕಷ್ಟಪಡಬೇಕಿಲ್ಲ ಎಂಬ ಭಾವನೆ ಜನಸಾಮಾನ್ಯರಲ್ಲಿ ಮೂಡುತ್ತಿದೆ. ಇಂಗ್ಲಿಷ್ ಕಲಿಕೆಯ ಸ್ಪರ್ಧಾ ಓಟದಲ್ಲಿ ಓಡಿ ಕೊನೆ ಮುಟ್ಟುವವರೆಷ್ಟು? ಬೀಳುವವರೆಷ್ಟು? ೨೦೨೦ರ ಹೊತ್ತಿಗೆ ಭಾರತದ ನೌಕರಿ ಮಾರುಕಟ್ಟೆಯಲ್ಲಿ ಬಿಕರಿಗೆ ಸಿಗುವ ಇಂಗ್ಲಿಷ್ ಕಲಿತ ನಿರುದ್ಯೋಗಿ ಯುವಕ-ಯುವತಿಯರ ಸಂಖ್ಯೆ ಎಷ್ಟಿರಬಹುದು? ಅವರಿಗೆ ಎಂಥಾ ನೌಕರಿ ಸಿಗಲು ಸಾಧ್ಯ? ಅಂಥ ಎಷ್ಟೋ ಜನರಿಗೆ ವ್ಯಾಪಾರೋದ್ಯಮಿಗಳು ಎಂಥ ಉದ್ಯೋಗಗಳನ್ನು ಒದಗಿಸಬಲ್ಲರು? ಈ ಪ್ರಶ್ನೆಗಳನ್ನು ಅವರು ಕೇಳುವುದೇ ಇಲ್ಲ.

* * *

(ಜನಪದ ವ್ಯಕ್ತಿ) ಡಾ. ಶರಣ್ ಪಾಟೀಲ್

ಇತ್ತೀಚಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಒಂದು ಪವಾಡವನ್ನು ಮೆರೆದ ವ್ಯಕ್ತಿ ಡಾ. ಶರಣ್ ಪಾಟೀಲ್. ಬಿಹಾರ್ ರಾಜ್ಯದ ಎರಡು ವರ್ಷದ ಲಕ್ಷ್ಮೀ ಹುಟ್ಟುವಾಗಲೇ ನಾಲ್ಕು ಕೈ ಮತ್ತು ನಾಲ್ಕು ಕಾಲುಗಳನ್ನು ಹೊಂದಿದ್ದಳು. ಅವಳ ತಂದೆ–ತಾಯಿ ತುಂಬ ಬಡವರು, ನಿರಕ್ಷರಸ್ಥರು. ಆದಾಗ್ಯೂ ಅವರು ನಿರಾಶೆ ಹೊಂದುವ ಮನೋಭಾವದವರಲ್ಲ. ವೈದ್ಯಕೀಯವಾಗಿ ಈ ಮಗುವನ್ನು ಹೇಗಾದರೂ ಮಾಡಿ ಸಾಮಾನ್ಯ ಮಗುವಿನಂತೆ ಮಾಡಬಹುದೆಂಬ ಇಚ್ಛೆ ಅವರ ಮನದಾಳದಲ್ಲಿ ಕೆಲಸ ಮಾಡುತ್ತಿತ್ತು. ಅದಕ್ಕಾಗಿ ಪ್ರಯತ್ನಿಸಿದ್ದೂ ಆಯಿತು. ಆದರೆ ಹಣಕಾಸಿನ ಅತೀವ ಮುಗ್ಗಟ್ಟು ಸರಿಯಾದ ಮಾರ್ಗದರ್ಶನದ ಕೊರತೆ, ಸಹಾನುಭೂತಿಯ ಅಭಾವ ಇವೆಲ್ಲವು ಲಕ್ಷ್ಮಿಯ ತಂದೆ–ತಾಯಿಗಳ ಮನದಾಳದ ಇಚ್ಛೆಗೆ ಅಡ್ಡಿಯಾದವು. ಆದರೆ ಎಂಥ ಕಾರ್ಮೋಡಕ್ಕೂ ಒಂದು ಬೆಳ್ಳಿಯಂಚು ಇರುವಂತೆ ಅವರ ನಿರಾಸೆಯ ಮನಸ್ಸಿನಲ್ಲಿ ಬೆಳಕನ್ನು ಮೂಡಿಸುವ ರವಿಯಂತೆ ಮೂಡಿ ಬಂದರು ಕರ್ನಾಟಕ ರಾಜ್ಯದ ಕೊಪ್ಪಳ ಜಿಲ್ಲೆಯ ಡಾ. ಶರಣ್ ಪಾಟೀಲ್. ಇಂಗ್ಲೆಂಡಿನ ಲಿವರ್‌ಪೂಲ್‌ನ ವೈದ್ಯಕೀಯ ಕಾಲೇಜಿನಲ್ಲಿ ಮೂಳೆತಜ್ಞರಾಗಿ ಕೆಲಸ ಮಾಡಿದ ಡಾ. ಪಾಟೀಲ್ ಬೆಂಗಳೂರಿನಲ್ಲಿ 'ಸ್ಪರ್ಶ' ಫೌಂಡೇಶನ್ ಎಂಬ ಸಂಸ್ಥೆ ಮತ್ತು ಆಸ್ಪತ್ರೆ ಪ್ರಾರಂಭಿಸಿದರು. ಅವರ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಓರ್ವ ಸಮಾಜಸೇವಿ ಸ್ವಯಂಸೇವಕನ ಮೂಲಕ ಬಿಹಾರ್ ರಾಜ್ಯದ ಹಳ್ಳಿಯಲ್ಲಿಯ ಈ ವಿಚಿತ್ರ ಬಾಲಕಿಯ ಬಗ್ಗೆ ಡಾ. ಪಾಟೀಲ್ ಅವರಿಗೆ ಗೊತ್ತಾಯಿತು. ಅದರೊಂದಿಗೆ ಅವರ ಮನಸ್ಸಿನಲ್ಲಿ ತಮ್ಮ ವೃತ್ತಿಯ ಕರ್ತವ್ಯ ಪ್ರಜ್ಞೆಯೂ ಜಾಗೃತವಾಯಿತು. ಆ ಪ್ರಜ್ಞೆ ಅವರನ್ನು ದೂರದ ಲಕ್ಷ್ಮಿಯ ಊರಿಗೆ ಕರೆದೊಯ್ಯಿತು. ಡಾ.ಪಾಟೀಲ್‌ರನ್ನು ಲಕ್ಷ್ಮಿಯ ತಂದೆ–ತಾಯಿ ನೋಡಿದರು; ಡಾಕ್ಟರರು ಅವರನ್ನು ನೋಡಿದರು. ಅವರ ಪರಸ್ಪರರ ನೋಟದಲ್ಲಿ ಏಳುಜನ್ಮದ ಮೈತ್ರಿ ಇರುವ ಅನುಭವವಾಯಿತು. ಲಕ್ಷ್ಮಿಯ ತಂದೆತಾಯಿಗಳಿಗೆ ಡಾಕ್ಟರರ ಮಾತಿನ ಮೇಲೆ, ಅವರ ಆತ್ಮವಿಶ್ವಾಸದ ಮೇಲೆ ನಂಬಿಕೆ ಉಂಟಾಯಿತು. ಅವರು ತಮ್ಮ ಮಗಳ ಪ್ರಾಣವನ್ನೂ, ಭವಿಷ್ಯವನ್ನೂ ಡಾ. ಶರಣ್‌ರಿಗೆ ಒಪ್ಪಿಸಲು ಸಿದ್ಧವಾದರು. ಎಲ್ಲರೂ ಬೆಂಗಳೂರಿಗೆ ಬಂದರು. ಸ್ಪರ್ಶ ಆಸ್ಪತ್ರೆಯಲ್ಲಿ ಡಾ. ಶರಣ್ ಪಾಟೀಲ್‌ರ ನೇತೃತ್ವದಲ್ಲಿ ಎಲ್ಲ ಬಗೆಯ ತಜ್ಞರ ಸಮಿತಿ ರಚಿತವಾಯಿತು. ಲಕ್ಷ್ಮಿಯ ದೇಹಕ್ಕೆ ಅಂಟಿಕೊಂಡಿದ್ದ ಹೊರವಸ್ತುವನ್ನು ತೆಗೆದುಹಾಕಿ ನಿಜವಾದ ಲಕ್ಷ್ಮಿಯನ್ನು ಎಲ್ಲ ಮಕ್ಕಳಂತೆ ಉಳಿಸಿಕೊಳ್ಳುವ ಸಂಕಲ್ಪ ತಜ್ಞರ ಕೂಲಂಕುಶ ಪರೀಕ್ಷೆಯ ನಂತರ ಹೊರಹೊಮ್ಮಿತು. ಆ ಸಮಿತಿಯಲ್ಲಿ ನರತಜ್ಞರು, ಮೂಳೆ ತಜ್ಞರು, ಪ್ಲಾಸ್ಟಿಕ್ ಸರ್ಜರಿ ತಜ್ಞರು, ಮೂರ್ಛೆ ತಜ್ಞರು, ವಿವಿಧ ಅಂಗಗಳ ತಜ್ಞರು ಇದ್ದರು. ಲಕ್ಷ್ಮಿಯು ಸ್ಪರ್ಶ ಆಸ್ಪತ್ರೆಗೆ ಸೇರಿದಾಗ ಅಪೌಷ್ಠಿಕತೆಯಿಂದ ಬಳಲುತ್ತಿದ್ದಳು; ಬೆನ್ನಮೇಲೆ ತೆವಳಿದ್ದರ ಪರಿಣಾಮವಾಗಿ ಗಾಯಗಳಾಗಿದ್ದವು. ಆದ್ದರಿಂದ ಲಕ್ಷ್ಮಿಯನ್ನು ಶಸ್ತ್ರ ಚಿಕಿತ್ಸೆಗೆ ಒಳಪಡಿಸುವ ಮುನ್ನ ಈ ಎಲ್ಲ ಸಮಸ್ಯೆಗಳನ್ನು ನಿವಾರಿಸಬೇಕಾಗಿತ್ತು. ಇಂಥ ಎಲ್ಲ ಪ್ರಾರಂಭಿಕ ಸಮಸ್ಯೆಗಳ ನಿವಾರಣೆಯಾದ ನಂತರ ಲಕ್ಷ್ಮಿಯ ಬ್ರಹ್ಮ ಲಿಖಿತವನ್ನು ಬದಲಾಯಿಸುವ ಅಸಾಧಾರಣ ಕಾರ್ಯ ಡಾ. ಶರಣ್ ಪಾಟೀಲ್‌ರ ನೇತೃತ್ವದಲ್ಲಿ ಪ್ರಾರಂಭವಾಯಿತು. ಶಸ್ತ್ರ ಕ್ರಿಯೆಗೆ ಪ್ರಾರಂಭದಲ್ಲಿ ನಲವತ್ತೈದು ಗಂಟೆ ಬೇಕಾಗಬಹುದೆಂದು ಅಂದಾಜಿಸಲಾಗಿತ್ತು. ಆದರೆ ಮಗುವಿನ ತೀರ ಎಳೆವಯಸ್ಸು ಮತ್ತು ಇತರ ವೈದ್ಯಕೀಯ ಕಾರಣಗಳನ್ನು ಗಮನದಲ್ಲಿರಿಸಿಕೊಂಡು ಆದಷ್ಟು ಕಡಿಮೆ ಅವಧಿಯಲ್ಲಿ

ಚಿಕಿತ್ಸೆ ಪೂರೈಸಲು ಪ್ರಯತ್ನಿಸಲಾಯಿತು. ಸುಮಾರು ಇಪ್ಪತ್ತೇಳು ಗಂಟೆಕಾಲ ಚಿಕಿತ್ಸೆ ನಡೆಯಿತು. ಅತ್ಯಂತ ಕುಶಲ ಹಾಗೂ ತಜ್ಞತೆ ಮತ್ತು ಪರಿಪೂರ್ಣ ಸಮನ್ವಯತೆಯಿಂದ ಶಸ್ತ್ರಚಿಕಿತ್ಸೆ ಕೊನೆಗೊಂಡಿತು. ಲಕ್ಷ್ಮೀ ಹೊಂದಿದ್ದ ಅಸ್ವಾಭಾವಿಕ ದೇಹದ ಬೆಳವಣಿಗೆಗಳನ್ನು ಬೇರ್ಪಡಿಸಿ ಅವಳನ್ನು ಎಲ್ಲ ಮಕ್ಕಳಂತೆ ಮಾಡುವ ಉದ್ದೇಶ ಯಶಸ್ವಿಯಾಗಿ ನೆರವೇರಿತು. ಸುಮಾರು ಇಪ್ಪತ್ತೈದು ಲಕ್ಷ ರುಪಾಯಿ ತಗಲುವ ಶಸ್ತ್ರಚಿಕಿತ್ಸೆ ಹಣದ ಅಪೇಕ್ಷೆ ಇಲ್ಲದೆ ನಡೆಯಿತು. ಭಾರತೀಯ ವೈದ್ಯರ ಬಗ್ಗೆ ವಿದೇಶಗಳಲ್ಲಿ ಗೌರವ ಹೆಚ್ಚಾಯಿತು; ದೇಶಿಯ ವೈದ್ಯವಲಯವೂ ಹೆಮ್ಮೆ ಪಟ್ಟಿತು. ಶಸ್ತ್ರ ಚಿಕಿತ್ಸೆಯಾದ ನಂತರ ಆತ್ಮೀಯ ತಾಯಿ ತನ್ನ ಮಗುವಿನ ಕೈ ಹಿಡಿದಾಗ ತಾಯಿ ಮತ್ತು ಮಗಳ ಮಖದ ಮೇಲೆ ಮೂಡಿದ ಸಂತೋಷವನ್ನು ಸಾಕ್ಷಾತ್ತಾಗಿ ನೋಡಿದ ಡಾ. ಶರಣ್ ಪಾಟೀಲ್‌ರ ಜನ್ಮ ಸಾರ್ಥಕವಾಯಿತು. ಅವರೇ ಹೇಳಿದಂತೆ ಒಳ್ಳೆಯ ಸಿದ್ಧತೆ ಮಾಡಿಕೊಳ್ಳದಿದ್ದಿದ್ದರೆ ಯಶಸ್ಸು ಸಿಗುತ್ತಿರಲಿಲ್ಲ. ಲಕ್ಷ್ಮೀ ತನ್ನ ತಂದೆ-ತಾಯಿಗಳಿಗೆ ದಕ್ಕುತ್ತಿರಲಿಲ್ಲ. ಡಾ. ಶರಣ್ ಪಾಟೀಲ್ ಮತ್ತು ಅವರ ಶ್ರದ್ಧಾಯುಕ್ತ ವೈದ್ಯರ ತಂಡ ದುರ್ದೈವಿ ಲಕ್ಷ್ಮಿಯನ್ನು ಅಷ್ಟ ಲಕ್ಷ್ಮಿಯನ್ನಾಗಿ ಸಮಾಜಕ್ಕೆ ಕೊಟ್ಟಿತು. – *ಸುರೇಂದ್ರ ಕೌಲಗಿ*

***

೫ನೇ ಪುಟದಿಂದ ಮುಂದುವರೆದಿದೆ.........

ಪ್ರಜ್ವಲಿಸುತ್ತಿರುವ ಭೂ ಸಮಸ್ಯೆ, ಪರಿಹಾರ ಎಂತು?

೧) ರಾಷ್ಟ್ರೀಯ ಭೂ ಪ್ರಾಧಿಕಾರದ ರಚನೆಯಾಗಬೇಕು. ಈ ಪ್ರಾಧಿಕಾರ ಭಾರತದಲ್ಲಿಯ ಭೂ ಉಪಯೋಗದ ಬಗ್ಗೆ ಸ್ಪಷ್ಟವಾದ ವಿವರವನ್ನು ಒದಗಿಸಬೇಕು;

೨) ಪುನರ್ ಹಂಚಿಕೆಗಾಗಿ ದೊರೆಯಬಹುದಾದ ಭೂಮಿಯನ್ನು ಗುರುತಿಸುವುದು ಮತ್ತು ಬಡವರ ಪರವಾಗಿರುವ ಕಾನೂನುಗಳನ್ನು ಬಲಿಷ್ಠಗೊಳಿಸುವುದು;

೩) ಭೂಮಿಗೆ ಸಂಬಂಧಿಸಿದ ಹಿಂದಿನ ಮತ್ತು ಮುಂದಿನ ಸಮಸ್ಯೆಗಳ ಇತ್ಯರ್ಥಕ್ಕೆ ಶೀಘ್ರ ತೀರ್ಪಿನ ನ್ಯಾಯಾಲಯಗಳನ್ನು ಸ್ಥಾಪಿಸಬೇಕು.

೪) ಒಂದೇ ಗವಾಕ್ಷಿಯ ಮೂಲಕ ರೈತರು ತಮ್ಮ ಭೂ ಸಮಸ್ಯೆಯನ್ನ ಸಮಯ, ಹಣ ಮತ್ತು ಶಕ್ತಿಯನ್ನು ವ್ಯಯಿಸದೆ ಪರಿಹರಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕು.

ಮೇಲ್ಕಾಣಿಸಿದ ಬೇಡಿಕೆಗಳ ಈಡೇರಿಕೆಗಾಗಿ ಭೂ ಸಮಸ್ಯೆಯ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿರುವ ರೈತರು ಹೋರಾಟಕ್ಕೆ ಸಿದ್ಧರಾಗುತ್ತಿದ್ದಾರೆ. ಈಗ ಅವರಲ್ಲಿ ಜಾಗೃತಿ ಮೂಡಿದೆ. ಕೆಲವೇ ಜನರು ರಾಜಕೀಯ ಶಕ್ತಿಯನ್ನು ಹೊಂದಿದ್ದಾರೆ; ಇನ್ನೂ ಕೆಲವೇ ಜನರು ಸೈನ್ಯ ಶಕ್ತಿಯನ್ನು ಹೊಂದಿದ್ದಾರೆ. ಆದರೆ ಎಲ್ಲರೂ ನೈತಿಕ ಶಕ್ತಿಯನ್ನು ಹೊಂದಿದ್ದಾರೆಂಬ ಮಾತು ಕಳೆದ ಹಲವಾರು ವರ್ಷಗಳಿಂದ ನಡೆದುಕೊಂಡು ಬಂದ ನೂರಾರು ಜನಪರ ಹೋರಾಟಗಳು ಸಿದ್ಧಮಾಡಿ ತೋರಿಸಿವೆ.

ಇದೆಲ್ಲಕ್ಕಿಂತ ಹೆಚ್ಚಾಗಿ "ಎಲ್ಲ ಭೂಮಿ ಗೋಪಾಲನದು" ಅಂದರೆ ಭೂಮಿಯ ಮೇಲೆ ಸಮುದಾಯದ ಒಡೆತನವಿದೆ ಎಂಬ ಮಾತನ್ನು ೧೯೫೦ನೇ ಇಸವಿಯಲ್ಲಿಯೇ ವಿನೋಬಾ ತಮ್ಮ ಹದಿನಾಲ್ಕು ವರ್ಷದ ೪೫ ಸಾವಿರ ಮೈಲಿಗಳ ಪಾದಯಾತ್ರೆಯ ಮೂಲಕ ಸಾರಿದ್ದಾರೆ. ಈಗ ರೈತರು ಮಾಡು ಇಲ್ಲವೆ ಮಡಿ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಜನಪದ ನಿಲಯದ ಅಂತರಂಗದಲ್ಲಿ ೪೯

–ಸುರೇಂದ್ರ ಕೌಲಗಿ



ಟ್ರಸ್ಟ್ ಮೇಲುಕೋಟೆಯಲ್ಲಿ ಕೈಗೊಂಡ ಅನೇಕ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಯುವಕರ ಸಂಘಟನೆಯ ಕಾರ್ಯಕ್ರಮವೂ ಒಂದಾಗಿತ್ತು. ಸರ್ವೋದಯದ ಕೆಲಸಕ್ಕೆ ಯುವಕರನ್ನು ತೊಡಗಿಸಬೇಕೆಂಬುದು ಒಂದು ಪ್ರಧಾನ ಇಚ್ಛೆಯಾಗಿತ್ತು. ಅಲ್ಲದೆ ಉತ್ತರ ಭಾರತದಲ್ಲಿ ಅಲ್ಲಲ್ಲಿ ಕೆಲ ಯುವ ಸಂಘಟನೆಗಳು ಸರ್ವೋದಯ ವಿಚಾರಕ್ಕಾಗಿ ಕೆಲಸ ಮಾಡುತ್ತಲಿದ್ದವು. ಸ್ವತಃ ಜಯಪ್ರಕಾಶ ನಾರಾಯಣರು ತಮ್ಮ ಜೀವಿತ ಕಾಲದಲ್ಲಿ ಶಾಂತಿಸೇನೆ ಎಂಬ ಸಂಘಟನೆಯನ್ನು ಪ್ರಾರಂಭಿಸಿದ್ದರು. ಗಾಂಧೀಜಿಯವರು ಕೂಡ ತಮ್ಮ ಸ್ವತಂತ್ರ್ಯ ಆಂದೋಲನದಲ್ಲಿ ಯುವಕರನ್ನು ಬಹುವಾಗಿ ತೊಡಗಿಸಲು ಪ್ರಯತ್ನಿಸಿದ್ದರು. ಸಮಾಜವಾದಿ ಮತ್ತು ಸಾಮ್ಯವಾದಿ ನಾಯಕರು ಕೂಡ ತಮ್ಮ ವಾದಗಳ ಈಡೇರಿಕೆಗಾಗಿ ಯುವಕರನ್ನು ಸಂಘಟಿಸುವ ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದಾರೆ. ಅದೇ ರೀತಿ ದೇಶದಲ್ಲಿಯ ಕೆಲ ಕೋಮು ಸಂಘಟನೆಗಳು ಕೂಡ ಯುವಶಕ್ತಿಯನ್ನು ಬಳಸಿಕೊಳ್ಳಲು ಪ್ರಯತ್ನಿಸಿವೆ. ಇಂಥ ಒಂದು ಪರಂಪರೆಯ ಪ್ರಯತ್ನವಾಗಿ ಮೇಲುಕೋಟೆಯಲ್ಲಿ ಯುವ ಸಂಘಟನೆಯ ಪ್ರಯತ್ನವನ್ನು ಸರ್ವೋದಯದ ವಿಚಾರದ ದೃಷ್ಟಿಯಿಂದ ೧೯೭೩-೭೪ ರಲ್ಲಿ ಮಾಡಲು ಪ್ರಯತ್ನಿಸಲಾಯಿತು. ಆ ಸಮಯದಲ್ಲಿ ಮೇಲುಕೋಟೆಯಲ್ಲಿದ್ದ ಕೆಲ ಯುವಕರನ್ನು ಸಂಪರ್ಕಿಸಿ ಗ್ರಾಮದಲ್ಲಿ ಯುವ ಸಂಘಟನೆಯ ಮಹತ್ವವನ್ನು ತಿಳಿಸಲಾಯಿತು. ಅದಕ್ಕೆ ಹಲವಾರು ಯುವಕರು ತಮ್ಮ ಸಮ್ಮತಿಯನ್ನು ಕೊಟ್ಟರು. ಅದರ ಫಲವಾಗಿ 'ಯುವಕ ಹಿತ ಕೇಂದ್ರ' ಎಂಬ ಸಂಘಟನೆಯನ್ನು ಪ್ರಾರಂಭಿಸಲಾಯಿತು. ಯುವ ಸಂಘಟನೆಯೆಂಬ ಹೆಸರಿನಲ್ಲಿ ಹಿತ ಎಂಬ ಶಬ್ದವನ್ನು ವಿಶೇಷ ಕಾರಣಕ್ಕಾಗಿ ಸೇರಿಸಲಾಯಿತು. ಯುವಕರು ಸಾಮಾನ್ಯವಾಗಿ ಭಾವುಕರು. ಯಾವುದೇ ಒಂದು ಚಳುವಳಿಯ ಗಾಳಿ ಬೀಸಿದಾಗ ಅದರೊಂದಿಗೆ ತೂರಿಕೊಂಡು ಹೋಗುವ ಸ್ವಭಾವದವರು. ಪ್ರಚಲಿತವಿರುವ ಪ್ರತಿಯೊಂದು ವಾದವೂ ಯುವಕರ ಹಿತವನ್ನು ಕುರಿತು ಮಾತನಾಡುತ್ತವೆ. ಆದರೆ ಯುವಕರ ಹಿತ ನಿಜವಾಗಿಯೂ ಯಾವ ವಾದದಲ್ಲಿ ಅಥವಾ ವಿಚಾರದಲ್ಲಿದೆ ಎಂಬುದನ್ನು ತಿಳಿಯುವ ಪ್ರಯತ್ನವನ್ನು ಸಾಮಾನ್ಯವಾಗಿ ಯುವಕರು ಮಾಡುವುದಿಲ್ಲ. ಅಲ್ಲದೆ ಆ ಎಲ್ಲ ವಾದಗಳು ಯುವಶಕ್ತಿಯನ್ನು ತಮ್ಮ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುತ್ತವೆಯೇ ಹೊರತು ದೇಶದ ನಿಜವಾದ ಏಳಿಗೆಯಲ್ಲಿ ಯುವಕರನ್ನು ತೊಡಗಿಸುವ ಬಗ್ಗೆ ಅಷ್ಟೊಂದು ಕಾಳಜಿ ವಹಿಸುವುದಿಲ್ಲ. ಆದ್ದರಿಂದ ಮೇಲುಕೋಟೆಯಲ್ಲಿ ಸಂಘಟಿತವಾಗುವ ಯುವ ಸಂಘಟನೆ ಕೇವಲ ಯುವಕರ ದುಡಿಮೆಯನ್ನು ಮಾತ್ರ ಅಪೇಕ್ಷಿಸದೆ ಯುವಕರೆ ಸ್ವತಃ ತಮ್ಮ ಹಿತವನ್ನು ಕಾಪಾಡಿಕೊಳ್ಳುವಂತೆ ಅವರಲ್ಲಿ ವೈಚಾರಿಕ ಮತ್ತು ಸಂಘಟನಾತ್ಮಕ ಜಾಗೃತಿಯನ್ನು ಮೂಡಿಸಬೇಕು ಮತ್ತು ಯುವಕರ ಶೋಷಣೆ ಆಗಬಾರದು ಎಂಬೆಲ್ಲ ವಿಚಾರದಿಂದ ಕೇವಲ ಯುವ ಸಂಘಟನೆ ಎಂಬ ನಾಮಧೇಯದ ಬದಲಾಗಿ 'ಯುವಕ ಹಿತ ಕೇಂದ್ರ' ಎಂದು ಹೆಸರಿಸಲಾಯಿತು. ಇಂದಿಗೂ ಕೂಡ ಯುವ ಸಂಘಟನೆಗಳಲ್ಲಿ ಹಿತವೆಂಬ ಶಬ್ದ ಇಲ್ಲದೆ ಇರುವುದನ್ನೇ ಕಾಣುತ್ತೇವೆ.

ಮೇಲುಕೋಟೆಯಲ್ಲಿ ಸಂಘಟಿತವಾಗುವ ಯುವ ಸಂಘಟನೆ ಜನಪದ ಸೇವಾ ಟ್ರಸ್ಟ್ ನೇತೃತ್ವದಲ್ಲಿ ಆಗುತ್ತಿದ್ದುದರಿಂದ ಸಹಜವಾಗಿಯೇ ಯುವಕರ ಹಿತ ಚಿಂತನೆಯ ವಿಚಾರವೇ ಪ್ರಧಾನವಾಯಿತು. ಇಂಥ ಹಿನ್ನೆಲೆಯಲ್ಲಿ ಪ್ರಾರಂಭವಾದ ಯುವಕ ಹಿತ ಕೇಂದ್ರದ ಮುಖ್ಯ ಕಾರ್ಯಕ್ರಮ ಮೊದಲನೆಯದಾಗಿ ಒಂದು ಗ್ರಂಥಾಲಯವನ್ನು ಪ್ರಾರಂಭಿಸುವುದಾಗಿತ್ತು. ಈ ಗ್ರಂಥಾಲಯಕ್ಕಾಗಿ ಈಗಾಗಲೆ ಟ್ರಸ್ಟಿನಲ್ಲಿ ಸಂಗ್ರಹವಾಗಿದ್ದ ಕೆಲವು ಪುಸ್ತಕಗಳನ್ನು ಈ ಕೇಂದ್ರಕ್ಕೆ ಕೊಡಲಾಯಿತು. ಇದರೊಂದಿಗೆ ವಯಸ್ಕರ ಶಿಕ್ಷಣ ಸಮಿತಿಯಿಂದಲೂ ಕೆಲವು ಪುಸ್ತಕಗಳು ದೊರೆತವು. ಈ ಕೇಂದ್ರದ ಎರಡನೆಯ ಕಾರ್ಯಕ್ರಮವಾಗಿ ಸೇವಾದಳ ಚಟುವಟಿಕೆಗಳು ಕೂಡ ಇದ್ದವು. ಅಂದು ಪ್ರಾರಂಭವಾದ ಈ ಯುವ ಸಂಘಟನೆಯಲ್ಲಿ ವಿಶೇಷವಾಗಿ ಪಾಲ್ಗೊಂಡಿದ್ದ ಯುವಕರು ಇಂದಿಗೂ ಕೂಡ ಮೇಲುಕೋಟೆಯಲ್ಲಿದ್ದಾರೆ. ಅವರಲ್ಲಿಯ ಕೆಲವರ ಹೆಸರನ್ನು ಇಲ್ಲಿ ಸ್ಮರಿಸುವುದು ಉಚಿತವೆನಿಸುತ್ತದೆ. ಮೇ.ಹ.ಪ್ರಕಾಶ್, ಬಿ.ಟಿ.ಶ್ರೀನಿವಾಸ್, ಜಯಪ್ರಕಾಶ್ ನಾರಾಯಣ್, ತಿಮ್ಮಯ್ಯ, ವೆಂಕಟಾಚಾರ್, ಸೂರಜ್, ಜಯರಾಮ ಶೆಟ್ಟಿ, ಹುಣಸೂರು ಜಯರಾಮು, ಗೋವಿಂದ, ಜಿ.ವಿ.ಸಂಪತ್ತು, ಕರುಣಾಗೃಹದ ಪಿ.ಎಲ್.ಕುಮಾರಸ್ವಾಮಿ, ಕರಗಂ ನಾರಾಯಣ ಅಯ್ಯಂಗಾರ್, ರಾಮಚಂದ್ರ, ಗಂಜಾಂ ವಿಶ್ವನಾಥ್. ಈ ಯುವಕರೆಲ್ಲರೂ ಸೇರಿ ಆ ಸಮಯದಲ್ಲಿ ಮೇಲುಕೋಟೆಯಲ್ಲಿ ವೈದ್ಯಾಧಿಕಾರಿಯಾಗಿದ್ದ ಡಾ.ಸುಬ್ಬಣ್ಣನವರ ನೇತೃತ್ವದಲ್ಲಿ ನಾಟಕವನ್ನೂ ಸಹ ಅಭ್ಯಾಸ ಮಾಡಿ ಸಾರ್ವಜನಿಕವಾಗಿ ಪ್ರದರ್ಶಿಸಿದ್ದರು. ಡಾ.ಸುಬ್ಬಣ್ಣನವರಿಗೆ ರಂಗಭೂಮಿಯಲ್ಲಿ ವಿಶೇಷ ಆಸಕ್ತಿ ಇತ್ತು. ಅವರೇ ಸ್ವತಃ ಏಕಪಾತ್ರಾಭಿನಯದ ಮೂಲಕ ಕುಟುಂಬ ಯೋಜನೆಯ ವಿಚಾರವನ್ನು ಪ್ರಚಾರ ಮಾಡುತ್ತಿದ್ದರು. ಗೋಕುಲಾಷ್ಟಮಿಯ ದಿನದಂದು ಕೃಷ್ಣನ ವೇಷ ಧರಿಸಿ ಯುವಕ ಹಿತ ಕೇಂದ್ರದ ಸದಸ್ಯರೊಂದಿಗೆ ಮನೆ ಮನೆಗೂ ಹೋಗಿ ತಿಂಡಿ ಸಂಗ್ರಹ ಮಾಡುತ್ತಿದ್ದರು. ಡಾ.ಸುಬ್ಬಣ್ಣನವರು ತಮ್ಮ ಶ್ರದ್ಧಾಪೂರ್ವಕ ಕರ್ತವ್ಯದಿಂದಾಗಿಯೂ ಮತ್ತು ರಂಗಭೂಮಿಯ ಮೂಲಕ ಸಾರ್ವಜನಿಕ ಸಂಪರ್ಕವನ್ನು ಸಾಧಿಸಿದ್ದರಿಂದಾಗಿಯೂ ಅವರು ಮೇಲುಕೋಟೆಯಲ್ಲಿರುವ ಅವಧಿಯವರೆಗೂ ಆಸ್ಪತ್ರೆಯಲ್ಲಿ ರೋಗಿಗಳು ಸದಾ ತುಂಬಿರುತ್ತಿದ್ದರು. ಯುವಕ ಹಿತ ಕೇಂದ್ರದ ಮೂಲಕ ಮೇಲುಕೋಟೆ ಗ್ರಾಮದ ಮಧ್ಯದಲ್ಲಿರುವ ತೆಪ್ಪಕೊಳದ ಸ್ವಚ್ಛತೆಯನ್ನೂ ಸಹ ಶ್ರಮದಾನದ ಮೂಲಕ ಮಾಡಲಾಯಿತು. ಇದೆಲ್ಲಕ್ಕಿಂತ ಹೆಚ್ಚಾಗಿ ೧೯೬೯ ರಲ್ಲಿ ಮಹಾತ್ಮಾ ಗಾಂಧೀಜಿಯವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಮೇಲುಕೋಟೆ ಮತ್ತು ಸುತ್ತಲಿನ ಕೆಲವು ಗ್ರಾಮಗಳಲ್ಲಿ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಪಾದಯಾತ್ರೆಯಲ್ಲಿ ಯುವಕರು ತುಂಬಾ ಉತ್ಸಾಹದಿಂದ ಭಾಗವಹಿಸಿದ್ದರು. ಆದರೆ ದುರ್ದೈವದ ಸಂಗತಿಯೇನೆಂದರೆ ಈ ಯುವ ಸಂಘಟನೆಯನ್ನು ಅಂದುಕೊಂಡಿದ್ದಂತೆ ಕಟ್ಟಿ ಬೆಳಸಲಾಗಲಿಲ್ಲ. ಇದಕ್ಕೆ ಮುಖ್ಯ ಕಾರಣ ಯುವಕ ಹಿತ ಕೇಂದ್ರದಲ್ಲಿ ಯಾವ ನಿಧಿಯೂ ಇರಲಿಲ್ಲ. ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಹಣದ ಕೊರತೆ ಉಂಟಾಯಿತು. ಆದರೂ ಕೂಡ ಈ ಯುವಕ ಹಿತ ಕೇಂದ್ರ ಕೆಲವು ಯುವಕರನ್ನು ಸಾರ್ವಜನಿಕ ಕ್ಷೇತ್ರಕ್ಕೆ ತಂದಿತು. ಅದರಿಂದ ಅವರು ವ್ಯಕ್ತಿತ್ವದ ವಿಕಾಸವನ್ನು ಮಾಡಿಕೊಂಡರು. ಇಂದಿಗೂ ಕೂಡ ಯುವಕ ಹಿತ ಕೇಂದ್ರದ ಸದಸ್ಯರು ವಯಸ್ಸಿನಲ್ಲಿ ದೊಡ್ಡವರಾಗಿದ್ದರೂ ಈ ಕೇಂದ್ರದಿಂದ ತಾವು ಪಡೆದ ಪ್ರಯೋಜನವನ್ನು ನೆನೆದುಕೊಳ್ಳುತ್ತಾರೆ.

(ಮುಂದುವರೆಯುವುದು)

ಜನಪದ ಸೇವಾ ಟ್ರಸ್ಟ್ ಸಮಾಚಾರ

ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಟ್ರಸ್ಟಿನಲ್ಲಿರುವ ಮಕ್ಕಳಿಗೆ ಬಾಳೆಹಣ್ಣು ಮತ್ತು ಹಾಲನ್ನು ಹಂಚಲಾಯಿತು. ಮಕ್ಕಳ ದಿನಾಚರಣೆಯಂದು ಟ್ರಸ್ಟಿನ ಕಾರ್ಯಕಾರಿಣಿ ಸಭೆ ನಡೆಯಿತು. ಸದಸ್ಯರಾದ ಶ್ರೀ ಮಾದೇಗೌಡರು ಮಕ್ಕಳಿಗೆ ಹಾಲು ಹಂಚಿದರು. ಮಾರನೆಯ ದಿನ ಮಕ್ಕಳ ತಂದೆ–ತಾಯಿಗಳ ಸಭೆಯನ್ನು ನಡೆಸಲಾಯಿತು. ಅವರ ಮುಂದೆ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಹಿರಿಯರಿಗೆ ಮಕ್ಕಳ ಹಕ್ಕುಗಳ ಬಗ್ಗೆ ತಿಳುವಳಿಕೆ ಕೊಡಲಾಯಿತು. ಕಳೆದ ಒಂಭತ್ತು ವರ್ಷಗಳಿಂದ ನಡೆಯುತ್ತಿರುವ ಸರ್ವೋದಯ ಪಾತ್ರೆ ಆಂದೋಲನದ ಅಂಗವಾಗಿ ಆಯ್ಕೆಗೊಂಡಿರುವ ಕೆಲ ಫಲಾನುಭವಿಗಳಿಗೆ ಪಾತ್ರೆಯಲ್ಲಿ ಸಂಗ್ರಹವಾಗಿದ್ದ ಧಾನ್ಯವನ್ನು ಹಂಚಲಾಯಿತು. ಟ್ರಸ್ಟಿನಲ್ಲಿ ವಿದ್ಯಾರ್ಥಿಯಾಗಿದ್ದುಕೊಂಡು ನಂತರ ಟ್ರಸ್ಟಿನ ಕಾರ್ಯಕರ್ತನಾಗಿ ಕಳೆದ ಎರಡು ದಶಕಗಳಿಂದ ಕೆಲಸಮಾಡುತ್ತಲಿರುವ ಅಂತೋಣಿ (ಅಂದಾನಿ)ಯವರ ವಿವಾಹ ಮಹೋತ್ಸವವು ೨೦೦೭ ನವೆಂಬರ್ ೧೫ ರಂದು ನಡೆಯಿತು. ಅವರಿಗೆ ಟ್ರಸ್ಟ್ ಶುಭವನ್ನು ಕೋರಿತು. ಸಮುದಾಯದತ್ತ ಕರುಣಾಗೃಹದ ಅಂಗವಾಗಿ ಕಳೆದ ಎರಡು ವರ್ಷಗಳಿಂದ ನಡೆಯುತ್ತಿರುವ ಹಿರಿಯ ನಾಗರೀಕರ ಸಂಘಟನೆಯ ಸಭೆ ನಡೆಯಿತು. ಸಭೆಗೆ ಬಂದಿದ್ದ ಹಿರಿಯರ ಕಷ್ಟಗಳು ಮತ್ತು ತೊಂದರೆಗಳನ್ನು ವಿಚಾರಿಸಿ ಕೆಲವರಿಗೆ ಸರ್ಕಾರದ ವೃದ್ಧಾಪ್ಯ ವೇತನ ದೊರೆಯುವಂತೆ ಪ್ರಯತ್ನಿಸಲಾಯಿತು. ಟ್ರಸ್ಟಿನ ಅಭಿಮಾನಿ ಮಿತ್ರರಾದ ಬೆಂಗಳೂರಿನ ಶ್ರೀಧರ್ ಮತ್ತು ಅವರ ಕುಟುಂಬದವರು ಬಂದು ಹೋದರು. ಅದೇ ರೀತಿ ಶ್ರೀ ಹರ್ಷ ಮತ್ತು ಅವರ ಕುಟುಂಬದವರು ಬಂದರು ಹಾಗೂ ಧನ ಸಹಾಯ ಮಾಡಿದರು. ಇಂಗ್ಲೆಂಡಿನಿಂದ ಮೈಖೆಲ್ ಸ್ಟಿವನ್ಸ್ ಮತ್ತು ಸ್ಯೂ ದಂಪತಿಗಳು ಭೇಟಿ ಕೊಟ್ಟು ಟ್ರಸ್ಟಿನ ಕಾರ್ಯಕಲಾಪಗಳನ್ನು ಪರಿಚಯಿಸಿಕೊಂಡರು. ಪ್ರತಿ ವರ್ಷದಂತೆ ಮಂಡ್ಯದ ರಾಷ್ಟ್ರೋತ್ಥಾನ ಬಳಗದ ರಮೇಶ್‌ರವರು ಮಕ್ಕಳ ದಿನಾಚರಣೆಯ ಸಂದರ್ಭಕ್ಕಾಗಿ ಧನಸಹಾಯವನ್ನು ಮಾಡಿದರು. ಶ್ರೀ ಚಲುವಯ್ಯನವರು ಕುಮಾರಿ ಅಂಬಿಕಾಳ ಹೆಸರಿನಲ್ಲಿ ಧನ ಸಹಾಯ ಮಾಡಿದರು. ಬೆಂಗಳೂರಿನ ಅಥಣೀಕರ್ ದಂಪತಿಗಳು ತಮ್ಮ ವಿವಾಹದ ಸವಿ ನೆನಪಿಗಾಗಿ ಮಕ್ಕಳ ಊಟೋಪಚಾರಕ್ಕಾಗಿ ಹಣವನ್ನು ಕಳುಹಿಸಿದರು. ಬೆಂಗಳೂರಿನ ಎಂ.ಎಸ್.ನೀಲಮ್ಮ ಮತ್ತು ಕರ್ಪೂರಿ ರಾಮರಾವ್ ಎಂಬುವವರು ಅಂತಃಕರಣ ಯೋಜನೆಯ ನಿಮಿತ್ತ ಹಣವನ್ನು ಕಳುಹಿಸಿದರು. ಈ ಎಲ್ಲ ಅಭಿಮಾನಿಗಳು ಮತ್ತು ದಾನಿಗಳಿಗೆ ಟ್ರಸ್ಟ್ ಆಭಾರಿಯಾಗಿದೆ.

(ಮುಂದುವರೆಯುವುದು)

ಬಾಂಧವ್ಯ

(ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ)

೧) ಶ್ರೀ ನೀಲತ್ತಹಳ್ಳಿ ಕಸ್ತೂರಿ, ಬೆಂಗಳೂರು

೨) ಶ್ರೀ ಟಿ.ಎಸ್. ಶ್ರೀಧರ್, ಬೆಂಗಳೂರು

೩) ಶ್ರೀ ಕೆ.ಎಸ್. ಶ್ರೀನಿವಾಸಮೂರ್ತಿ, ಮೈಸೂರು

೪) ಮುಖ್ಯ ಗ್ರಂಥಪಾಲರು, ಕನ್ನಡ ವಿ.ವಿ. ಹಂಪಿ

೫) ಶ್ರೀ ಎನ್.ಕೆ. ಕೌಲಗಿ, ಮುಂಬೈ

ಈ ಬಂಧುಗಳು ತಮ್ಮ ಚಂದಾವನ್ನು ನವೀಕರಿಸಿದ್ದಕ್ಕಾಗಿ ಕೃತಜ್ಞತೆಗಳು.

ಜನಪದ ಧ್ವನಿ

ಪ್ರಚಲಿತ ವಿಷಯಗಳ ಬಗ್ಗೆ ಓದುಗರ ವಿಚಾರ ಸ್ಪಂದನದ ಪ್ರಕಟಣೆಗಾಗಿ ಈ ಅಂಕಣ ಮೀಸಲು. ಆದ್ದರಿಂದ ಜಾಗೃತ ಓದುಗರು ತಮ್ಮ ಅನಿಸಿಕೆಗಳನ್ನು ಸಂಕ್ಷಿಪ್ತವಾಗಿ ಬರೆದ ಲೇಖನಕ್ಕೆ ಸ್ವಾಗತ.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ. *–ಸಂಪಾದಕರು*

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 5⁻ 43
DTP Sanketh, Melkote. Printed a· NDIVARA Nagamangala Phone : 08236 – 298754 e-mail : janapada@yahoo.com